ಬಾಹೂರ ಬೊಮ್ಮಯ್ಯ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು

ಶ್ರೀ ಗಣಪತಿ ಗಂಗಾಧರ ಕಮತೆ

ಹಿರೇಕೊಡಿ.

ತಾ॥ ಚಿಕ್ಕೋಡಿ ಜಿ॥ ಬೆಳಗಾವಿ

ಮಾರ್ಗದರ್ಶಕರು

ಡಾ. ವ್ಹಿ. ಎಸ್. ಮಾಳಿ

ಶ್ರೀ ಬಿ. ಆರ್. ದರೂರ

ಸಂಶೋಧನ ಕೇಂದ್ರ, ಹಾರೂಗೇರಿ.

ಜಿ॥ ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೧೪

ಬಾಹೂರ ಬೊಮ್ಮಯ್ಯ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು

ಶ್ರೀ ಗಣಪತಿ ಗಂಗಾಧರ ಕಮತೆ

ಹಿರೇಕೊಡಿ.

ತಾ॥ ಚಿಕ್ಕೋಡಿ ಜಿ॥ ಬೆಳಗಾವಿ

ಮಾರ್ಗದರ್ಶಕರು

ಡಾ. ವ್ಹಿ. ಎಸ್. ಮಾಳಿ

ಶ್ರೀ ಬಿ. ಆರ್. ದರೂರ

ಸಂಶೋಧನ ಕೇಂದ್ರ, **ಹಾರೂಗೇರಿ.**

ಜಿ॥ ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೧೪

ಪ್ರಮಾಣ ಪತ್ರ

ಬಾಹೂರ ಬೊಮ್ಮಯ್ಯ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ವ್ಹಿ. ಎಸ್. ಮಾಳಿ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೨೭–೦೭–೨೦೧೪

ಶ್ರೀ ಗಣಪತಿ ಗಂಗಾಧರ ಕಮತೆ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ದೃಢೀಕರಣ ಪತ್ರ

ಶ್ರೀ ಗಣಪತಿ ಗಂಗಾಧರ ಕಮತೆ ಇವರು ಬಾಹೂರ ಬೊಮ್ಮಯ್ಯ ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೨೭-೦೭-೨೦೧೪

ಡಾ. ವ್ಹಿ. ಎಸ್. ಮಾಳಿ
ಮಾರ್ಗದರ್ಶಕರು,
ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ಅರಿಕೆ

ಹಿರೆಕೋಡಿ ಗ್ರಾಮದ ನಾನೂ ವೃತ್ತಿಯಿಂದ ಕೃಷಿಕನಾಗಿ ಪ್ರವೃತ್ತಿಯಿಂದ ಸಾಹಿತ್ಯದಲ್ಲಿ ಆಸಕ್ತನಾಗಿದ್ದೇನೆ. ನನಗೆ ೧೨ನೇ ಶತಮಾನದ ಶಿವಶರಣರ ಸಾಮಾಜಿಕ ಧಾರ್ಮಿಕ ಕ್ರಾಂತಿಯ ವಿಚಾರಗಳ ಕುರಿತು ಒಲವು ಮೂಡಿ ಆ ನಿಟ್ಟಿನಲ್ಲಿ ವಚನ ಸಾಹಿತ್ಯದಲ್ಲಿ ಬರುವ ವಚನಕಾರರ ಕುರಿತು ಸಂಶೋಧನೆ ಮಾಡಬೇಕೆಂಬ ವಿಚಾರ ಹೊಳೆಯಿತು. ಇದಕ್ಕೆ ಸ್ಫೂರ್ತಿ ನೀಡಿದವರು ಹಾರೂಗೇರಿಯ ಹಂಪಿ ವಿಶ್ವವಿದ್ಯಾಲಯದ ಶ್ರೀ ಜಿ. ಆರ್. ದರೂರ ಸಂಶೋಧನಾ ಕೇಂದ್ರ ನಿರ್ದೇಶಕರು ಖ್ಯಾತ ಪ್ರಾಧ್ಯಾಪಕರಾದ ಡಾ. ವ್ಹಿ. ಎಸ್. ಮಾಳಿ ಗುರುಗಳು ಅವರು ನನ್ನ ಈ ಮನವರಿಕೆಯನ್ನು ಅರಿತು ತಮ್ಮ ಮಾರ್ಗದರ್ಶನದಲ್ಲಿ ಎಂ.ಫಿಲ್. ಮಾಡಲಿಕ್ಕೆ ಅವಕಾಶ ಮಾಡಿ ಅವರ ಮಾರ್ಗದರ್ಶನದಂತೆ ನಾನು ಎಂ.ಫಿಲ್. ಪ್ರವೇಶವನ್ನು ಪಡೆದು ವಿಷಯಕ್ಕೆ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ತಿಳಿದುಕೊಂಡೆ. ಆಗ ನನ್ನಲ್ಲಿ ಕುತೂಹಲ ಕೆರಳಿಸಿತು. ಅಂದಿನಿಂದ ತರಗತಿಗಳಿಗೆ ಹಾಜರಾಗತೊಡಗಿದೆ. ಹೀಗೆ ನನಗೆ ಪ್ರತಿಯೊಂದು ವಿಷಯದಲ್ಲಿ ಮಾರ್ಗದರ್ಶನ ಮತ್ತು ಸಹಕಾರ ನೀಡಿದ ಡಾ. ವ್ಹಿ. ಎಸ್. ಮಾಳಿ ಗುರುಗಳಿಗೆ ಕೃತಜ್ಞತೆಗಳು ಹಾಗೆಯೇ ವಿಷಯಕ್ಕೆ ಸಂಬಂಧಿಸಿದ ಕೆಲವು ಗ್ರಂಥಗಳನ್ನೊದಗಿಸಿದ ನಿವೃತ್ತ ಪ್ರಾಧ್ಯಾಪಕರಾದ ಕಾಗವಾಡದ ಡಾ. ಎಂ. ಜಿ. ಹೂಗಾರ ಗುರುಗಳಿಗೂ ನಾನು ಚಿರಋಣಿಯಾಗಿದ್ದೇನೆ.

ನನ್ನ ಊರಿನ ಪಕ್ಕದ ಗ್ರಾಮವಾದ ಯಕ್ಸಂಬಾದಲ್ಲಿರುವ ಶ್ರೀ ಚೆನ್ನಬಸಪ್ಪಾ ಕರಾಳೆ ಪದವಿ ಮಹಾವಿದ್ಯಾಲಯದ ಅಧ್ಯಕ್ಷ, ಆಡಳಿತ ಮಂಡಳಿ, ಪ್ರಾಚಾರ್ಯರು ಹಾಗೂ ಮಹಾವಿದ್ಯಾಲಯದ ಎಲ್ಲ ಪ್ರಾಧ್ಯಾಪಕರಿಗೂ ನನ್ನ ನಮನಗಳು. ನನ್ನ ಆತ್ಮೀಯ ವಿದ್ಯಾರ್ಥಿಯಾದ ಶ್ರೀ ನೇಮಿನಾಥ ತಪಕಿರೆ ಹಾಗೂ ಪ್ರತ್ಯಕ್ಷವಾಗಿ ಹಾಗೂ ಅಪ್ರತ್ಯಕ್ಷವಾಗಿ ಸಹಾಯ-ಸಹಕಾರ ನೀಡಿದ ನನ್ನ ತಂದೆ-ತಾಯಿಗಳಿಗೂ ಹಾಗೂ ನನ್ನ ಕುಟುಂಬದ ಸದಸ್ಯರಿಗೂ ಮತ್ತು ಇನ್ನೂಳಿದ ಸ್ನೇಹಿತರನ್ನು ನಾನು ನೆನೆಯದೆ ಇರಲಾರೆ.

ವೃಷಬೇಂದ್ರ ಮಹಾವಿದ್ಯಾಲಯದ ಗ್ರಂಥಪಾಲಕರಾದ ಶ್ರೀ ಹಿರೇಮಠ ಗುರುಗಳು ಹಾಗೂ ಗ್ರಂಥಾಲಯದ ಎಲ್ಲ ಸಿಬ್ಬಂದಿಯವರನ್ನು ಸದಾಕಾಲ ನೆನೆಯುವೆ. ಸಂಶೋಧನಾ ಕೇಂದ್ರದ ಸಿಬ್ಬಂದಿಯಾದ ಶ್ರೀ ಪಟ್ಟಟ್ಟಿ ಹಾಗೂ ಎಲ್ಲ ಸಿಬ್ಬಂದಿ ಹಾಗೂ ಸಂಶೋಧನಾ ಕೇಂದ್ರದ ರೂವಾರಿಯಾದ ಶ್ರೀ ಜಿ. ಆರ್. ದರೂರ ಅವರನ್ನು ಸ್ಮರಿಸುವೆನು. ಅದರಂತೆ ಪ್ರಬಂಧವನ್ನು ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿದ ಶ್ರೀ ಮುರಗೇಶ ಕೌಲಾಪೂರ ಅವರಿಗೆ ವಂದನೆಗಳು.

ದಿ : ೨೨-೦೨-೨೦೧೪

ಶ್ರೀ ಗಣಪತಿ ಜಿ. ಕಮತೆ

ಸಾ॥ ಹಿರೇಕೋಡಿ

ತಾ॥ ಚಿಕ್ಕೋಡಿ ಜಿ॥ ಬೆಳಗಾವಿ

• ಪರಿವಿಡಿ •

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೨ನೇ ಶತಮಾನಕ್ಕೆ ಒಂದು ವಿಶಿಷ್ಠ ಸ್ಥಾನವಿದೆ. ವರ್ಗ ಮತ್ತು ವರ್ಣ ಹೋರಾಟಗಳ ಆಂದೋಲನದ ಯುಗವೆಂದು ಇದನ್ನು ಪರಿಗಣಿಸಲಾಗಿದೆ. ಈ ಕಾಲದ ಶರಣರು ವಚನವೆಂಬ ವಿಶಿಷ್ಟ ಸಾಹಿತ್ಯ ಪ್ರಕಾರವನ್ನು ಹುಟ್ಟು ಹಾಕಿದರಲ್ಲದೆ ಆ ಮೂಲಕ ಜನತೆಯನ್ನು ಜಾಗೃತಗೊಳಿಸಿದರು. ಜನಸಾಮಾನ್ಯರ ಆಡುಭಾಷೆಯನ್ನು ತಮ್ಮ ವಚನಗಳಲ್ಲಿ ಅಳವಡಿಸಿ ಅದಕ್ಕೊಂದು ವೈಶಿಷ್ಟ್ಯತೆಯನ್ನು ತಂದುಕೊಟ್ಟರು.

ವಿಶ್ವಸಾಹಿತ್ಯಕ್ಕೆ ವಚನ ಸಾಹಿತ್ಯವು ಕನ್ನಡದ ವಿಶಿಷ್ಟ ಕೊಡುಗೆಯೆನಿಸಿದೆ. ತಮಿಳಿನ "ತೇವಾರಂ" ಎಂಬ ಹಾಡುಗಳೇ ವಚನಗಳಿಗೆ ಮೂಲವೆಂದು 'ಶ್ರೀ ಡಿ. ಎಲ್. ನರಸಿಂಹಚಾರ್' ಹೇಳುತ್ತಾರೆ. ಕರ್ನಾಟಕದ ವಚನಕಾರರನ್ನು ಕುರಿತು ಅಧ್ಯಯನ ಮಾಡಿದ ಪ್ರೊ. ನಂದೀಮಠ, ಬಸವನಾಳ ಅಲ್ಲದೇ ವಚನಶಾಸ್ತ್ರ ಪಿತಾಮಹರಾದ ಶ್ರೀ ಫ. ಗು. ಹಳಕಟ್ಟಿಯವರ ಕೊಡುಗೆ ಅಮೂಲ್ಯವಾದುದು. ವಚನಗಳನ್ನು 'ಕನ್ನಡದ ಉಪನಿಷತ್ತು'ಗಳೆಂದು ಕರೆಯುವರು.

ವಚನ ಎಂದರೆ 'ಸಂಸ್ಕೃತ' ನಿಘಂಟುವಿನಲ್ಲಿ ಮಾತು ಎಂಬರ್ಥವಿದೆ. ಆದರೆ ವಚನಕಾರರು ವಚನವೆಂಬುವುದಕ್ಕೆ ಬರೆ ಮಾತು ಎಂಬ ಅರ್ಥವನ್ನು ನೀಡದೆ ಅದನ್ನು ಪ್ರಮಾಣವೆಂಬಂತೆ ಬಳಸಿದ್ದಾರೆ. ಆದಕಾರಣಕ್ಕಾಗಿ ತಮ್ಮ ಇಷ್ಟದೇವತೆಯ ಅಂಕಿತಗಳನ್ನು ಬಳಸಿ ಅವುಗಳ ಸಾಕ್ಷಿಯಾಗಿ ವಚನಗಳನ್ನು ರಚಿಸಿದ್ದಾರೆ. ಇದು ಗದ್ಯ ಗಂಧಿಯಾಗಿ ವಚನಕ್ಕೆ ತನ್ನದೆ ಆದ ಒಂದು ಲಯವಿದೆ. ಶಿವಶರಣರು ತಮ್ಮ ಮುಕ್ತವಾದ ವಿಚಾರಗಳಿಗೆ ಭಾವ ಮತ್ತು ಭಾಷೆಯನ್ನು ಬೆಸೆಸಿದ್ದಾರೆ. ಆದ್ದರಿಂದ ಇದು ಹೆಚ್ಚು ಪ್ರೀಯವಾದ ಸಾಹಿತ್ಯ ಪ್ರಕಾರವಾಗಿ ರೂಪಗೊಂಡಿತು.

ವಚನಕಾರರ ಇನ್ನೊಂದು ವಿಶೇಷವೆಂದರೆ ನುಡಿ ಮತ್ತು ನಡೆಗಳಲ್ಲಿ ಸಾವಯುವ ಸಂಬಂಧವನ್ನು ಕಲ್ಪಿಸಿಕೊಂಡದ್ದು. ನಡೆ ಮತ್ತು ನುಡಿ ಇವೆರಡು ವಚನಕಾರರಿಗೆ ಬೇರೆ ಬೇರೆಯಾಗಿ ಕಾಣಿಸುವುದೇ ಇಲ್ಲ. ನುಡಿದಂತೆ ನಡೆದರೆ ಇಡೀ ಜನ್ಮ ಕಡೆಯೆಂಬ ಘೋಶವಾಕ್ಯ ಅವರದು. ಸತ್ಯ, ನಿಷ್ಠೆ ಮತ್ತು ಕಾಯಕ ಇವು ಮಾನವ ಉದ್ಧಾರಕ್ಕೆ ಮೂಲಭೂತ ಸಂಗತಿಗಳೆಂಬುದನ್ನು ಅವರು ಮನಗಂಡರು.

ಮನುಷ್ಯ ದುಡಿದು ತಿನ್ನಬೇಕು. ಆಲಸಿಯಾಗಿ ಬಾಳಿದರೇ ಅವನ ಬದುಕಿಗೆ ನೆಲೆಯೇ ಇಲ್ಲ ಎಂಬುದನ್ನು ತಿಳಿಸುತ್ತ ಕಾಯಕದಲ್ಲಿಯೇ ಕೈಲಾಸವನ್ನು ಕಂಡುಕೊಂಡರು. ಈ ಕಾಯಕವು ಸತ್ಯಶುದ್ಧವಾಗಿರಬೇಕು. ಆಚಾರದಿಂದ ಬದುಕಿದರೇ ಅದೇ ಸ್ವರ್ಗ. ಅನಾಚಾರವು ನರಕಕ್ಕೆ ಕೊಂಡೊಯ್ಯುತ್ತದೆ ಎಂಬುದನ್ನು ಶಿವಶರಣರು ತಿಳಿಸಿದ್ದಾರೆ.

ಬಸವಣ್ಣನವರ ಮುಖಂಡತ್ವದಲ್ಲಿ ಕಲ್ಯಾಣದಲ್ಲಿ ವಿಧಾಯಕ ಕಾರ್ಯಗಳು ರಚನೆಗೊಂಡವು. ಬಸವಣ್ಣ ಬಿಜ್ಜಳನ ಮಂತ್ರಿಯಾಗಿ ಕಾರ್ಯಗೈಯ್ಯುವುದರ ಜೊತೆಗೆ ಸಮಾಜದಲ್ಲಿಯ ಕುಂದುಕೊರತೆಗಳನ್ನು ಮತ್ತು ಅವುಗಳ ಪರಿಹಾರಕ್ಕಾಗಿ ಚಿಂತಿಸಿದರು. ಹಾಗೆ ನೋಡಿದರೆ ಬಸವಣ್ಣನವರಿಗೆ ದಿವ್ಯಶಕ್ತಿ, ಒಂದು ಕಡೆ ರಾಜಧರ್ಮ ಇನ್ನೊಂದು ಕಡೆ ಸಮಾಜಧರ್ಮ ಇವೆರಡನ್ನು ತೂಗಿಸಿಕೊಂಡು ಕಲ್ಯಾಣದ ಕಲ್ಯಾಣಕ್ಕೆ ಶ್ರಮಿಸಿದರು. ಆತ್ಮವಿಕಾಸದ ಹಸಿವುಳ್ಳವರಿಗೆ ಆಧ್ಯಾತ್ಮದ ಅನುಭೋದನೆಯನ್ನು ಅನುಗ್ರಹಿಸಿದರು. ಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ ಲಿಂಗಭೇದವಿಲ್ಲದೆ, ಜಾತಿಭೇದವಿಲ್ಲದೆ, ಅಂತಸ್ತಿನ ಅಂತರವಿಲ್ಲದೆ ಎಲ್ಲರನ್ನು ಒಂದೇ ನೆಲೆಗಟ್ಟಿನಲ್ಲಿ ಕೂಡಿಸುವ ವಿನೂತನ ಪ್ರಯೋಗವೊಂದನ್ನು ಇವರು ಮಾಡಿದರು.

ಬಸವಣ್ಣ ಅನುಭವ ಮಂಟಪಕ್ಕೆ ಅವಿರಳ ಜ್ಞಾನಿಯಾದ ಅಲ್ಲಮನನ್ನು ಅಧ್ಯಕ್ಷನನ್ನಾಗಿ ಮಾಡಿ ಧಾರ್ಮಿಕ ಚರ್ಚೆಗಳನ್ನು ನಡೆಸುತ್ತಿದ್ದನು. ಬಸವಣ್ಣನವರ ಚುಂಬಕ ವ್ಯಕ್ತಿತ್ವಕ್ಕೆ ಮಾರುಹೋಗಿ ಹಲವಾರು ಜನ ಕಾಯಕ ಯೋಗಿಗಳು ಅನುಭಾವ ಮಂಟಪದಲ್ಲಿ ಸೇರಿದರು. ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಒಕ್ಕಲು ಮುದ್ದಯ್ಯ, ಏಕಾಂತರಾಮಯ್ಯ, ಹೆಂಡದ ಮಾರಯ್ಯ, ಅಕ್ಕಮಹಾದೇವಿ, ಸಿದ್ದರಾಮ, ಸುಳೆಸಂಕವ್ವ, ನುಲಿಯಚೆಂದಯ್ಯ, ಅಲ್ಲಮಪ್ರಭು ಹೀಗೆ ಅನೇಕ ಜನ ಶಿವಶರಣರು ಈ ಅನುಭವ ಮಂಟಪದಲ್ಲಿ ಸೇರಿ ಅಧ್ಯಾತ್ಮದ ಅನುಸಂಧಾನವನ್ನು ಮಾಡಿಕೊಳ್ಳುತ್ತಿದ್ದರು.

ಸ್ತ್ರೀ-ಸ್ವಾತಂತ್ರ್ಯದ ಬಗ್ಗೆ ೨೦-೨೧ ನೇ ಶತಮಾನದಲ್ಲಿ ಮಾತಾಡುವ ಚಿಂತಕರಿಗೆ ಮೂಲ ಪ್ರೇರಣೆ ೧೨ನೇ ಶತಮಾನದ ಶಿವಶರಣರು. ಗಂಡು-ಹೆಣ್ಣೆಂಬ ಭೇದವಿಲ್ಲದೆ ಪರಮಾತ್ಮನ ಅನುಗ್ರಹಕ್ಕೆ ಎಲ್ಲರೂ ಪಾತ್ರರೆಂಬುದನ್ನು ಅವರು ತಿಳಿಸಿಕೊಟ್ಟರು. "ಮೂಲೆಮುಡಿ ಬಂದರೆ ಹೆಣ್ಣೆಂಬರು - ಗಡ್ಡ ಮೀಸೆ ಬಂದರೆ ಗಂಡೆಂಬರಯ್ಯ ಒಳಗೆ ಸುಳಿವ ಆತ್ಮ ಹೆಣ್ಣು ಅಲ್ಲ ಗಂಡು ಅಲ್ಲ" ಎಂಬ ತ್ರಿಕಾಲಾಭರಿತ ಸತ್ಯವನ್ನು ಅವರು ಸಾರಿ ಹೇಳಿದರು. ಏಕದೇವೋಪಾಸನೆಯ ಮಹತ್ವವನ್ನು ಮನದಟ್ಟು ಮಾಡಿಕೊಟ್ಟರು. ಕಂದಾಚಾರಗಳಲ್ಲಿ ಮನುಷ್ಯ ತೊಡಗದೆ ಪರಮಾತ್ಮನ ಅಸ್ತಿತ್ವವನ್ನು ಅರಿತುಕೊಳ್ಳುವ ಹೊಸ ವಿಧಾನವನ್ನು ತಿಳಿಸಿಕೊಟ್ಟರು.

'ಮಡಕೆ ದೈವ ಮರದೈವ ಕಂಚುಕಲ್ಲು ದೇವ'ರೆಂಬುದನ್ನು ನಿರಾಕರಿಸಿ ಅಂತರಂಗ ಶುದ್ಧದಿಂದ ಪರಮಾತ್ಮನನ್ನು ಉಪಾಸಿಸುವುದೆ ಸೂಕ್ತವಾದ ಮಾರ್ಗವೆಂಬುದನ್ನು ಅವರು ಮನಗಂಡಿದ್ದರು. ಪುರೋಹಿತಶಾಹಿಯನ್ನು ಹುಟ್ಟುಹಾಕುವ ಗುಡಿಸಂಸ್ಕೃತಿಯನ್ನು ನಿರಾಕರಿಸಿ ಆತ್ಮವಿಕಾಸದ ಅನುಭಾವ ನೆಲೆಯನ್ನು ಅವರು ಕಂಡುಕೊಂಡರು.

"ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯ, ಏನಕಾಲವೇ ಕಂಬ ದೇಹವೇ ದೇಗುಲ, ಶಿರವೇಹೊನ್ನ ಕಲಶವಯ್ಯ" ಎಂದು ಬಸವಣ್ಣ ಹೇಳುವುದರ ಮೂಲಕ ಪುರೋಹಿತ ಶಾಹಿಯನ್ನು ಟೀಕಿಸುತ್ತಾನೆ. ಡಂಭಾಚಾರ, ಆಶಾಡಭೂತಿತನ, ಶೋಷಣೆ ಇವುಗಳಿಂದ ಮುಕ್ತವಾದ ಕಲ್ಯಾಣ ರಾಜ್ಯಕಟ್ಟುವ ಕನಸು ಬಸವಣ್ಣನ ಕಣ್ಣೋಳಗಿತ್ತು. ಈ ಕೈಂಕರ್ಯ ಸಾಧಿಸುವ ಛಲದಲ್ಲಿ ಯಾರ ಹಂಗಿಗೂ ಒಳಗಾಗದೆ ಏಕೈಕ ನಿಷ್ಠೆಯಿಂದ ಸಂಗಮನಾಥ ಮೆಚ್ಚಿದನ್ನು ಅನುಷ್ಠಾನಕ್ಕೆ ತರುವಲ್ಲಿ ಬಸವಣ್ಣನವರು ಶ್ರಮಿಸುತ್ತಾರೆ. ಆ ಕಾರಣದಿಂದ ಅನೇಕ ಶಿವಶರಣರು ಕಾಯಕ ಜೀವಿಗಳು ಬಸವಣ್ಣನ ಬೆಂಗಾವಲಾಗಿ ಕಲ್ಯಾಣಪ್ರಣತೆಯ ಜ್ಯೋತಿಯ ಕಿರಣಗಳಾಗಿ ಇವರು ಪ್ರಕಾಶ ಬೀರಿದರು.

ಸಾಮಾಜಿಕ ಜೀವನದ ಕಟು ಟೀಕೆ ವಿಡಂಬನೆಯನ್ನು ತಮ್ಮ ವಚನಗಳ ಮೂಲಕ ಎತ್ತಿ ತೋರಿಸಿದರು. ಸಮಾಜದ ಜನರ ಡಾಂಬಿಕತನ, ಪೊಳ್ಳುತನವನ್ನು 'ಕಲ್ಲನಾಗರ ಕಂಡರೆ ಹಾಲೆ ನೆರೆಯಂಬರು ದಿಟದ ನಾಗರ ಕಂಡರೆ ಕೊಲ್ಲೆಂಬರು'. ಎಂಬಲ್ಲಿ ಆಷಾಢಭೂತಿತನ ಹಾಗೂ ಗರ್ವಿಷ್ಟ ಪ್ರಜ್ಞೆಯ ಹೀನ ಸ್ಥಿತಿಯ ವಿಡಂಬನೆ ಸ್ಪಷ್ಟವಾಗಿದೆ.

೧೨ನೇ ಶತಮಾನದಲ್ಲಿ ವಿದ್ಯೆ ಕೇವಲ ಮೇಲು ವರ್ಗದವರ ಮಾತಾಗಿತ್ತು. ಇಂತಹ ಕಾಲದಲ್ಲಿ ಶರಣರು ಸಾಮಾನ್ಯ ಜನರ ಆಡುನುಡಿಯಾದ ಕನ್ನಡವನ್ನೇ ವಚನ ಸಾಹಿತ್ಯದ ಭಾಷೆಯನ್ನಾಗಿ ಬಳಸಿಕೊಂಡರು. ಜನವಾಣಿಯಾದ ಕನ್ನಡವನ್ನೆ ದೇವವಾಣಿಯು ಮಟ್ಟಕ್ಕೆ ಏರಿಸಿದರು. ವಚನಗಳಲ್ಲಿರುವ ಮುಖ್ಯ ವಿಷಯ ಜನಸಾಮಾನ್ಯರಲ್ಲಿರುವ ಲೌಕಿಕ ಸಮಸ್ಯೆಗಳೇ ಆಗಿರುವುದರಿಂದ ಅವು ಸಹಜವಾಗಿಯೇ ಜನಸಮುದಾಯದಿಂದ ಆಕರ್ಷಿಸಲ್ಪಟ್ಟವು. ಶರಣರು ತಮ್ಮ ಸಾಹಿತ್ಯ ಪ್ರಕಾರದಿಂದ ಸಮಾಜವನ್ನು ಪರಿವರ್ತಿಸಿದರು.

ಕಲ್ಯಾಣವೆಂಬ ಪಟ್ಟಣದೊಳಗೆ ಛತ್ತೀಸಪುರದ ಮಹಾಗಣಂಗಳು
ಒಂದು ಪುರದವರು ಅಗ್ಘಣಿಯ ತಹರು
ಎರಡು ಪುರದವರು ಸಮ್ಮಾರ್ಜನೆ ರಂಗವಾಲಿಯ ಮಾಡುವರು
ಮೂರು ಪುರದವರು ಲಿಂಗಾರ್ಚನೆಗೆ ನೀಡುವರು

ನಾಲ್ಕು ಪುರದವರು ಲಿಂಗಕ್ಕೆ ಬೋನವ ಮಾಡುವರು
ಐದು ಪುರದವರು ಅರ್ಪಿತಕ್ಕೆ ನೀಡುವರು
ಆರು ಪುರದವರು ಪ್ರಸಾದದಲ್ಲಿ ತದ್ಗತರಾಗಿಹರು
ಏಳು ಪುರದವರು ಧ್ಯಾನರೂಢರಾಗಿಹರು
ಮುಂದಣ ಪುರದವರು ನಿಶ್ಚಿಂತನಿವಾಸಿಗಳಾಗಿಹರು
ಈ ಪುರದ ಗಣಂಗಳ ಓಲೈಸುವ ಬಸವಣ ಮಹಾಮನೆಯ.[೧]

ಇಂಥಹ ಶರಣರ ಸಾಲಿನಲ್ಲಿ **'ಬಾಹೂರ ಬೊಮ್ಮಯ್ಯನು'** ಒಬ್ಬ. ಬಾಹೂರ ಬೊಮ್ಮಯ್ಯನು ಜನಸಾಮಾನ್ಯರಿಗೆ ಬಸವಣ್ಣನಷ್ಟು ಪ್ರಭಾವ ಬೀರಿದ ವ್ಯಕ್ತಿಯಲ್ಲ. ಆದರೆ ಸತ್ಯನಿಷ್ಠೆ ಕಾಯಕದಿಂದ ಕಲ್ಯಾಣದ ಶರಣರಲ್ಲಿ ತನ್ನ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸಿಕೊಂಡಿದ್ದಾನೆ. ೧೨ನೇ ಶತಮಾನದ ಶಿವಶರಣರ ಸಾಲಿನಲ್ಲಿ ಅನೇಕ ಜನರು ವಚನಗಳನ್ನು ರಚಿಸಿ ತಮ್ಮ ನೆಲೆ ಕಂಡುಕೊಂಡಿದ್ದಾರೆ. ಕೆಲವು ವಚನಕಾರರು ಪ್ರಮುಖರೆನಿಸಿದರೆ ಅಪ್ರಮುಖ ವಚನಕಾರರು ಸಾಕಷ್ಟಿದ್ದು ಅವರ ವ್ಯಕ್ತಿತ್ವವು ಕೂಡಾ ಉಧಾತ್ತವಾಗಿದೆ. ಇಂಥಹ ಪ್ರಮುಖ ವಚನಕಾರರಲ್ಲಿ ಬಾಹೂರ ಬೊಮ್ಮಯ್ಯ ಒಬ್ಬನಾಗಿದ್ದು ಅವನ ವಚನಗಳ ಅಧ್ಯಯನ ಹಿನ್ನಲೆಯಲ್ಲಿ ಮತ್ತು ಬೊಮ್ಮಯ್ಯನ ವ್ಯಕ್ತಿತ್ವವನ್ನು ಕಟ್ಟಿಕೊಡುವುದೆ ನನ್ನ ಪ್ರಬಂಧದ ಉದ್ದೇಶವಾಗಿದೆ.

ಬಾಹೂರ ಬೊಮ್ಮಯ್ಯನ ಕಾಲ, ಬೊಮ್ಮಯ್ಯನ ಕುರಿತಾದಂತಹ ಬೇರೆ ಆಕರಗಳು ಬೊಮ್ಮಯ್ಯನು ಬರೆದ ವಚನ ಇವುಗಳ ಒಟ್ಟು ಅಧ್ಯಯನದ ಮೂಲಕ ಬೊಮ್ಮಯ್ಯನ ವ್ಯಕ್ತಿತ್ವವನ್ನು ರೇಖಿಸಲ ಸಾಧ್ಯವಾಗುತ್ತದೆ. ನನಗೆ ದೊರೆತ ಆಧಾರಗಳ ಮೂಲಕ ಈ ಅಧ್ಯಯನದಲ್ಲಿ ಬಾಹೂರ ಬೊಮ್ಮಯ್ಯನ ಕುರಿತು ಅವನ ವಿಶಿಷ್ಟ ಸಾಧನೆಯನ್ನು ಕುರಿತು ಅಧ್ಯಯನ ಕೈಕೊಳ್ಳಲಾಗಿದೆ.

ಬಾಹೂರ ಬೊಮ್ಮಯ್ಯನ ಸಮಕಾಲೀನ ವಚನಕಾರರ ಹಿನ್ನಲೆಯಲ್ಲಿ ಬೊಮ್ಮಯ್ಯನ ಕುರಿತು ಅಧ್ಯಯನ ಮಾಡುವುದು ತುಂಬಾ ಸೂಕ್ತವೆಂದು ನಾನು ಭಾವಿಸಿ ಇತರ ವಚನಕಾರರ ಬಗ್ಗೆ ಕೆಲವು ಸಂಗತಿಗಳನ್ನು ಇಲ್ಲಿ ಉಲ್ಲೇಖಿಸಿದ್ದೇನೆ. ಹೀಗೆ ಒಟ್ಟು ನನ್ನ ಅಧ್ಯಯನದ ಉದ್ದೇಶವೆಂದರೆ ಬಾಹೂರ ಬೊಮ್ಮಯ್ಯ ಒಬ್ಬ ವಿಶಿಷ್ಟ ಶಿವಶರಣ ಎಂಬುದನ್ನು ದಾಖಲಿಸುವುದಾಗಿದೆ.

೧. ಮಡಿವಾಳ ಮಾಚಿದೇವ – ಸಂಕೀರ್ಣ ವಚನ ಸಂಪುಟ : ಪು.ಸಂ. ೧೬೬

ಅಧ್ಯಾಯ - ೨

ಶರಣರು ಮತ್ತು ಬೊಮ್ಮಯ್ಯಗಳು

ಅಧ್ಯಾಯ - ೨

ಶರಣರು ಮತ್ತು ಬೊಮ್ಮಯ್ಯಗಳು

೧೨ನೇ ಶತಮಾನದಲ್ಲಿ ಬಾಳಿದ ಬೊಮ್ಮಯ್ಯ ಒಬ್ಬ ಶ್ರೇಷ್ಠ ಶಿವಶರಣ. ಇವನನ್ನು ಕುರಿತು ಹರಿಹರ, ಭೀಮಕವಿ, ಬಸವಲಿಂಗವಿರಚಿತ ಭೈರವೇಶ್ವರ ಕಾವ್ಯಗಳಲ್ಲಿ ಚಾರಿತ್ರಿಕ ಸಂಗತಿಗಳು ದಾಖಲಾಗಿವೆ. ಚರಿತ್ರೆ ಮತ್ತು ಚಾರಿತ್ರ್ಯ ಇವುಗಳಲ್ಲಿ ವ್ಯತ್ಯಾಸವಿದೆ. ಚರಿತ್ರಕ್ಕೆ ಸಂಬಂಧಿಸಿದ್ದು ಚಾರಿತ್ರ್ಯವಾದರು ಚಾರಿತ್ರ್ಯಕ್ಕೆ ಇನ್ನೊಂದು ವಿಶೇಷ ಗುಣವಿದೆ. ಚರಿತ್ರೆ ವ್ಯಕ್ತಿಯ ಬದುಕಿನ ಸಂಗತಿ, ಘಟನೆಗಳನ್ನು ಹೇಳುತ್ತಾ ಸಾಗಿದರೆ ಚಾರಿತ್ರ್ಯವೆನ್ನುವುದು. ಆ ವ್ಯಕ್ತಿಯ ಬದುಕಿನ ರೀತಿಯನ್ನು ಮತ್ತು ಅವನ ನೈತಿಕತೆಯನ್ನು ಒಳಗೊಂಡಿರುತ್ತದೆ. ಹಾಗಾಗಿ ಬೊಮ್ಮಯ್ಯ ಬರಿ ಚರಿತ್ರೆಪುರಷನಲ್ಲ ಅವನು ಚಾರಿತ್ರವಂತ, ಗುಣವಂತ. ಅವನ ಬದುಕಿನಲ್ಲಿ ನಡೆದ ಮತ್ತು ಅವನ ಕಂಡ ಅನುಭಾವಿಗಳೊಡನೆ ಅನುಸಂಧಾನಗೊಂಡ ರೀತಿ ಮುಂತಾದವುಗಳನ್ನು ಇಲ್ಲಿ ನಿರೂಪಿಸಲಾಗುತ್ತದೆ.

ಬಸವಣ್ಣ ಧಾರ್ಮಿಕ ಕ್ಷೇತ್ರದಲ್ಲಿ ಮಾಡಿದ ಮಹಾಕ್ರಾಂತಿಯಂತೆ ಹರಿಹರನು ೬೩ ಪುರಾತನರ ಚರಿತ್ರೆಯನ್ನು ರಚಿಸುವ ಮೂಲಕ ಇನ್ನೊಂದು ಧಾರ್ಮಿಕ ಕ್ರಾಂತಿಯನ್ನು ಮಾಡಿದ್ದಾನೆ. ಈ ೬೩ ಪುರಾತನರು ಸ್ಥಾವರಲಿಂಗ ಉಪಾಸಕರು ಶಿವನನ್ನೆ ಆರಾಧ್ಯ ಧೈವವೆಂದು ಬಗೆದು ಬದುಕನ್ನೆಲ್ಲಾ ಅವನಿಗೆ ಮಿಸಲಿಟ್ಟ ಅನುಭಾವಿಗಳು. ಶರಣರು ಈ ೬೩ ಶರಣರಲ್ಲಿ ಬೊಮ್ಮಯ್ಯನ ಹೆಸರಿನ ಶರಣರು ೧೧ ಜನರಿದ್ದಾರೆ. ಇವರು ಶಿವನಿಗಾಗಿ ತಮ್ಮ ಬದುಕನ್ನು ಮಿಸಲಿಟ್ಟವರು. ಬೊಮ್ಮಯ್ಯನ ಸಮಕಾಲೀನರಾದ ಈ ಶಿವಶರಣರ ಬದುಕು ಅದ್ಭುತವಾಗಿದೆ.

ಡಾ. ಎ. ಎಸ್. ಸುಂಕಾಪುರರವರು ಸಂಪಾದಿಸಿದ ಸಿಂಘಳದ ಸಿದ್ಧ ಬಸವರಾಜ ದೇವರು ವ್ಯಾಖ್ಯಾನಿಸಿದ ಸಕಲ ಪುರಾತನರ ಬೆಡಗಿನ ವಚನಗಳು ಎಂಬ ಕೃತಿಯಲ್ಲಿ ಡಕ್ಕೆಯ ಬೊಮ್ಮಣ್ಣ, ಸಗರದ ಬೊಮ್ಮಣ್ಣ, ರಕ್ಕಸ ಬೊಮ್ಮಣ್ಣ ಎಂಬ ಹೆಸರಿನ ಶಿವಶರಣರು ಕಾಣಸಿಗುತ್ತಾರೆ. ಇವರೆಲ್ಲರ ಬದುಕು ಮತ್ತು ಸಾಹಿತ್ಯ ಕುರಿತು ಅಧ್ಯಯನ ನಡೆಯಬೇಕಾಗಿದೆ. ಬೊಮ್ಮಯ್ಯನ ವ್ಯಕ್ತಿತ್ವ ನಿರೂಪಿಸುವ ಹಿನ್ನಲೆಯಲ್ಲಿ ಇಲ್ಲಿಯ ಕೆಲವು ಶಿವಶರಣರ ಪರಿಚಯವನ್ನು ಅನುಸಾಂಘಿಕವಾಗಿ ಮಾಡಿಕೊಡಲಾಗಿದೆ.[೧]

---

೧. ಸಕಲ ಪುರಾತನರ ಬೆಡಗಿನ ವಚನಗಳು : ಡಾ. ಎ. ಎಸ್. ಸುಂಕಾಪುರ

ಬಿಲ್ಲೇಶ ಬೊಮ್ಮಯ್ಯ :

ಬಿಲ್ಲೇಶ ಬೊಮ್ಮಯ್ಯನು ಕಿತ್ತು ತಿನ್ನುವ ಬಡತನದಲ್ಲಿ ಬಾಳಿ ಬೆಳೆದವ. ದಾಯಾದಿಗಳಿಂದ ವಸ್ತು ವಡವೆಗಳನ್ನು ಲಪಟಾಯಿಸಿಕೊಂಡು ತನ್ನ ಮುಷ್ಠಿ ಬಲದಿಂದ ಅವರಿಂದ ತಪ್ಪಿಸಿಕೊಂಡು ಸೊಲ್ಲಾಪುರಕ್ಕೆ ಓಡಿ ಬರುತ್ತಾನೆ. ಸಿದ್ಧರಾಮನಿಗೆ ಗೊತ್ತಾಗದಂತೆ ಒಂದೆರಡು ದಿನ ಗುಪ್ತವಾಗಿದ್ದು ಮುಂದೆ ಸಿದ್ಧರಾಮನ ಶಿಷ್ಯರ ವೇಷಹಾಕಿ ಸಿದ್ಧರಾಮನ ಗುಡ್ಡರಲ್ಲಿ ತಾನು ಒಬ್ಬನಂತೆ ಉಳಿದು ಬಿಡುತ್ತಾನೆ. ಜಾಣತನದ ಮಾತಿನಿಂದ ಗುಡ್ಡರ ವೇಶದಲ್ಲಿದ್ದು ತಾನು ನೂರಾರು ಅನ್ಯಾಯಗಳನ್ನು ಮಾಡಿದರು. ಅವುಗಳನ್ನು ಮರೆಮಾಡಿ ತೋರಿಕೆಗೆ ಸಾಚಾ ವ್ಯಕ್ತಿಯಂತೆ ಕಾಣುತ್ತಿದ್ದನು. ಹುಳಿಹೆಂಡವನ್ನು ತುಂಬಿಕೊಂಡ ಮಡಕೆಯಂತೆ ಈತ ಒಳಗೊಂದು ರೀತಿಯಾದರೆ ಹೊರಗೊಂದು ರೀತಿ.

ದಿನಗಳು ಕಳೆದಂತೆ ದಾಯಾದಿಗಳು ಸಂಪತ್ತನ್ನು ಕಳೆದುಕೊಂಡು ತಾವು ಕೊಟ್ಟ ಸಾಲದ ಹಣವನ್ನು ತಿರುಗಿ ಕೇಳಲು ಬೊಮ್ಮಯ್ಯ ಇದ್ದ ಕಡೆ ಸೊಲ್ಲಾಪುರಕ್ಕೆ ಬರುತ್ತಾರೆ. ದಾಯಾದಿಗಳನ್ನು ಕಂಡಕೂಡಲೇ ಈತ ಮರೆಮಾಚುತ್ತ ಸುಳ್ಳುನೆಪವೊಡ್ಡುತ್ತ ಅಲ್ಲಿಂದ ಪಾರಾಗಲು ಪ್ರಯತ್ನಿಸುತ್ತಾನೆ. ದಾಯಾದಿಗಳು ಊರಜನರನ್ನು ಸೇರಿಸಿ ಸಿದ್ಧರಾಮನಲ್ಲಿ ಶಿಷ್ಯನಾದ ವೇಷದಾರಿ ಈ ಗುಡ್ಡ ಬಿಲ್ಲೇಶ ಬೊಮ್ಮಯ್ಯನೆಂದು ತಮ್ಮಿಂದ ಪಡೆದ ಹಣವನ್ನು ತಿರುಗೆ ಕೊಡಲಾರದೇ ಸತಾಯಿಸುತ್ತಿದ್ದಾನೆಂದು ಆ ಪಂಚರ ಮುಂಚೆ ಅವರು ತಮ್ಮ ಅಳಲು ತೋಡಿಕೊಳ್ಳುತ್ತಾರೆ. ಆದರೆ ಬೊಮ್ಮಯ್ಯನು ಅಂಜದೆ, ಹೆದರದೆ ನನಗೆ ಯಾರು ದಾಯಾದಿಗಳೇ ಇಲ್ಲ ಮತ್ತು ಅವರಿಂದ ನಾನು ಯಾವ ಹಣವನ್ನು ಪಡೆದಿಲ್ಲವೆಂದು ಹೇಳುತ್ತಾನಲ್ಲದೆ ಬಂದ ದಾಯಾದಿಗಳೆ ತನ್ನನ್ನು ಅಪಮಾನಗೊಳಿಸಿದರೆಂದು ಮತ್ತು ಬೀದಿಯಲ್ಲಿ ತನ್ನ ಮಾನ ಕಳೆದರೆಂದು ಆಕ್ರೋಶದಿಂದ ಮನಸ್ಸಿಗೆ ಬಂದಂತೆ ಬಯ್ಯುತ್ತಾನೆ. ಊರ ಪಂಚರ ಮುಂದೆ ತನ್ನ ವಾದವೇ ಸರಿ ಎನ್ನುವಂತೆ ಪ್ರತಿಪಾದಿಸುತ್ತಾನೆ. ಎಲ್ಲರಿಗೂ ದಿಗಿಲು ಬಡಿದಂತಾಗುತ್ತದೆ. ಕೊನೆಗೆ ಊರ ಪ್ರಮುಖರು ದಾಯಾದಿಗಳಿಗೆ ಏನು ಹೇಳಬೇಕೆಂಬುದನ್ನು ತೋಚದೆ ತಮ್ಮ ತಮ್ಮ ಮನೆಗೆ ತೆರಳುತ್ತಾರೆ. ಕಂದಿದ ಬಣ್ಣದ, ಕಳೆಗುಂದಿದ ಮುಖ, ಸುಕ್ಕುಗಟ್ಟಿದ ಚರ್ಮದ, ಇಂಗಿಹೋದ ಕಣ್ಣಿನ ದಾಯಾದಿಗಳು ನ್ಯಾಯವನ್ನು ಕೋರಿ ತಲೆಯ ಮೇಲೆ ಹುಲ್ಲುಹೊರೆಯನ್ನು ಹೊತ್ತುಕೊಂಡು ಸೊಲ್ಲಾಪುರದ ಬಿದಿಯಲ್ಲಿ ಸಂಚರಿಸುತ್ತಾರೆ.[೨]

ಸಿದ್ಧರಾಮನು ಮಾರ್ಗದಲ್ಲಿ ಇವರನ್ನು ಕಂಡು ಅವರ ದೈನ್ಯತೆಯ ಬಗ್ಗೆ ವಿಚಾರಿಸುತ್ತಾನೆ. ಅವರೆಲ್ಲರು ಸಿದ್ಧರಾಮನಿಗೆ ನಿಮ್ಮ ಶಿಷ್ಯ ಬಿಲ್ಲೇಶ ಬೊಮ್ಮಯ್ಯ ಮಹಾ ಮೋಸಗಾರ ಹಾಗೂ ವಂಚಕ. ನಮ್ಮಿಂದ ಹಣ ಪಡೆದು ಮರಳಿ ಕೊಡಲಾಗದೆ ನಮ್ಮನ್ನು ಈ ಸ್ಥಿತಿಗೆ ತಂದು ಬಿಟ್ಟಿದ್ದಾನೆಂದು ಹೇಳುತ್ತಾರೆ. ಸಿದ್ಧರಾಮನಿಗೆ ಅವರ ದೈನ್ಯತೆ ಕಂಡು ಮರುಕು ಉಂಟಾಗುತ್ತದೆ. ಅವರನ್ನು ಕರೆದುಕೊಂಡು ತನ್ನ ನಿಜವಾಸದತ್ತ ಬರುತ್ತಾನೆ.

೨. ಹರಿಹರನ ರಗಳೆಗಳು

ಬೊಮ್ಮಯ್ಯನನ್ನು ಕರೆಯಿಸಿ ವಿಚಾರಿಸುತ್ತಾನೆ. ಸಿದ್ಧರಾಮ ಕೇಳಿದರು, ಬೊಮ್ಮಯ್ಯನು ಸತ್ಯ ನುಡಿಯುವುದಿಲ್ಲಾ. ತನ್ನ ಮೊದಲಿನ ಮೊಂಡ ವಾದವನ್ನೇ ಮುಂದುವರಿಸುತ್ತಾನೆ.

ಸಿದ್ಧರಾಮ ಕೊನೆಗೆ ಬೊಮ್ಮಯ್ಯನಿಗೆ ಕೇಳುತ್ತಾನೆ. ಅವರಿಗೆ ಕೊಡಬೇಕಾದ ಸಂಪತ್ತನ್ನು ಕೊಡು, ಇಲ್ಲವಾದರೆ ಇವರಲ್ಲಿ ಯಾರು ನಿನ್ನತ್ತ ತಿರುಗಿ ನೋಡಲಾರರು. ಇದು ಗುರುವಿನ ಆಜ್ಞೆ! ಇದನ್ನು ನೀನು ಪಾಲಿಸಬೇಕೆನ್ನುತ್ತಾನೆ. ಇಷ್ಟಾದರು ಕೂಡಾ ಬೊಮ್ಮಯ್ಯ ಜಗ್ಗುವುದಿಲ್ಲ. ಆಗ ಸಿದ್ಧರಾಮನು ಕೂಡಾ ದಾಯಾದಿಗಳಿಗೆ ಉಟೋಪಚಾರ ಮಾಡಿಸಿ ಕಾಣಿಕೆ ಕೊಟ್ಟು ಅವರನ್ನು ಕಳುಹಿಸುತ್ತಾನೆ. ಆಶ್ಚರ್ಯವೆಂದರೆ ಬಿಲ್ಲೇಶ ಬೊಮ್ಮಯ್ಯನೊಂದಿಗೆ ಯಾರು ಮಾತನಾಡುವುದಿಲ್ಲ ಹಾಗೂ ತಿರುಗಿ ನೋಡುವುದಿಲ್ಲ.

ಇದರಿಂದ ಬೇಸತ್ತ ಬೊಮ್ಮಯ್ಯನು ಗುರುವಿಗೆ ಮತ್ತು ಸಮಾಜಕ್ಕೆ ಬೇಡವಾದ ಈ ಜೀವವನ್ನು ಇಟ್ಟುಕೊಂಡರೆ ಫಲವೇನಿದೆ ಎಂದು ತಿಳಿದು ತನ್ನ ಬದುಕಿಗೆ ತಾನೆ ಅಸಹ್ಯಪಟ್ಟು ತಾನಿರುವ ಸ್ಥಾನದ ಕುಟಿರಕ್ಕೆ ಎಡಬಿಡದೆ ಹಾಯ್ದುಕೊಂಡು ಪ್ರಾಣಬಿಡುತ್ತಾನೆ.

ಬೊಮ್ಮಯ್ಯನ ಕಥೆಯು ಅವನ ಆತ್ಮಹತ್ಯೆಯಲ್ಲಿ ಅಂತ್ಯವಾದರೆ ಅದರಿಂದ ಕವಿ ಬೊಮ್ಮಯ್ಯನ ಮೂಲಕ ಸಮಾಜಕ್ಕೆ ಗುರುಸ್ಥಾನ ದೊಡ್ಡದೆಂಬುದನ್ನು ತಿಳಿಸಿಕೊಡುತ್ತಾನೆ. ಈ ಪುರಾತನರು ತಮ್ಮ ಬದುಕಿಗಾಗಿ ಬದುಕಿದವರಲ್ಲ. ಅವರ ಬದುಕು ಬೆಳೆದಿಂಗಳಲ್ಲಿ ಅನೇಕ ಪುಷ್ಪಗಳ ಮಧುರ ಮಕರಂದವನ್ನು ಕಾಣುವ ಮನೋಭಾವವನ್ನು ಅವರು ಹೊಂದಿದ್ದಾರೆ. ಹರಿಹರನು ದೇವಲೋಕದ ಅವತಾರಿ ಪುರುಷರನ್ನು ಮರ್ತ್ಯಕ್ಕೆ ಇಳಿಸಿ ಮೃತ್ಯವನ್ನು ಸ್ವರ್ಗಗೊಳಿಸುವ ಮಹಾನ್ ಕಾರ್ಯ ಮಾಡಿದ್ದಾನೆ. ಇಂತಹ ಚರಿತ್ರೆಯ ಸಂಪುಟದಲ್ಲಿ ಅನೇಕ ಜನ ಬೊಮ್ಮಯ್ಯಗಳು ಬಂದು ಹೋಗುತ್ತಾರೆ.[೩]

ಕೋವೂರ ಬೊಮ್ಮಯ್ಯ :

ಹರಿಹರನು ಉಲ್ಲೇಖಿಸಿದ ಪುರಾತನರಲ್ಲಿ ಕೋವೂರ ಬೊಮ್ಮಯ್ಯನು ಒಬ್ಬನಾಗಿದ್ದಾನೆ. ಕಲ್ಯಾಣದ ಉತ್ತರ ದಿಕ್ಕಿನಲ್ಲಿ ಕೋವೂರೆಂಬ ಪಟ್ಟಣ. ಆ ಪಟ್ಟಣ ಆಳುತ್ತಿದ್ದ ಸಮರ್ಥ್ಯನಾದ ಚಾಲುಕ್ಯ ದೊರೆ. ಅಲ್ಲಿ ಒಬ್ಬನೇ ಶಿವಭಕ್ತ ಬೊಮ್ಮಯ್ಯ. ಉಳಿದವರೆಲ್ಲರು ಜೈನ ಮತಿಯರು ಎಲ್ಲೆಲ್ಲೋ ಅವರದೇ ಕೈವಾಡ. ರಾಜನಿಗೆ ಕಲಾವತಿಯೆಂಬ ನೆಚ್ಚಿನ ಮಡದಿಯಿದ್ದಳು. ಇವರಿಬ್ಬರ ಉದರದಲ್ಲಿ ಶಿವನ ಕರುಣೆಯಿಂದ ಒಂದು ಗಂಡು ಮಗು ಜನಸಿತು. ಅವನ ಹೆಸರು ಮಲ್ಲಿದೇವ. ಗಂಡು ಮಗುವಿನ ಮೇಲಿನ ಪ್ರೀತಿಯಿಂದ ರಾಜನು ಶಿವಭಕ್ತರಿಗೆ ಎಲ್ಲ ರೀತಿಯಿಂದ ಸತ್ಕರಿಸಿದನು. ಇದು ಜೈನರಿಗೆ ಸಹನೆಯಾಗಲಿಲ್ಲ. ಶಿವಭಕ್ತರನ್ನು ಓಡಿಸಲೆಂದು ಜೈನರು ಒಬ್ಬ ಸವಣನಿಗೆ

---

೩. ಹರಿಹರನ ರಗಳೆಗಳು

ಜಂಗಮ ವೇಷ ತೊಡಸಿ ಅರಮನೆಗೆ ಕಳುಹಿಸಿದರು. ಜಂಗಮರು ಬಂದರೆಂದು ಮಲ್ಲಿದೇವ ಇದಿರು ಬಂದು ನಮಸ್ಕರಿಸುವಾಗ ಆ ಜಂಗಮ ವೇಶದ ಜೈನ ಮಲ್ಲಿದೇವನನ್ನು ಇರಿದು ಕೊಲೆ ಮಾಡಿ ಓಡಿಹೋದನು.

ಆ ಹೊತ್ತಿಗೆ ಕಲಾವತಿ ಬಂದು ಕುವಾರನ ಕೊಲೆಯನ್ನು ಕಂಡು ದುಃಖಿಸತೊಡಗಿದಳು. ಇದನ್ನು ತಿಳಿದ ಅಧಿಕಾರಿಗಳು ಈ ವಿಷಯ ರಾಜನಿಗೆ ತಿಳಿಸಿದರೆ ಗಣಪರ್ವ ಕೆಡುವುದೆಂದು ಹೇಳಿ ವಿಷಯವನ್ನೆಲ್ಲ ಬಚ್ಚಿಟ್ಟರು. ಮಲ್ಲಿದೇವನ ಶವವನ್ನು ಒಂದು ಗೂಪೆಯಲ್ಲಿ ಬಚ್ಚಿಟ್ಟರು.

ಆರು ತಿಂಗಳು ಕಳೆದವು. ಬೊಮ್ಮಿ ತಂದೆ ಗಣಪರ್ವತವನ್ನು ಮುಗಿಸಿ ಅರಮನೆಗೆ ಮರಳಿದನು. ಹೇರಾಲದ ಮರದ ಕೆಳಗೆ ನಿಂತು ಎಲ್ಲರಿಗೆ ದರ್ಶನ ಕೊಟ್ಟನು. ಅರಸನಿಗೆ ಆನಂದವಾಯಿತು. ಜೈನರಿಗೆ ದುಃಖವಾಯಿತು, ಆಗ ಜೈನರೆಲ್ಲ ಹಿಂಡಾಗಿ ನೆರೆದು 'ಗಣಪರ್ವದಿಂದ ಬಂದ ಫಲವೇನೆಂದು ರಾಜನಿಗೆ ಪ್ರಶ್ನೆ ಮಾಡಿದರು. ಅದಕ್ಕೆ ರಾಜನು 'ಶಿವಭಕ್ತನಪ್ಪುದೇ ಪ್ರತ್ಯಕ್ಷವಲ್ಲದುದೆ ಫಲಕೆ ಫಲಗಳು ಉಂಟೆ ಬೆಳಸಿಂಗೆ ಬೆಳಸುಂಟೆ ತಿಳುವಿಲ್ಲಜ್ಞರಿಗೆ ಭಕ್ತಿಯಿಂ ಮೇಲುಂಟೆ?' ಎಂದು ಶಿವಗಣವನ್ನು ಹೊಗಳಿ ನಿಮ್ಮಲ್ಲಿ ಶಕ್ತಿ, ಯೋಗ್ಯತೆ ಇದ್ದರೆ ನಿಮ್ಮ ಮಂತ್ರಶಕ್ತಿಯಿಂದ ಈ ಹೇರಾಲದ ಮರವನ್ನು ನಾಶಮಾಡಿರಿ ಎಂದು ರಾಜನು ಹೇಳಿದನು. ಸವಣರೆಲ್ಲ ಸಿದ್ಧರಾಗಿ ತಮ್ಮ ಮಂತ್ರಶಕ್ತಿಯಿಂದ ಆ ಮರವನ್ನು ಸುಟ್ಟು ಭಸ್ಮ ಮಾಡಿದರು. 'ಕೋವೂರು ಬೊಮ್ಮಯ್ಯ' ಅಲ್ಲಿಯೇ ಇದ್ದನು.

ಆತ ಸವನರನ್ನು ಉದ್ದೇಶಿಸಿ, ಮರನುರಿದಡೇನೋ ಭಸ್ಮಂ ಬೀಜವಿದೆ ನೋಡೆ, ಚರಿತದಿಂ ಚಂದ್ರಶೇಖರನಂ ಮನಂಗೊಂಡೆ ನೆನೆಯಲಂ ಕುರಿಸಿತ್ತು ನೋಡೆ ಪಲ್ಲವಿಸಿತ್ತು' ಎಂದು ಹೇಳಿ ಸುಟ್ಟ ಮರವನ್ನೇ ಮೊದಲಿನಂತೆ ಮಾಡಿ ತೋರಿಸಿದ. ಶಿವಭಕ್ತರು ಗುಡಿಕಟ್ಟಿ ನಲಿದಾಡಿದರು. ಇದನ್ನು ನೋಡಿದ ಜೈನ ಸವಣವರು ಅಲ್ಲಿಂದ ಓಡಿಹೋದರು.

ಕೋವೂರ ಬೊಮ್ಮಯ್ಯ ಮಡಗಣದೊಡನೆ ಬಂದು, ಇಕ್ಕಿದ ಸಿಂಹಾಸನವನ್ನೇರಿ ಕುಳಿತುಕೊಂಡ. ಮಹಾರಾಜನ ರಾಣಿಯರೆಲ್ಲರು ರನ್ನದಾರತಿ ಎತ್ತಿದರು. ಕೊನೆಗೆ ಬಂದು ಕಲಾವತಿದೇವಿ ಆರತಿಯೆತ್ತುವ ಸಮಯದಲ್ಲಿ ಅವಳ ಕಣ್ಣಿಂದ ಕಂಬನಿ ಉದುರಿದಾಗ ಆಕೆಯ ದುಃಖಕ್ಕೆ ಕಾರಣ ಕೇಳಿದಾಗ ಮಗ ಮಡಿದ ವಿಷಯ ತಿಳಿಯಪಡಿಸಿದಳು.

ಬೊಮ್ಮಯ್ಯನು ಸಮಾಧಾನ ಚಿತ್ತದಿಂದ 'ತಪ್ಪದೆ ಎನ್ನಿಚ್ಚೆಯಂ ಸಲಿಸನೇ ಶಂಕರಂ' ಎನ್ನುತ್ತ 'ಗೂಪೆಗೆ' ಬಂದು ಏಳಯ್ಯ, ಎಳ್ಚುಮಾರ ಎಂದೊಡನೆ ಮಲ್ಲಿದೇವ ಮೊದಲಿನ ರೂಪಧರಿಸಿ ಎದ್ದು ನಿಂತ ಬೊಮ್ಮಯ್ಯನ ಶಿವಭಕ್ತಿ ಪವಾಡದಿಂದ ಕೋವೂರಿನಲ್ಲಿ ಗಣಪರ್ವದ ಮೇಲೆ ಗಣಪರ್ವಗಳು ನಡೆಯ ತೊಡಗಿದವು. ಬೊಮ್ಮಯ್ಯ ತನ್ನ ಊರನ್ನೆ

ಕೈಲಾಸವನ್ನಾಗಿಸಿದ. ಹೀಗೆ ಕೋವೂರ ಬೊಮ್ಮಯ್ಯನು ಮತಿಯ ಜಗಳ, ಕೊಲಾಹಲ, ವೀರಾರ್ಪಣ ಮುಂತಾದ ವಿಷಯಗಳನ್ನು ತನ್ನ ಪವಾಡಗಳಿಂದ ದೂರ ಮಾಡಿ ಶಿವಭಕ್ತಿಯ ಮಹತ್ವವನ್ನು ಭೂಮಿಯ ಮೇಲೆ ಸಾರಿದನೆಂದು ಹರಿಹರನು ತನ್ನ ಈ ರಗಳೆಯಲ್ಲಿ ಶಿವಭಕ್ತಿಯ ಪಾರಮ್ಯತೆಯನ್ನು ಚಿತ್ರಿಸಿದ್ದಾನೆ.

ತೆಲಗು ಬೊಮ್ಮಯ್ಯ :

ತೆಲಗು ಬೊಮ್ಮಯ್ಯ ಒಬ್ಬ ಚಾರಿತ್ರಿಕ ವ್ಯಕ್ತಿಯಾಗಿದ್ದು ಬೇಟೆಯ ಕಾಯಕ ಮಾಡುತ್ತ ಪೆರ್ಮಾಡಿರಾಯನ ಸೇವಾ ಕಾರ್ಯವನ್ನು ಆಶ್ರಯಿಸಿ ಶಿವಭಕ್ತರಿಗೆ ದಾಸೋಹಿಯಾಗಿ ಶರಣ ಜೀವನವನ್ನು ನಡೆಸಿದವನೀತ. ಬೇಟೆಯ ಕಾಯಕ ಶಿವಭಕ್ತರಿಗೆ ಹೊರತಾದುದು. ಪ್ರಾಣಿವಧೆಯನ್ನು ಶರಣರೆಂದೂ ಒಪ್ಪಿದವರಲ್ಲ. ಆದರೆ ಬೊಮ್ಮನಾಡುತ್ತಿದ್ದ ಬೇಟೆ ಲೋಕೋತ್ತರವಾದುದು. ಶಾಪಗತರಾಗಿ ಮೃಗವಾಗಿ ಕಾನನದೊಳಗೆ ಸುಳಿಯುತ್ತಿದ್ದ ಋಷಿಗಳನ್ನು ಆಯ್ಕೆ ಮಾಡಿ ಅವರ ಜನನದ ಬೇಟೆಯಾಡುವುದು ಆತನ ಒಂದು ಶೀವಲೀಲೆಯಾಗಿತ್ತೆಂದು ಕವಿ ಹರಿಹರನು ಬಣ್ಣಿಸುತ್ತಾನೆ.

ಹರಿಹರನು ತನ್ನ ಪುರಾತಣರ ರಗಳೆಯಲ್ಲಿ ಕೇಶಿರಾಜ ದಣ್ಣಾಯಕ ಹಾಗೂ ತೆಲಗು ಬೊಮ್ಮಯ್ಯ ನಡುವಿನ ಮಾತುಗಳ ವರ್ಣನೆ ಬಹು ಸೊಗಸಾಗಿ ಚಿತ್ರಿಸಿದ್ದಾನೆ. ಇದೊಂದು ಮಹತ್ವದ ಸನ್ನಿವೇಶವಾಗಿ ಕಂಡುಬಂದಿದೆ. ದಣ್ಣಾಯಕನು ಬೊಮ್ಮಯನಿದ್ದ ಶಿವಪುರಕ್ಕೆ ಬಂದು ಆತನ ಮನೆಯನ್ನು ಪ್ರವೇಶಿಸಿದಾಗ ಅಲ್ಲಿನ ಪಿಸಿತಮಾಲೆಯನ್ನು ಕಂಡು ಮನ ಹೇಸಿ "ಶಿವಭಕ್ತರಂ ದೂರದಿಂದ ಕೇಳುವುದು ಲೇಸು" ಎಂದು ಹಿಂದಿರುಗಿ ಆ ಪುರದ ಹೊರವಲಯದ ಶಿವಾಲಯವೊಂದರಲ್ಲಿ ಲಿಂಗಾರ್ಚನೆಯ ಸಿದ್ಧತೆಗೆ ತೊಡಗುತ್ತಾನೆ. ಇತ್ತ ಬೇಟೆಯಾಡಿ ಮನೆಗೆ ಬಂದ ಬೊಮ್ಮಯ್ಯ ಈ ವಾರ್ತೆಯನ್ನೆಲ್ಲ ತಿಳಿದುಕೊಂಡು ಕೇಶಿರಾಜನಿದ್ದಲ್ಲಿಗೆ ಬಂದು ಲಿಂಗಾರ್ಚನೆಗೆ ತನ್ನ ಮನೆಗೆ ಬರಬೇಕೆಂದು ಒತ್ತಾಯಿಸುತ್ತಾನೆ.[೪]

ಬೇಟೆಗಾರ, ಹಿಂಸೆಗಾರ, ಕೊಲೆಗಾರನಾದ ಬೊಮ್ಮಯ್ಯನಲ್ಲಿ ಶಿವಾರ್ಚನೆ ಮಾಡಿ ಪ್ರಸಾದ ಸ್ವೀಕರಿಸುವುದು ಹೇಗೆ ಎಂಬ ಗೊಂದಲಕ್ಕೆ ಒಳಗಾಗುತ್ತಾನೆ. ಇದನ್ನರಿತ ಬೊಮ್ಮಯ್ಯ 'ಸೋಮನಾಥಂ ಸಿಂಹಪೀಠಮನಗಲದಿರ್ಕೆ' ಎಂದೆನ್ನುತ್ತ ವಿಷಾದದಿಂದ ಮರಳಿ ಹೋಗುತ್ತಾನೆ. ಲಿಂಗವು ಕೇಶಿರಾಜನ ಅಂಗೈಗೆ ಬಾರದೆ ಗದ್ದುಗೆಯ ಮೇಲೆಯೇ ಉಳಿಯುತ್ತದೆ. ಕೊನೆಗೆ ಬೊಮ್ಮಯ್ಯನ ಮನೆಗೆ ಹೋಗಿ ಕೇಶಿರಾಜ ದಣ್ಣಾಯಕನು ಲಿಂಗಾರ್ಚನೆಯನ್ನು ಮಾಡಿ ಪ್ರಸಾದ ಸ್ವೀಕರಿಸುತ್ತಾನೆ. ತಳಗೆಯಲ್ಲಿ ಬಡಿಸಿದ ಪದಾರ್ಥಗಳೆಲ್ಲ ಪಕ್ವಾನ ತತಿಗಳಾಗಿ ಪರಿಣಮಿಸುತ್ತವೆ. ಬೊಮ್ಮಯ್ಯನ ಈ ಮಹಿಮೆಯನ್ನು ಕಂಡು

---

೪. ಹರಿಹರನ ರಗಳೆಗಳು

ಕೇಶಿರಾಜ ಬೆರಗಾಗುತ್ತಾನೆ. ಆತನಾಡುತ್ತಿದ್ದ ಕಾರಣಿಕ ಸ್ವರೂಪದ ಬೇಟೆಯ ಗುಟ್ಟನ್ನು ಅರಿತುಕೊಳ್ಳುತ್ತಾನೆ. ನಂತರ ಬೊಮ್ಮಯ್ಯನು ತನ್ನ ಲೀಲಾಮಯವಾದ ಜೀವಿತವನ್ನು ಮುಗಿಸಿ ಕೈಲಾಸಕ್ಕೆ ತೆರಳಿ ಗಣಪದವಿಯನ್ನು ಪಡೆಯುತ್ತಾನೆ.

ಹರಿಹರನು ನಿರೂಪಿಸುವ ಬೊಮ್ಮಯ್ಯನ ಬೇಟೆಯ ಪ್ರಸಂಗವನ್ನು ಬಹುಶ; ನಾವು ಬೇರೊಂದು ವಿಧದಲ್ಲಿ ಅರ್ಥೈಸಬಹುದು. ಬೇಡರ ಕಣ್ಣಪ್ಪನಂತೆ ಬೊಮ್ಮಯ್ಯನು ಮೊದಮೊಲಿಗೆ ಬಾಳಿ ದಣ್ಣಾಯಕನ ಪ್ರಭಾವಕ್ಕೊಳಗಾಗಿ ಮುಂದೆ ತನ್ನ ವೃತ್ತಿ ಮತ್ತು ಅಭಕ್ಷ ಭೋಜನವನ್ನು ಬಿಟ್ಟುಕೊಟ್ಟಿರಬೇಕು.

ಶಿವಶರಣರ ಅಹಿಂಸಾತತ್ವದತ್ತ ತಿರುಗಿದವನಾಗಿರಬೇಕು. ವೀರಶೈವ ಲಿಂಗನಿಷ್ಠೆ, ದಾಸೋಹಂಭಾವಗಳಂತಹ ಉನ್ನತ ಆಚಾರ ವಿಚಾರಗಳ ಜೊತೆಗೆ ಪರಸಮಯನಿಗ್ರಹದ ಆಶಯವನ್ನು ಹರಿಹರನು ಈ ರಗಳೆಯಲ್ಲಿ ನಿರೂಪಿಸಿದ್ದಾನೆ.

ಬಾಲಬೊಮ್ಮಯ್ಯ :

ವಚನಕಾರ ಬಾಲಬೊಮ್ಮಣ್ಣನ ಹೆಸರು ಗಮಸಹಸ್ರನಾಮದಲ್ಲಿದೆ. ಈತನ ವಚನಗಳು 'ವೀರಶೂರ', 'ರಾಮೇಶ್ವರಲಿಂಗ' ಅಂಕಿತದಲ್ಲಿವೆ. ಭೈರವೇಶ್ವರ ಕಾವ್ಯ ಹಾಗೂ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರಗಳಲ್ಲಿರುವ ಬಾಲಬೊಮ್ಮಣ್ಣನ ಕಥೆಯು ಹೀಗಿದೆ.[೫]

ಸಿದ್ಧರಾಮಯ್ಯನು ಸೊನ್ನಲಾಪುರದಲ್ಲಿ ಗುಡಿಗಳನ್ನು ಕಟ್ಟಿಸಿ ಲಿಂಗಪೂಜೆಯನ್ನು ನೇರವೇರಿಸುತ್ತಿದ್ದ. ಆ ಸಮಯದಲ್ಲಿ ಲಿಂಗಪ್ರತಿಷ್ಠಾಪಿಸಿ ಪೂಜಿಸುವುದಕ್ಕೆ ತನಗೆ ಎಳ್ಳಷ್ಟೂ ಹಣವಿಲ್ಲವೆಂದು ಬಾಲಬೊಮ್ಮಣ್ಣ ಚಿಂತಿಸುತ್ತಿದ್ದ. ಈತನ ಮನಸ್ಥಿತಿಯನ್ನು ತಿಳಿದ ಸಿದ್ಧರಾಮನು ಬೊಮ್ಮಣ್ಣನನ್ನು ತನ್ನ ಹತ್ತಿರ ಕರೆದು ಕೈಗೆ ಹಾರಿ, ಗುದ್ದಲಿ ಕೊಟ್ಟು ಅಂಗಳದಲ್ಲಿ ಅಗೆಯಲು ಹೇಳಿದ. ಹೀಗೆ ಬೊಮ್ಮಣ್ಣನು ನೆಲವನ್ನು ಅಗೆಯುತ್ತಿದ್ದಾಗ ಕೊಪ್ಪರಿಗೆ ಬಂಗಾರ ಲಭಿಸಿತು. ಈ ಸಂಪತ್ತಿನಿಂದ ಲಿಂಗದ ಗುಡಿಗಳನ್ನು ಕಟ್ಟಿಸಿದ. ಬಾಲಬೊಮ್ಮಣ್ಣ ಲಿಂಗಪೂಜೆ ಮಾಡುತ್ತ ಸುಖದಲ್ಲಿದ್ದನು. ಈತನ ವಚನಗಳು ಉಪದೇಶ ಪರವಾಗಿದ್ದರೂ ಅಲ್ಲಲ್ಲಿ ಭಾವಗೇತಾತ್ಮಕ ಅಂಶಗಳು ಮಿಂಚುತ್ತವೆ. ರೇವಣಸಿದ್ಧ, ಅನಿಮೀಷದೇವ, ಪ್ರಭುದೇವ, ಬಿಬ್ಬಿಬಾಚಯ್ಯ, ನೀಲಲೋಚನ ಹಾಗೂ ಓಹಿಲದೇವರನ್ನು ಭಕ್ತಿಭಾವದಿಂದ ತನ್ನ ವಚನಗಳಲ್ಲಿ ಸ್ತುತಿಸಿದ್ದಾನೆ.

ಸಮಗ್ರ ವಚನ ಸಂಪುಟ ೮ ಹಾಗೂ ಭೈರವೇಶ್ವರ ಕಾವ್ಯದಲ್ಲಿ ಬಾಲಬೊಮ್ಮಣ್ಣನ ಕುರಿತು ಉಲ್ಲೇಖಿಸಲಾಗಿದೆ.

---

೫. ವಚನ ಸಂಕೀರ್ಣ : ಡಾ. ಬಿ. ಆರ್. ಹಿರೇಮಠ : ಪು.ಸಂ. ೯೫

ಲೆಂಕ ಬೊಮ್ಮಯ್ಯ :

ಲೆಂಕ ಬೊಮ್ಮಯ್ಯನು ಭಕ್ತರ ಸೇವೆ ಮಾಡುವದನ್ನೇ ತನ್ನ ಕಾಯಕವನ್ನಾಗಿ ಇಟ್ಟುಕೊಂಡಿದ್ದನು. ಅವರು ಹೇಳಿದ ಕಾರ್ಯಗಳನ್ನು ಮಾಡಿ ಅವರು ಕೊಟ್ಟದ್ದನ್ನು ಸ್ವೀಕರಿಸಿ ಅದರಲ್ಲಿಯೇ ತೃಪ್ತನಾಗಿರುತ್ತಿದ್ದನು. ತಾನು ಮಾಡುವ ಸೇವೆಗಾಗಿ ಅವನು ಇಂತಿಷ್ಟೇ ತನಗೆ ಕೊಡಬೇಕೆಂದು ಯಾರನ್ನೂ ನಿರ್ಬಂಧಿಪಡಿಸುತ್ತಿದ್ದಿಲ್ಲ. ಇದರಿಂದ ಅವನಿಗೆ 'ಲೆಂಕ ಬೊಮ್ಮಯ್ಯ' ಎಂಬ ಹೆಸರು ಪ್ರಾಪ್ತವಾಯಿತು. 'ಫಲಪದದ ಆಸೆ ಮಾಡಲಾಗದು ನಿನ್ನ ಕ್ರಿಯೆಯಲ್ಲಿ ಬಯಕೆಯ ಭಕ್ತಿಯ ಪೂರ್ವ ಪುರಾತನರು ಮೆಚ್ಚರು' ಎಂದು ಶಿವಶರಣರ ನುಡಿಯುಂಟು. ಇದಕ್ಕನುಸರಿಸಿ ಲೆಂಕ ಬೊಮ್ಮಯ್ಯನು ಭಕ್ತರ ಸೇವೆಯನ್ನು ಮಾಡುತ್ತ ಬರುತ್ತಿದ್ದನು. ಇಂಥ ಸೇವೆಯು ಪಂಚಾಚಾರಗಳಲ್ಲಿ ಭೃತ್ಯಾಚಾರವೆಂದೆನಿಸಿಕೊಳ್ಳುತ್ತದೆ.

ಹೀಗೆ ಅವನು ಆಚರಿಸುತ್ತಿರಲು ಒಂದು ದಿನ ಅವನಿಗೆ ಒಬ್ಬ ಭಕ್ತನು ನಿನಗೆ ಸಂಬಳವನ್ನು ನಾನು ಕೊಡುತ್ತೇನೆ. ನನ್ನಲ್ಲಿರು ಎಂದು ನುಡಿಯಲು ಅದಕ್ಕೆ ಬೊಮ್ಮಯ್ಯನು 'ಶಿವಶಿವಾ, ನನಗೆ ಸಂಬಳವೆಂಬುದುಂಟೆ? ಇದ ಕೇಳಬಾರದು' ಎಂದು ಅನ್ನುತ್ತಿರಲು ಅವನಿಗೆ ನುಡಿದ ಈ ಶಬ್ದಗಳು ಮಸೆದಲಗಾಗಿ ತಾಗಿದಂತೆ ತಾಗಿದವು. ಆಗ ಅವನಲ್ಲಿ ಉಂಟಾದ ಉಮ್ಮಳದ ಮೂಲಕ ಅವನು ಮರಣೋನ್ಮುಖನಾಗಲು ಶಿವನು ಅವನ ನಡೆಗೆ ಮೆಚ್ಚಿ ಅವನನ್ನು ತನ್ನ ಹೃದಯದಲ್ಲಿ ಬಿಟ್ಟುಕೊಂಡನು.

ಶಿವಶರಣರು 'ಮಾಡಿ ನೀಡಿ ಹೋಹೆನೆಂಬಾಗ ಕೈಲಾಸವೇನು ಕೈ ಕೂಲಿಯೇ? ಮುಂದೊಂದು ಕಲ್ಪಿಸದೆ, ಹಿಂದೊಂದು ಭಾವಿಸದೆ ಸಲೆಸಂದಿದ್ದಾಗಳೇ ಕೈಲಾಸ' ಎಂದು ಪ್ರತಿಫಲವನ್ನಪೇಕ್ಷಿಸದೆ ಸೇವೆ ಮಾಡುವುದನ್ನು ಹೇಳಿದ್ದಾರೆ. ಅವರು ತಾವು ಮಾಡುವದು ಕೆಲವೊಂದು ಕೈಕೂಲಿಯ ಸಲುವಾಗಿ ಎಂದು ಭಾವಿಸುವುದಿಲ್ಲ. ಈ ಪ್ರಕಾರ ಲೆಂಕ ಬ್ರಹ್ಮಯ್ಯನು ಆಚರಿಸಿದ್ದಾನೆ.

ಅಧ್ಯಾಯ - ೩

ಬೊಮ್ಮಯ್ಯನ ಚಾರಿತ್ರಿಕ ಸಂಗತಿಗಳು

ಅಧ್ಯಾಯ - ೩
ಬೊಮ್ಮಯ್ಯನ ಚಾರಿತ್ರಿಕ ಸಂಗತಿಗಳು

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಮುಖ ವಚನಕಾರರ ವಿವರ ಸಿಗುವಂತೆ ಬಾಹೂರ ಬೊಮ್ಮಯ್ಯನ ಬಗ್ಗೆ ವಿವರವಾದ ಮಾಹಿತಿಯು ಉಪಲಬ್ಧವಿಲ್ಲ. ಹರಿಹರನ ರಗಳೆಗಳಲ್ಲಿ ಮತ್ತು ಭೀಮಕವಿಯ ಬಸವಪುರಾಣದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ 'ಸಮಗ್ರ ವಚನ ಸಂಪುಟ ೮' ರಲ್ಲಿ ಬೊಮ್ಮಯ್ಯನ ಬಗ್ಗೆ ಕಲವು ಸಂಗತಿಗಳು ತಿಳಿದುಬರುತ್ತವೆ. ಸಮಗ್ರ ವಚನ ಸಂಪುಟದ ೮ನೇ ಸಂಪುಟವನ್ನು ಸಂಪಾಧಿಸಿದ ಡಾ. ಬಿ. ಆರ್. ಹಿರೇಮಠರವರು ಬಾಹೂರ ಬೊಮ್ಮಯ್ಯನ ೪೧ ವಚನಗಳನ್ನು ಸಂಗ್ರಹಿಸಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬೊಮ್ಮಯ್ಯನ ಹೆಸರಿನ ೧೧ ಜನ ಶಿವಶರಣರು ಉಲ್ಲೇಖಗೊಂಡಿದ್ದಾರೆ.

೧) ಕನ್ನದ ಬೊಮ್ಮಿದೇವ
೨) ಬಿಲ್ಲೇಶ ಬೊಮ್ಮಯ್ಯ
೩) ಕರವಾಳ ಬೊಮ್ಮಯ್ಯ
೪) ಕಲಕೇತ ಬೊಮ್ಮಯ್ಯ
೫) ಕಿನ್ನರ ಬೊಮ್ಮಿದೇವ
೬) ತೆಲಗು ಬೊಮ್ಮಯ್ಯ
೭) ಬರಿಹೋರಿ ಬೊಮ್ಮಯ್ಯ
೮) ನಾಗೂರು ಬೊಮ್ಮಯ್ಯ
೯) ಮುಂಡ ಬೊಮ್ಮಯ್ಯ
೧೦) ಲೆಂಕದ ಬೊಮ್ಮಯ್ಯ
೧೧) ಬಾಹೂರ ಬೊಮ್ಮಯ್ಯ

ಈ ಮೇಲಿನ ಹನ್ನೊಂದು ಜನ ಶಿವಶರಣರಲ್ಲಿ ಬಾಹೂರ ಬೊಮ್ಮಯ್ಯನು ಒಬ್ಬನಾಗಿದ್ದಾನೆ. ವಚನ ಸಂಪುಟ-೨೫ ರಲ್ಲಿ ಡಾ. ಬಿ. ಆರ್. ಹಿರೇಮಠರವರು ಬಾಹೂರ ಬೊಮ್ಮಯ್ಯನು ಕಲ್ಯಾಣ ಸಮೀಪದ ಬಾಹೂರು ಗ್ರಾಮದವನೆಂದು ಹೇಳುತ್ತಾರೆ. ಅದಲ್ಲದೆ ಇತನದು ತೋಟಗಾರಿಕೆ ವೃತ್ತಿ ಎಂದು ತಿಳಿಸಿದ್ದಾರೆ.[೧]

ಇದೇ ಅಭಿಪ್ರಾಯವನ್ನು ಡಾ. ವ್ಹಿ. ಎಸ್. ಮಾಳಿಯವರು ತಮ್ಮ ಅಪ್ರಕಟಿತ 'Minor Research Project' ನಲ್ಲಿ ಬೊಮ್ಮಯ್ಯನು ತೋಟಗಾರಿಕೆ ವೃತ್ತಿಯವನೆಂದು ಅಭಿಪ್ರಾಯಪಟ್ಟಿದ್ದಾರೆ. ವಚನಗಳ ಆಶಯಗಳನ್ನು ಮತ್ತು ಇತರ ಆಕರಗಳನ್ನು ಕಲೆಹಾಕಿ

ಬೊಮ್ಮಯ್ಯ ಯಾವ ಜನಾಂಗಕ್ಕೆ ಸೇರಿದವನೆಂಬುದನ್ನು ವಿದ್ವಾಂಸರು ಗಮನಹರಿಸುತ್ತಾರೆಂದು ನಂಬಿದ್ದೇನೆ.

ಕರ್ನಾಟಕ ಸರಕಾರದ ಅಂತರ್ಜಾಲ ತಾಣದಲ್ಲಿ ಬಾಹೂರ ಬೊಮ್ಮಯ್ಯನು ಹೂವಿನ ವೃತ್ತಿ ಮಾಡಿಕೊಂಡಿದ್ದ ಒಬ್ಬ ಶಿವಭಕ್ತನೆಂದು ಪ್ರಕಟಿಸಲಾಗಿದೆ. ಈ ಬೊಮ್ಮಯ್ಯನು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಾಹೂರು ಗ್ರಾಮದಲ್ಲಿ ಜನಸಿದ್ದಾನೆಂದು ಅಂತರಜಾಲದಲ್ಲಿ ತಿಳಿಸಲಾಗಿದೆ. ಇವರು ಕೂಡಾ ಈ ಬೊಮ್ಮಯ್ಯನ ವೃತ್ತಿ ತೋಟಗಾರಿಕೆ ಎಂದೇ ಹೇಳಿದ್ದಾರೆ. ಈತನ ಕಾಲ ೧೧೬೦ ಎಂದು ಇಲ್ಲಿ ತಿಳಿಸಲಾಗಿದೆ.

ಹರಿಹರ ಮಹಾಕವಿಯ ಬಾಹೂರು ಬೊಮ್ಮಯ್ಯನ ಕುರಿತು ರಗಳೆಗಳನ್ನು ಬರೆದಿದ್ದಾನೆ. ಅದರಂತೆ ಇತರ ಶಿವಶರಣರಾದ ಕನ್ನಡ ಬೊಮ್ಮಿದೇವ, ಬಿಲ್ಲೇಶ ಬೊಮ್ಮಯ್ಯ, ಕರವಾಳ ಬೊಮ್ಮಯ್ಯ, ಕಲಕೇತ ಬೊಮ್ಮಯ್ಯ, ಕಿನ್ನರ ಬೊಮ್ಮಿದೇವ, ತೆಲಗು ಬೊಮ್ಮಯ್ಯ, ಬರಿಹೋರಿ ಬೊಮ್ಮಯ್ಯ, ನಾಗೂರ ಬೊಮ್ಮಯ್ಯ, ಮುಂಡಬೊಮ್ಮಯ್ಯ, ಲೆಂಕದ ಬೊಮ್ಮಯ್ಯರನ್ನು ಕುರಿತು ರಗಳೆಗಳನ್ನು ರಚಿಸಿದ್ದಾನೆ.

'ಭೀಮಕವಿಯ ಬಸವಪುರಾಣ' ಮತ್ತು ಹರಿಹರ ಕವಿಯ ಬಾಹೂರ ಬೊಮ್ಮಯ್ಯನ ರಗಳೆ ಇವೆರಡು ಬೊಮ್ಮಯ್ಯನ ಪವಾಡಗಳ ಕುರಿತು ತಿಳಿಸುತ್ತವೆ. ಭೀಮಕವಿಗಿಂತ ಹರಿಹರ ವಚನಕಾರರಿಗೆ ಹೆಚ್ಚು ಸಮೀಪದವನಾಗಿದ್ದಾನೆ. ಹರಿಹರ ಭಕ್ತಕವಿಯಾದುದರಿಂದ ಬೊಮ್ಮಯ್ಯನ ಭಕ್ತಿಯ ವಿವಿಧ ಮಜಲುಗಳನ್ನು ತುಂಬಾ ಸೊಗಸಾಗಿ ನಿರೂಪಿಸುತ್ತಾನೆ. ಹರಿಹರ ತನ್ನ ಕಾವ್ಯಕ್ಕೆ ರಗಳೆಯ ಮಾಧ್ಯಮವನ್ನು ಬಳಸಿಕೊಂಡರೆ ಭೀಮಕವಿಯು ಷಟ್ಪದಿಯಲ್ಲಿ ಬೊಮ್ಮಯ್ಯನ ಭಕ್ತಿಯನ್ನು ಹಿಡಿದಿಟ್ಟಿದ್ದಾನೆ.

ಹರಿಹರ ಕವಿಯು "ಕಲ್ಯಾಣಪುರವಾ ಪುರಪ್ರಾಂತದೊಳ್ ಎಸವುದಂತೊಂದು ಯೋಜನದ ಪ್ರಮಾಣದೊಳ್ ಶಿವನ ತೋಳ್ತೊಡೆಯ ಪೆಸರಿಟ್ಟರಂದೊಪ್ಪದಿಂ ಭುವನದೊಳ್ಬಾಹೊರೆನಿಪ್ಪೊಂದು ನಾಮದಿಂ ಒಪ್ಪುವಾ ಪುರದೊಳೊರ್ವಂ ಶರಣನಿರುತಿರ್ಪ" ಎಂದು ಹೇಳುತ್ತಾ ಆ ಬಾಹೂರು ಪಟ್ಟಣವು ಶಿವನ ತೋಳಿನಂತೆ, ತೊಡೆಯಂತೆ ಅಪ್ರತಿಮವಾಗಿ ಮೆರೆಯುತ್ತಿತ್ತೆಂಬುದನ್ನು ತಿಳಿಸುತ್ತಾನೆ. ಬೊಮ್ಮಯ್ಯನ ಪರಿಸರ ಶಿವಸದನವಾಗಿತ್ತು. ಜಗತ್ತಿಗೆ ಈ ಬೊಮ್ಮಯ್ಯ ಚಾರಿತ್ರವಂತನೆಂಬುದನ್ನು ಹರಿಹರ ತನ್ನ ರಗಳೆಯ ಮುಖಾಂತರ ತೋರಿಸಿ ಕೊಡುತ್ತಾನೆ.[೧]

ಭೀಮಕವಿಯ ಬಸವಪುರಾಣದ ಸಂಧಿ-೨೧ ಹಾಗೂ ಪದ್ಯ ೭ ಮತ್ತು ೮ ರಲ್ಲಿ ಬೊಮ್ಮಯ್ಯನು ಹೂವುಗಳನ್ನು ತಿರಿದು ತರುವ ಕಾಯಕವನ್ನು ಮಾಡುತ್ತಿದ್ದನೆಂಬುದನ್ನು ಹೇಳಿದ್ದಾನೆ.

---

೧. ಕೃಪೆ : ಕರ್ನಾಟಕ ಸರಕಾರ

ಇಲಿದು ಜಂಗಮಲಿಂಗ ಗುರುಪದ
ಜಲಜ ಪರಿಚಯ ಕ್ರಿಯಾ ಸಂ
ಕಲಿತ ಭಕ್ತಿಯೊಳಲಸದಾಗಳು ಮಾಡಬೇಕೆಂದು
ಹಲವು ಹೂದೋಟಗನರ್ಚಿಸಿ
ಬೆಳಗು ಜಾವಿನಲೆದ್ದು ಕುಕ್ಕುಟ
ನುಲಿಯ ಲೊಡನಂತೆಯ್ದೆ ಕುಯಿತೆಂದು

ಕುಸುಮಮಾಲೆಗಳಂ ರಚಿಸಿ ತಂ
ದೊಸೆದು ಭಕ್ತರಿಗಿತ್ತು ತಾ ನಿ
ತ್ಯಶನ ಕಾಯಕ ಲಬ್ದಿಯಲಿ ಜಂಗಮಕೆ ಮಾಡುತ್ತ
ಪೆಸರು ಪಸರಿಸಿ ಕೀರ್ತಿಸುತ್ತಿದೆ
ವಸುಧೆಯೊಳು ಮತ್ತೊಂದು ವಾದದೊ
ಳಸಮಭರ್ಗನೆ ಕರ್ತನೆಂಬುದದಂ ಪ್ರತಿಷ್ಠಿಸಿದ...

ಬೆಳಗಿನ ಜಾವ ಬೇಗನೆ ಎದ್ದು ಹೂದೋಟವನ್ನು ಹೊಕ್ಕು ಪರಿಮಳಭರಿತವಾದ ಸುಂದರ ಪುಷ್ಪಗಳನ್ನು ಈತನು ಆಯ್ದುಕೊಳ್ಳುತ್ತಾನೆ. ಭೀಮಕವಿಯು 'ಸುಳಿದ ಫಾಳಿಂಗೊಡೆದೆಸಳ ನಯವಾದ ತಚ್ಚಿದುಪುಸೂನಾಲೆಗಳಿಗಳಿ ತ್ಯಜಿಸಿ' ಗಾಳಿಹೊಡೆದು ಉರುಳಿದ, ನೆಲಕ್ಕೆ ಬಿದ್ದ ಮತ್ತು ಸುವಾಸನೆ ಕಳೆದುಕೊಂಡ ಹೂಗಳನ್ನು ಆಯ್ದುಕೊಳ್ಳಲಾರದೆ ಪೊಚ್ಚಪೊಸ ಹೂಗಳನ್ನು ಮಾತ್ರ ಆತ ಆಯ್ದುಕೊಂಡು ತನ್ನ ಇಷ್ಟದೇವತೆಗೆ ಸಮರ್ಪಿಸುತ್ತಿದ್ದನೆಂದು ಭೀಮ ಕವಿಯು ಹೇಳುತ್ತಾನೆ.[೨]

ಈತ ಮಾಡುವ ಕ್ರಿಯೆಯನ್ನು ನೋಡಿದರೆ ಮತ್ತು ಹೂವಿನ ಬಗ್ಗೆ ಅವನಿಗೆ ಸ್ಪಷ್ಟವಾದ ತಿಳುವಳಿಕೆ ಇರುವುದರಿಂದ ಅವನ ವೃತ್ತಿಯು ಹೂಗಾರಿಕೆ, ಮಾಲಿಗಾರಿಕೆ ಆಗಿರಬಹುದೆ ಶೋಧಿಸಬೇಕು.

ಭೀಮಕವಿಯಾಗಲಿ, ಹರಿಹರನಾಗಲಿ ಶರಣರನ್ನು ವೃತ್ತಿಯಿಂದ ಪರಿಗಣಿಸುವುದಿಲ್ಲ. ಶರಣರ ಅಂತರಂಗದಲ್ಲಿ ಹುದುಗಿದ ಅಪ್ಪಟ ಭಕ್ತಿಯನ್ನು ಅವಲಂಬಿಸಿ ಅವರ ವ್ಯಕ್ತಿತ್ವವನ್ನು ತಮ್ಮ ಕಾವ್ಯಗಳಲ್ಲಿ ಕಟ್ಟಿಕೊಡುತ್ತಾರೆ. ನಮ್ಮ ಅಧ್ಯಯನ ಮುಖ್ಯ ಉದ್ದೇಶ ಬೊಮ್ಮಯ್ಯನು ಆಗಿರುವುದರಿಂದ ಅವನ ವ್ಯಕ್ತಿತ್ವವನ್ನು ಕಟ್ಟಿಕೊಡಲು ಅವನಿಂದ ರಚಿತವಾದ ವಚನಗಳನ್ನು ಅವಲೋಕಿಸಬೇಕಾಗುತ್ತದೆ. ಆದ್ದರಿಂದ ಬೊಮ್ಮಯ್ಯನ ಸಮಕಾಲೀನರಾದ ಕನ್ನಡ ಬೊಮ್ಮಿದೇವ, ಬಿಲ್ಲೇಶ ಬೊಮ್ಮಯ್ಯ, ಕರವಾಳ ಬೊಮ್ಮಯ್ಯ, ಕಲಕೇತ ಬೊಮ್ಮಯ್ಯ,

೨. ಭೀಮಕವಿಯ ಬಸವ ಪುರಾಣ : ಡಾ. ವಿದ್ಯಾಶಂಕರ

ಕಿನ್ನರ ಬೊಮ್ಮಿದೇವ, ತೆಲಗು ಬೊಮ್ಮಯ್ಯ, ಬರಿಹೋರಿ ಬೊಮ್ಮಯ್ಯ, ನಾಗೂರ ಬೊಮ್ಮಯ್ಯ, ಮುಂಡಬೊಮ್ಮಯ್ಯ, ಲೆಂಕದ ಬೊಮ್ಮಯ್ಯ ಈ ಎಲ್ಲ ಮೇಲಿನ ಶಿವಶರಣರನ್ನು ಕುರಿತು ಅಧ್ಯಯನ ಮಾಡುವುದು ನಮ್ಮ ಮೀತಿಯಿಂದ ಆಚೆಯ ಮಾತು. ಬೊಮ್ಮಯ್ಯನ ಒಟ್ಟು ಬದುಕನ್ನು ಹರಿಹರ ಮತ್ತು ಭೀಮಕವಿಯು ಗುರುತಿಸಿದಂತೆ ಅಲ್ಲದೆ ಬೊಮ್ಮಯ್ಯನ ವಚನಗಳ ಆಂತರಿಕ ಅಂಶಗಳ ಹಿನ್ನಲೆಯಲ್ಲಿ ಬೊಮ್ಮಯ್ಯನ ವ್ಯಕ್ತಿತ್ವವನ್ನು ನಿರೂಪಿಸುವುದು ಸೂಕ್ತವೆನಿಸುತ್ತದೆ.

ಹರಿಹರ ಕಂಡಂತೆ ಬೊಮ್ಮಯ್ಯ :

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯದ ತರುವಾಯ ತಟ್ಟನೆ ನಮ್ಮ ಗಮನ ಸೆಳೆಯುವ ಅತ್ಯಂತ ಪ್ರಭಾವಿ ಭಕ್ತ ಕವಿಯೆಂದರೆ ಹರಿಹರ. ಅವನು ೬೩ ಪುರಾತಣರನ್ನು ಕುರಿತು ರಗಳೆಗಳನ್ನು ಬರೆದಿದ್ದಾನೆ. ಶಿವನಿಷ್ಟರಾದ ಈ ಭಕ್ತರ ಚರಿತ್ರೆಯನ್ನು ಹರಿಹರ ಭಕ್ತಿ ರಸದಲ್ಲಿ ತಿದ್ದಿತಗೆದಿದ್ದಾನೆ.

ಬಾಹೂರ ಬೊಮ್ಮಯ್ಯನನ್ನು ಕುರಿತು ರಚಿಸಿದ ರಗಳೆಯಲ್ಲಿ ಹರಿಹರನ ನಿಲುವು ಆಘಾದವು, ಆಶ್ಚರ್ಯಕರವು ಆಗಿದೆ. ಬಸವಣ್ಣನ ತರುವಾಯ ರಾಜಸತ್ತೆಯನ್ನು ಎದುರು ಹಾಕಿಕೊಂಡ ಶಿವಶರಣರಿಗೆ ಮಾತ್ರ ಬಾಗುವ ಅಚಲ ನಿಷ್ಠೆಯನ್ನು ಹರಿಹರ ಬೊಮ್ಮಯ್ಯನ ಮುಖಾಂತರ ತೋರಿಸಿಕೊಡುತ್ತಾನೆ. ಪಿರ್ಮಾಡಿಯ ಮದವೇರಿದ ಆನೆ ರಾಜಬೀದಿಯಲ್ಲಿ ಜನಜಂಗುಳಿಗೆ ಹಿಂಸೆ ಕೊಡುವ ಸಂದರ್ಭವನ್ನು ಕಂಡ ಶಿವಶರಣ ಬೊಮ್ಮಯ್ಯ ಅದನ್ನು ಪ್ರತಿಭಟಿಸುತ್ತಾನೆ. ಶಿವಶರಣರ ಕಷ್ಟಗಳನ್ನು ನೋಡದೆ ಅವರ ನೋವುಗಳಿಗೆ ಸ್ಪಂದಿಸಿದ ರಾಜ ಅವನು ರಾಜನೇ ಅಲ್ಲ. ಆನೆಯು ಯಾರದಾದರೇನು ಅದರ ಉದ್ಧಟತನವನ್ನು ನಾಶಮಾಡಲೆಬೇಕೆಂದು ಬೊಮ್ಮಯ್ಯ ಆನೆಯನ್ನು ಎದುರು ಹಾಕಿಕೊಳ್ಳುವ ಪ್ರಸಂಗ ಹರಿಹರನಲ್ಲಿ ಅದ್ಭುತವಾಗಿ ಮೂಡಿಬಂದಿದೆ.

ಬೊಮ್ಮಯ್ಯ ಆನೆಯೊಂದಿಗೆ ಸೆಣಸಾಟ ಮಾಡುವುದೇನು ಸರಿ. ಆದರೆ ಇದು ಸಾಮಾನ್ಯವಾದ ಆನೆಯಲ್ಲ. ಮದವೇರಿದ ರಾಜನ ದರ್ಬಾರದ ಆನೆ. ಇದನ್ನು ಎದುರು ಹಾಕಿಕೊಳ್ಳುವುದು ಒಂದರ್ಥದಲ್ಲಿ ರಾಜನನ್ನೆ ಎದುರು ಹಾಕಿಕೊಂಡಂತೆ. ಹರಿಹರ ಈ ರಗಳೆಯ ಮೂಲಕ ಅರಸೊತ್ತಿಗೆಯನ್ನು ಪ್ರಶ್ನಿಸುತ್ತಾ ವೈಚಾರಿಕ ಕ್ರಾಂತಿಯನ್ನು ಮೆರೆದಿದ್ದಾನೆ. ಬೊಮ್ಮಯ್ಯನ ಹೋರಾಟ ಬರಿ ಆನೆಯೊಂದಿಗಿನ ಹೋರಾಟವಲ್ಲ. ಅದು ಪ್ರಭುತ್ವದ ವಿರುದ್ಧದ ಸೆಣಸಾಟ.

ಶ್ರೀಮೇರುವಿಂಗೆ ದಕ್ಷಿಣದಿಶಾಭಾಗದೊಳ್
ಭೂಮಿಗೆ ವಿಚಿತ್ರವೆಂದೆನಿಪುದತಿರಾಗದೊಳ್
ಹೆಸರು ಕಲ್ಯಾಣಪುರವಾ ಪುರಪ್ರಾಂತದೊಳ್

---

೩. ಹರಿಹರನ ರಗಳೆಗಳು : ಡಾ. ಎಂ. ಎಂ. ಕಲಬುರ್ಗಿ

ಎಸೆವುದಂತೊಂದು ಯೋಜನದ ಪ್ರಮಾಣದೊಳ್
ಶಿವನ ತೋಳ್ತೊಡೆಯ ಪೆಸರಿಟ್ಟರಂದೊಪ್ಪದಿಂ
ಭುವನದೊಳ್ವಾಹೂರೆನಿಪ್ಪೊಂದು ನಾಮದಿಂ

ಒಪ್ಪುವಾ ಪುರದೊಳೊರ್ವಂ ಶರಣನಿರುತಿರ್ಪ
ನಪ್ರತಿಮನತುಳಬಳನಭವನಾಜ್ಞೆಯೊಳಿರ್ಪ
ಆತನ ಪೆಸರ್ಬೊಮ್ಮತಂದೆಯೆಂಬುದು ಜಗಕೆ
ನೂತನಂ ತನ್ನ ಚಾರಿತ್ರವೀ ಕಲಿಯುಗಕೆ
ನೇಮಸ್ತನುತ್ತಮಸ್ನೇಹಿ ಪರಮಧ್ಯಾನಿ
ಕಾಮಹರನಚಲಭಕ್ತಿಯ ಭಾವದಭಿಮಾನಿ
ಆರ್ತಪರನತಿಕರುಣಿ ನಿರ್ಮಳಂ ನಿಶ್ಚಳಂ
ಸ್ವಾರ್ತವೆನಿಸುವ ಶಿವನ ಭಕ್ತಿಭರದುಜ್ವಳಂ
ಮಾಹೇಶ್ವರರ್ಬಂದಡಿದಿರಾಗಿ ಮೆಯ್ಯಿಕ್ಕಿ
ಆಹಾ ಎನುತ್ತೆದ್ದು ಗಣಪದಕೆ ಮೆಯ್ಯಿಕ್ಕಿ
ನಿಂದು ಕೈಮುಗಿದೆನ್ನ ಪುಣ್ಯವೆಯ್ತಂದುದೇ
ಇಂದುಧರನತುಳ ಸುಖವೊಲಿದು ಕವಿತಂದುದೇ
ಎನ್ನ ಭಾಗ್ಯದ ಬೆಳಸು ವಿಪುಳಫಳಮಾದುದೇ
ಎನ್ನ ಹೆಂಪಿನ ಹೆಚ್ಚು ಸುಧೆಯುಮಿದಿರಾದುದೇ

ಶಿವನ ಸಂತತಿ ಕರುಣದಿಂದ ನಡೆತಂದುದೇ
ಶಿವನ ಬಳಗಂ ಭಕ್ತಿಯಂ ಕುಡಲ್ಬಂದುದೇ
ಎಂದು ಬಿಜಯಂಗೈಸಿ ತಂದು ಮಿಗೆ ಸಡಗರಿಸಿ
ಸಂದಣಿಪ ಹರುಷದಿಂದುಚ್ಚಾಸನದೊಳಿರಿಸಿ
ಪುಳಕತತಿ ಪೊಣ್ಮುತಿರೆ ಚರಣಂಗಳಂ ತೊಳೆದು
ನಲಿದು ಪಾದೋದಕಂಗಳನೊಲುಮೆಯಿಂ ತಳೆದು
ಭಾಳದೊಳಗೊಲಿದೊತ್ತಿ ಕಂಗಳೊಳಗೊಲಿದೊತ್ತಿ
ಮೇಲೆನಿಪ ಉತ್ತಮಾಂಗದೊಳು ಉರದೊಳಗೊತ್ತಿ
ಆನಂದದಿಂದಮಾರೋಗಿಸಲ್ಕಿಕ್ಕುತಂ
ನಾನಾ ಸುಖಂಗಳಂ ತರದಿಂದೆ ಸಾರ್ಚುತಂ
ಹೊನ್ನ ರನ್ನದ ತೊಡವು ನವ್ಯವಸ್ತ್ರವನಿತ್ತು
ಮನ್ನಿಸುತ್ತವರಂಘ್ರಿಗಳನಳ್ತಿಯಿಂ ಪೊತ್ತು
ಕಳಿಪುವಂ ಶರಣತತಿ ಪರಸುತಿರೆ ರಾಗದಿಂ
ಇಳಿಪುವಂ ಸಂಸಾರಭಾರಮಂ ಬೇಗದಿಂ

ಬಾಹೂರು ಎಂಬುದೊಂದು ಹಳ್ಳಿ. ಅಲ್ಲಿ ಅಪ್ರತೀಮನಾದ ಮತ್ತು ಅತ್ಯಂತ ಬಲಶಾಲಿಯಾದ ಪರಮಶಿವಭಕ್ತನಾದ ಬೊಮ್ಮಯ್ಯನು ವಾಸಮಾಡುತ್ತಿದ್ದನು. ಬೊಮ್ಮಯ್ಯ ಚಾರಿತ್ರವಂತನು, ನೇಮಸ್ತನು, ಸ್ನೇಹಮಹಿಯು, ಅಭಿಮಾನಿಯೂ, ಪರಮಧ್ಯಾನಿಯು ನಿರ್ಮಲವಚನ ಹೊಂದಿದವನು ನಿಸ್ವಾರ್ಥನು, ಕರುಣಾಮಯನು ಆಗಿದ್ದನೆಂದು ಹರಿಹರ ಬಣ್ಣಿಸುತ್ತಾನೆ.

ಬೊಮ್ಮಯ್ಯನು ಶಿವಶರಣರನ್ನು ಕಂಡು ಅವರಿಗೆ ತಲೆಬಾಗಿ ಮೈಯಿಕ್ಕಿ ಯಾವ ಸೇವೆ ಮಾಡಬೇಕೆಂಬುದನ್ನು ವಿನಮ್ರಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದನು. ಅವರ ಪಾದೋದಕ ತೊಳೆದು ಅವರ ಪಾದಪದ್ಮಗಳಿಗೆ ನಮಸ್ಕರಿಸಿ ಅವರಿಗೆ ಕೂಡು ಸುಖಾಸನಗಳನ್ನು ಕೊಟ್ಟು ಹೊನ್ನು, ರನ್ನ, ವಸ್ತ್ರ, ವೈಡೂರ್ಯಗಳನ್ನು ನೀಡಿ ಸಂತೋಷಪಡಿಸುತ್ತಿದ್ದನು. ಬೊಮ್ಮಯ್ಯನಿಗೆ ಕೊಟ್ಟು ಸಂತೋಷವೇ ಹೊರತು ಇಟ್ಟು ಸಂತೋಷವಿಲ್ಲ. ಹೀಗೆ ಶಿವಶರಣರನ್ನು ಸಂತೋಷಿಸುತ್ತಾ ಅವರ ಸೇವೆಗೈಯುತ್ತಾ ಕಾಲಕಳೆಯುವಾಗ ಒಂದು ಮಹತ್ವದ ಘಟನೆ ನಡೆಯುತ್ತದೆ.

ಬೊಮ್ಮಯ್ಯನು ಶಿವಾರ್ಚನೆ ಮಾಡಿಕೊಂಡು ಪುರಹೊರಗೆ ರಾಜಬೀದಿಯಲ್ಲಿ ನಡೆದು ಬರುವಾಗ ದಾರಿಯಲ್ಲಿ ಜೋಳದ ರಾಶಿಯನ್ನು ಕಾಣುತ್ತಾನೆ. ಅದು ನರರ ಜೀವನ ರಂಜಿಸುತ್ತಿರ್ಪ ಹೊಸರಾಶಿ ಎಂದು ಸಂತೋಷದಿಂದ ಹೇಳಿಕೊಂಡಾಡುತ್ತಾ ಬರುವಾಗ ಒಬ್ಬ ಜೈನ ಯತಿಯು ಬೊಮ್ಮಯ್ಯನನ್ನು ಟೀಕಿಸುತ್ತಾನೆ. ಇದರಿಂದ ಸಿಡಿಮಿಡಿಗೊಂಡು ಬೊಮ್ಮಯ್ಯ ಪರಮಾತ್ಮನ ಅರಿಯದ ಅವಿವೇಕಿಗಳಿಗೆ ಆ ಜೋಳದ ಬೆಳೆಯಿಂದಲೇ ಶಿವನು ಎದ್ದು ಬರುವಂತೆ ಪವಾಡ ಮಾಡುತ್ತಾನೆ. ಇದಲ್ಲದೆ ಆ ಜೋಳಕ್ಕೆ 'ಶಂಕರಗಂಡ' ಎಂಬ ಹೆಸರನ್ನು ಕೂಡಾ ಇಡುತ್ತಾನೆ.

ದೇವಾ ನಿಂ ನೆನೆಯಿಸಲು ನೆನೆಪಿನೆಲೆ ಶಂಕರಾ
ದೇವಾ ನಿಂ ನುಡಿಸಲು ನುಡಿವೆನೆಲೆ ಶಂಕರಾ
ದೇವಾ ನಿಂ ನಡೆಯಿಸಲಾ ನಡೆಯುತ್ತರ್ಪ್ಪನೆ ಶಿವನೆ
ದೇವೆಂತಿರಿಸಿದೆಂತೆರ್ಪಿದಲೆ ಭವನೆ
ದೇವ ನೀನಾಡಿಸುತ್ತಿರ್ಪ ಜಂತ್ರದ ರೂಪು
ದೇವ ಎನಗಾವಗಂ ನಿಮ್ಮ ಕರುಣದ ರೂಪು
ಎಂದು ಬಿನ್ನೈಸುತಂ ಭರ್ಗನಂ ಬೀಳ್ಕೊಂಡು
ಇಂಥುಧರನಲ್ಲಿ ಕಾರುಣ್ಯಮಂ ಕೆಳೆಗೊಂಡು
ತಿರುಗಿದಂ ಬಾಹೂರ ಕಡೆಗೆ ಕಟ್ಟಭಿಮಾನಿ
ಹರನ ಪುರಹರನ ಶಶಿಧರನ ಪರಮಧ್ಯಾನಿ

ಹೀಗೆ ಹಲವು ಪರಿಯಿಂದ ಶಿವನನ್ನು ಪ್ರಾರ್ಥಿಸಿ ಅವನ ಮೆಚ್ಚುಗೆಗೆ ಪಾತ್ರನಾಗುತ್ತಾನಲ್ಲದೆ ಆ ಸವಣಂಗೆ ಪಾಠವನ್ನು ಕಲಿಸುತ್ತಾನೆ.

ಹರಿಹರ ಉಲ್ಲೇಖಿಸಿದ ಇನ್ನೊಂದು ಸಂಗತಿ ಬೊಮ್ಮಯ್ಯ ಕಲ್ಲು ನಂದಿಗೆ ಕಬ್ಬು ತಿನ್ನಿಸಿದ ಪ್ರಸಂಗ.

ಕುಣಿವುತಂ ಬಾಹೂರ ಬೊಮ್ಮಯ್ಯನೆಯ್ತಂದು
ತ್ರಿಣಯನಸುವಾಹನಕೆ ಮೆಯಿಕ್ಕುತಂ ನಿಂದು
ದೇವ ಆರೋಗಿಸುವುದಿಕ್ಷುದಂಡಂಗಳಂ
ದೇವ ಕೈಕೊಂಬುದೀ ಸವಿಯ ತಂಡಂಗಳಂ
ಎನಲಲ್ಲಿ ನಂದೀಶ್ವರಂ ಸುಮ್ಮನಿರುತಿರಲ್
ಮನದೊಳಗೆ ಶಿವಲಿಂಗಮಂ ಭಾವಿಸುತ್ತಿರಲ್
ಅರಿದೆನರಿದೆಂ ದೇವ ನಿನ್ನೊಳೊಂದುತ್ತಮಂ
ಅರಿದೆನಭವಪ್ರಸಾದಾಸಕ್ತಚಿತ್ತಮಂ
ಎನುತಿಕ್ಷುವೆಲ್ಲವಂ ಲಿಂಗಾರ್ಪಿತಂ ಮಾಡೆ
ಜನವೆಲ್ಲ ಕೌತುಕವಿದೆಂದು ಭರದಿಂ ನೋಡೆ
ಬಳಿಕ ಕೈಕೊಂಡನಾ ನೆರೆದ ಕಬ್ಬೆಲ್ಲಮಂ
ಇಳೆ ಬಣ್ಣಿಸುತ್ತಮಿರಲಿಕ್ಷುಗಳನೆಲ್ಲಮಂ
ಉತ್ಶ್ವಾಸದೊಳ್ಮಾಯವಾಯ್ತು ಕಬ್ಬಿನ ರಾಶಿ
ನಿಶ್ವಾಸದೋಳ್ ತೆರಳುತಿರ್ದುದಾ ವಾರಾಶಿ

ಬಾಹೂರ ಬೊಮ್ಮಯ್ಯ ಈಗಾಗಲೇ ಭಕ್ತಿ ನಿಷ್ಠೆಯಿಂದ ಜನಮಾನಸದಲ್ಲಿ ನೆಲೆಯುರಿದ್ದ ಶಿವಶರಣರ ಸೇವೆಗೈಯುತ್ತ ಪರಮಾತ್ಮನಲ್ಲಿ ಅಖಂಡ ಭಕ್ತಿಯನಿರಿಸಿ ಅಪಾರ ಜನಪ್ರಿಯತೆಯನ್ನು ಗಳಿಸಿಕೊಂಡದ್ದು. ಕೆಲವು ಕುಹಕಿಗಳಿಗೆ ಸರಿಬೀಳುವುದಿಲ್ಲ. ಅವರು ಬೊಮ್ಮಯ್ಯನನ್ನು ಟೀಕಿಸಿ ಕೆಲವು ಅನಕದ ಮಾತುಗಳನ್ನಾಡುತ್ತಾರೆ. 'ಶಂಕರಗಂಡ' ಎಂದು ಜೋಳಕ್ಕೆ ಹೆಸರಿಟ್ಟು ಶಿವನನ್ನು ಮೆಚ್ಚಿಸಿಕೊಂಡದ್ದು ನಿಜವಾದರೆ ಈ ಕಲ್ಲು ನಂದಿಗೆ ಈ ಕಬ್ಬನ್ನು ತಿನ್ನಿಸು ನೋಡೋನಾ ಎಂದು ಅಹ್ವಾನ ನೀಡುತ್ತಾರೆ. ಭಕ್ತಿ ಭಾವದಲ್ಲಿ ಮುಳಗಿದ ಬೊಮ್ಮಯ್ಯನಿಗೆ ಕಟಕಿಗಳ ಟೀಕಿನ ಮಾತುಗಳು ವೇದನೆಯನ್ನುಂಟು ಮಾಡುತ್ತದೆ. ಆತ ಕಣ್ಣು ಮುಚ್ಚಿ ಮತ್ತೆ ಪರಶಿವನನ್ನು ಪ್ರಾರ್ಥಿಸಿ ನಂದಿ ಕಬ್ಬು ಸೇವಿಸುವಂತೆ ಬೇಡಿಕೊಳ್ಳುತ್ತಾನೆ. ಪರಮಾತ್ಮನು ಬೊಮ್ಮಯ್ಯನ ಭಕ್ತಿಗೆ ಮೆಚ್ಚಿ ನಂದಿಯು ಕಬ್ಬು ತಿನ್ನುವಂತೆ ಮಾಡುತ್ತಾನೆ.

ಪರಮಾತ್ಮನಲ್ಲಿ ನಿಷ್ಠೆ ಇಟ್ಟ ಭಕ್ತ ಆಗಬಾರದ ಘಟನೆಗಳಿಗೆ ಆಗುವಂತೆ ಚಾಲನೆ ನೀಡುತ್ತಾನೆ. ಅಸಹಜ ಘಟನೆಗಳು ಕೂಡಾ ಘಟಿಸುತ್ತವೆ. ಕಲ್ಲು ನಂದಿ ಕಬ್ಬು ತಿಂದುದ್ದನ್ನು ಕಂಡು ಲೋಕವೇ ಆಶ್ಚರ್ಯಭರಿತವಾಗುತ್ತದೆ. ವ್ಯಂಗ್ಯ ಮಾತುಗಳನ್ನಾಡುವವರಿಗೆ ಪಾತಕಲಿಸುತ್ತದೆ. ದೇವತೆಗಳು ಸಂಭ್ರಮದಿಂದ ಪುಷ್ಪವೃಷ್ಟಿಯನ್ನು ಸುರಿಸುತ್ತಾರೆ. ಪರಮಾತ್ಮನ ಲೀಲೆಯನ್ನು ಕಂಡುಕೊಂಡು ಬೊಮ್ಮಯ್ಯ ಅವನ ಪದತಲಕ್ಕೆ ಸಂತೋಷದ ಅಶ್ರುಜಲಸುರಿಸುತ್ತಾನೆ.

ಹರಿಹರ ಮಹಾಕವಿಯು ಬೊಮ್ಮಯ್ಯನ ಭಕ್ತಿಯ ಪರಾಕಾಷ್ಠೆಯನ್ನು ಈ ಎರಡು ಘಟನೆಗಳನ್ನು ನಿರೂಪಿಸುತ್ತಾನೆ. ಕವಿಗೆ ಭಕ್ತಿಯ ಸಾಮರ್ಥ್ಯವನ್ನು ಲೋಕಕ್ಕೆ ತಿಳಿಸಬೇಕಾಗಿದೆ. ಆ ಕಾರಣಕ್ಕಾಗಿ ಹರಿಹರ ಬೊಮ್ಮಯ್ಯನಿಂದ ಪವಾಡಗಳನ್ನು ಮಾಡಿಸುತ್ತಾನೆ. ವಾಸ್ತವವಾಗಿ ಪವಾಡಗಳು ಸತ್ಯವೇ ಎಂಬ ಸಂದೇಹ ಮೂಡುತ್ತದೆ. ಆದರೆ ಪವಾಡದ ಹಿಂದಿರುವ ಭಕ್ತಿಯ ಪರಾಕಾಷ್ಠೆಗೆ ಮತ್ತು ಭಕ್ತನ ಆತ್ಮಬಲಕ್ಕೆ ಕೊನೆಯೆಂಬುದಿಲ್ಲ ಎಂಬುದನ್ನು ಹರಿಹರನು ತನ್ನ ರಗಳೆಯಲ್ಲಿ ಬಹಳ ಸಮರ್ಪಕವಾಗಿ ನಿರೂಪಿಸುತ್ತಾನೆ.

ಬೊಮ್ಮಯ್ಯನ ವ್ಯಕ್ತಿತ್ವದಲ್ಲಿ ಕಂಡುಬರುವ ಅದ್ಭುತ ಸಾಮರ್ಥ್ಯವೆಂದರೆ ಅವನು ರಾಜಸತ್ತೆಯನ್ನು ವಿರೋಧಿಸಿದುದು ೧೨ನೇ ಶತಮಾನದ ಶಿವಶರಣರು ಕಲ್ಯಾಣದಲ್ಲಿ ಬಿಜ್ಜಳನನ್ನು ಎದುರು ಹಾಕಿಕೊಂಡು ಮಾಡಿದ ಧಾರ್ಮಿಕ, ಸಾಮಾಜಿಕ ಕ್ರಾಂತಿಯಷ್ಟೆ ಮಹತ್ವದ್ದು. ಹರಿಹರನ ಬೊಮ್ಮಯ್ಯ ಮಾಡಿದ ಈ ಚಳುವಳಿ ಬಾಹೂರದ ಸುತ್ತಮುತ್ತಲೆಲ್ಲ ಅತ್ಯಂತ ಪ್ರಸಿದ್ಧನು, ಬಲಶಾಲಿಯು ಎಂದು ಬೊಮ್ಮಯ್ಯ ಗುರುತಿಸಲ್ಪಟ್ಟಿದ್ದನು.

ಜನತೆಯನ್ನು ಪ್ರೀತಿಸುವ ಶಿವನಲ್ಲಿ ಅಪಾರವಾದ ನಿಷ್ಠೆಯನ್ನಿಡುತ್ತ ಮತ್ತು ಸೇವಾಮನೋಭಾವವನ್ನು ಹೊಂದಿದ ಬೊಮ್ಮಯ್ಯ ಶಿವಶರಣರನ್ನು ರಾಜರಿಗಿಂತ ಹೆಚ್ಚು ಗೌರವಿಸುತ್ತಿದ್ದನು. ಬಾಹೂರಿನಲ್ಲಿ ನಡೆದಂತಹ ಒಂದು ಘಟನೆ. ಬೊಮ್ಮಯ್ಯನ ಬದುಕಿಗೆ ಹೊಸ ತಿರುವು ತಂದು ಕೊಡುತ್ತದೆ. ದೊರೆ ಪೆರ್ಮಾಡಿಯ ಮದವೇರಿದ ಆನೆ ರಾಜ ಬೀದಿಯಲ್ಲಿ ಎತ್ತಬೇಕತ್ತ ಜನರಿಗೆ ಹಿಂಸೆ ಕೊಡುತ್ತ ಓಡಾಡುತ್ತಿತ್ತು. ಜನ ಅದನ್ನು ಕಂಡು ಗಾಬರಿಯಾದರು. ಶಿವಶರಣರು ಸಂಕಷ್ಟಕ್ಕೆ ಗುರಿಯಾದರು. ಆದರೆ ಯಾರು ಆನೆಯನ್ನು ಪ್ರತಿಭಟಿಸುವ ಮತ್ತು ಅದನ್ನು ಎದುರು ಹಾಕಿಕೊಳ್ಳುವ ಗೋಜಿಗೆ ಹೋಗುವುದೇ ಇಲ್ಲ. ಬೊಮ್ಮಯ್ಯ ಆ ಆನೆಯನ್ನು ತೀಕ್ಷ್ಣವಾದ ಕಣ್ಣುಗಳಿಂದ ನೋಡಿ ಅದರ ಜಂಗಾಬಲವನ್ನು ಉಡುಗಿಸುತ್ತಾನೆ. ಬೊಮ್ಮಯ್ಯನ ಹನೆಯ ಮೇಲಿನ ತ್ರಿಪುಂಡಕ, ಆವೇಶಭರಿತ ಮುಖ, ರಕ್ತಉುಗುಳುವ ಕಣ್ಣು, ಸಿಟ್ಟಿನ ಪ್ರತಿಕದಂತೆ ಹೊರಬಂದ ಬೆವರು, ಇದನ್ನೆಲ್ಲ ನೋಡಿದ ಆನೆಗೆ ಆತ ಬೊಮ್ಮಯ್ಯನಂತೆ ಕಾಣಲಿಲ್ಲ. ತ್ರಿಪುರವನ್ನು ಸುಡಲು ಬಂದ ರುದ್ರಭಯಂಕರ ಶಂಕರನಂತೆ ಕಾಣುತ್ತಾನೆ. ಇವನನ್ನು ನೋಡಿದ ಆನೆ ಸ್ತಂಬಿಭೂತವಾಗಿ ಮಣ್ಣಿನ

ಆನೆಯಂತೆ ನಿಂತು ಬಿಡುತ್ತದೆ. ಸಮಸ್ತ ಜನಜಂಗುಳಿಗೆ ಇದೊಂದು ಅದ್ಭುತ ಪವಾಡವೆಂದು ಮನದಟ್ಟಾಗುತ್ತದೆ. ಸುದ್ದಿಯು ರಾಜನ ಕಿವಿಗೆ ಮುಟ್ಟುತ್ತದೆ. ದೊರೆ ಪರ್ಮಾಡಿಯು ಬೊಮ್ಮಯ್ಯನಿದ್ದ ಸ್ಥಳಕ್ಕೆ ಸಕಲ ಪರಿವಾರ ಸಮೇತ ಬಂದು ತನ್ನ ಆನೆ ಮಾಡಿದ ತಪ್ಪಿಗೆ ಕ್ಷಮೆಯಾಚಿಸುತ್ತಾನೆ. ಇದಲ್ಲದೆ ಭಕ್ತರಿಗೆ ಆದ ತೊಂದರೆಗೆ ಅವರಲ್ಲಿಯೂ ಕ್ಷಮಾಪಣೆಯಾಚಿಸಿ ತನ್ನಿಂದಾದ ತಪ್ಪನ್ನು ಒಪ್ಪಿಕೊಳ್ಳುತ್ತಾನೆ. ಬಾಹೂರ ಬೊಮ್ಮಯ್ಯನ ದೇವಸದೃಶ್ಯ ವ್ಯಕ್ತಿತ್ವವನ್ನು ಕಂಡು ಮಾರುಹೋಗುತ್ತಾನೆ.

ಬಾಹೂರ ಬೊಮ್ಮಯ್ಯನ ಬದುಕಿನಲ್ಲಿ ಜರುಗಿದ ಈ ಮೂರು ಘಟನೆಗಳು ಅವನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಶಿವಶರಣನಾದ ಸಾಮಾನ್ಯ ವ್ಯಕ್ತಿಯು ಕೂಡಾ ನಿಷ್ಠೆಯಿಂದ ದೇವಲೋಕದಿಂದ ಶಿವನನ್ನು ಕರೆಯಿಸಬಹುದು ಮತ್ತು ಸಾಮಾನ್ಯ ಮನುಷ್ಯ ಮನಸ್ಸು ಮಾಡಿದರೆ ಅರಸನನ್ನು ಮತ್ತು ಅರಸೊತ್ತಿಗೆಯನ್ನು ಧಿಕ್ಕರಿಸಬಹುದು ಎಂಬುದನ್ನು ಹರಿಹರ ತನ್ನ ರಗಳೆಯಲ್ಲಿ ತುಂಬಾ ಮಾರ್ಮಿಕವಾಗಿ ತಿಳಿಸಿದ್ದಾನೆ.

ಹರಿಹರ ಒಂದು ದೃಷ್ಟಿಯಿಂದ ಜನತಾ ಕವಿ. ಆದ್ದರಿಂದ ಕೆಳ ಸಾಮಾನ್ಯ ವರ್ಗದಲ್ಲಿ ಜನಿಸಿದ ಅಸಾಮಾನ್ಯ ಶಿವಶರಣರನ್ನು ತನ್ನ ಕಾವ್ಯದಲ್ಲಿ ನಾಯಕರನ್ನಾಗಿ ಮಾಡಿ ಅವರಿಂದ ಪವಾಡ ಮಾಡಿಸಿದ್ದಾನೆ. ಬಾಹೂರ ಬೊಮ್ಮಯ್ಯನು ಅಂತಹವರಲ್ಲಿ ಒಬ್ಬ ವಿಶಿಷ್ಟ ವ್ಯಕ್ತಿಯೆಂಬುದನ್ನು ಹರಿಹರ ಎತ್ತಿ ತೋರಿಸುತ್ತಾನೆ.

ಭೀಮಕವಿ ಕಂಡಂತೆ ಬೊಮ್ಮಯ್ಯ :

ಭೀಮಕವಿಯು ಬರೆದ ಬಸವಪುರಾಣದಲ್ಲಿ (೧೨೪೦) ಬಾಹೂರ ಬೊಮ್ಮಯ್ಯನನ್ನು ಕುರಿತು ಸಾಕಷ್ಟು ವಿವರವಾದ ಸಂಗತಿಗಳನ್ನು ನಾವು ಕಾಣಬಹುದು. ಭೀಮಕವಿಯು ಹಂಪಿಯ ಹರಿಹರನ ರಗಳೆಯಲ್ಲಿ ಉಕ್ತವಾದ ಬಾಹೂರ ಬೊಮ್ಮಯ್ಯನ ಚರಿತ್ರೆಯನ್ನು ಆಧಾರವಾಗಿಟ್ಟುಕೊಂಡು ತನ್ನ ಬಸವಪುರಾಣದಲ್ಲಿ ಬೊಮ್ಮನ ಕುರಿತು ಹೇಳಿದ್ದಾನೆ. ಷಟ್ಪದಿಯಲ್ಲಿ ರಚಿತವಾದ ಬಸವಪುರಾಣದಲ್ಲಿ ಬಸವಣ್ಣನವರ ಸಮೀಪಬಂದ ಸಕಲ ಶಿವಶರಣರ ಜೀವನಸಂಗತಿಗಳನ್ನು ತಿಳಿಸುತ್ತದೆ. ಹರಿಹರ ಇಟ್ಟುಕೊಂಡ ೩ ಸಂಗತಿಗಳು (೧) ಜೋಳದ ಬೆಳೆಯಲ್ಲಿ ಶಿವ ಮಾತನಾಡಿದ್ದು, (೨) ಕಲ್ಲು ನಂದಿಗೆ ಕಬ್ಬು ತಿನ್ನಿಸಿದ್ದು, (೩) ಪರ್ಮಾಡಿಯ ಮದವೇರಿದ ಆನೆಯ ಸೊಕ್ಕವನ್ನಿಳಿಸಿದ್ದು ಈ ಮೂರು ಪ್ರಸಂಗಗಳನ್ನು ಸಾಕಷ್ಟು ಧೀರ್ಘವಾಗಿ ಭೀಮಕವಿ ತನ್ನ ಷಟ್ಪದಿ ಕಾವ್ಯದ ಮುಖಾಂತರ ತಿಳಿಸಿಕೊಡುತ್ತಾನೆ.

ಹರಿಹರ ಮಹಾಕವಿಯು ತನ್ನ ವಿಶಿಷ್ಟ ಪ್ರತಿಭಾ ಸಾಮರ್ಥ್ಯದಿಂದ ಬೊಮ್ಮಯ್ಯನ

ಬದುಕನ್ನು ಕಟ್ಟಿಕೊಡುತ್ತಾನೆ. ಹರಿಹರನಿಗೆ ಶಿವಶರಣರನ್ನು ಪರಿಚಯಿಸುವಾಗ ಪದಗಳ ಕೊರತೆಯುಂಟಾಗುವುದಿಲ್ಲ. ದೇಶಿಯ ನುಡಿಗಟ್ಟುಗಳನ್ನು ಹರಿಹರ ಲೀಲಾಜಾಲವಾಗಿ ಬಳಸಿಕೊಳ್ಳುತ್ತಾನೆ. ಆದರೆ ಭೀಮಕವಿಯಲ್ಲಿ ಹರಿಹರನ ಓಘವನ್ನು ಮತ್ತು ಅವನ ಪದ ಲಾಲಿತ್ಯವನ್ನು ಕಾಣುವುದು ಕಡಿಮೆ. ಆದರೆ ಒಂದು ಮಹತ್ವದ ಸಂಗತಿಯನ್ನು ಭೀಮಕವಿ ತಿಳಿಸಿಕೊಡುತ್ತಾನೆ.

ವಚನ ಸಂಪುಟದಲ್ಲಿ ಬೊಮ್ಮಯ್ಯನ ವೃತ್ತಿ ತೋಟಗಾರಿಕೆ ಎಂದು ತಿಳಿಸಲಾಗಿದೆ. ಆದರೆ ಹರಿಹರನು ಬೊಮ್ಮಯ್ಯನ ವೃತ್ತಿ ಬಗ್ಗೆಯಾಗಲಿ ಅವನ (ಕುಲಕಸುಬಿನ ಬಗ್ಗೆಯಾಗಲಿ) ಎಲ್ಲಿಯೂ ಹೇಳಿಲ್ಲ. ಆತಭಸ್ಮವನ್ನು ಧರಿಸಿಕೊಂಡು ಶ್ರೀಮಂತ ಗಾಂಭಿರ್ಯದಿಂದ ಬಾಹೂರಿನ ರಾಜ ಬೀದಿಯಲ್ಲಿ ನಡೆದು ಬರುತ್ತಿದ್ದನೆಂದು ಹೇಳಲಾಗಿದೆ. ಭೀಮಕವಿಯ ಬಸವಪುರಾಣದ ಸಂಧಿ ೨೧ ಪದ್ಯ ೨೫, ೨೬ ರಲ್ಲಿ ಬೊಮ್ಮಯ್ಯನ ಪುಷ್ಪಗಳನ್ನು ಆಯ್ದುಕೊಂಡು ಬಂದು ಕುಸಮಮಾಲೆ ವೃತ್ತಿ ಮಾಡುತ್ತಿದ್ದನೆಂದು ಹೇಳುತ್ತಾನೆ. ಇದಲ್ಲದೆ ಬೊಮ್ಮಯ್ಯನ ಅಂಕಿತವು 'ಸಂಗನಬಸವ ಬ್ರಹ್ಮೇಶ್ವರಲಿಂಗ' ಎಂದು ಇರುವುದರಿಂದ ಬೊಮ್ಮಯ್ಯ ಬಹುಶಃ ಮಾಲೆಗಾರ ವೃತ್ತಿಯವನಾಗಿರಬೇಕು. ಯಾಕೆಂದರೆ ಬಾವಿಯ ಬೊಮ್ಮನ ಪೂಜೆಯು ಮಾಲೆಗಾರರಿಗೆ ಮಾತ್ರ ಇರುವುದರಿಂದ ಮತ್ತು ಇವನ ಅಂಕಿತದಲ್ಲಿ ಬಂದಿರುವ ಬ್ರಹ್ಮೇಶ್ವರಲಿಂಗ ಅದು ಬೊಮ್ಮನೆ ಆಗಿರುವುದರಿಂದ ಬೊಮ್ಮಯ್ಯ ಮಾಲೆಗಾರ ವೃತ್ತಿಯವನಿರಬೇಕು.[೪]

ಬಸವಣ್ಣ ತನ್ನ ವಚನದಲ್ಲಿ 'ಏಸುಕಾಲ ಭಕ್ತನಾದೆಡೆ ಗೊರವ ಬಾವಿಯ ಬೊಮ್ಮನ ಅಂಗಬಿಡ' ಎಂದು ಹೇಳಿದ ಮಾತು ಇದಕ್ಕೆ ಪುಷ್ಠಿಯನಿಡುತ್ತದೆ. ಇದನ್ನೆಲ್ಲ ಗಮನಿಸಿಯೇ ಭೀಮಕವಿ ಬೊಮ್ಮಯ್ಯನ ವೃತ್ತಿಯನ್ನು ಈ ಕೆಳಗಿನ ಪದ್ಯದಲ್ಲಿ ಸ್ಪಷ್ಟಪಡಿಸುತ್ತಾನೆ.

ಇಲಿದು ಜಂಗಮಲಿಂಗ ಗುರುಪದ
ಜಲಜ ಪರಿಚಯ ಕ್ರಿಯಾ ಸಂ
ಕರಿತ ಭಕ್ತಿಯೊಳಲಸದಾಗಳು ಮಾಡಬೇಕೆಂದು
ಹಲವು ಹುದೋಟಗನರ್ಜಿಸಿ
ಬೆಳಗು ಜಾವಿನಲೆದ್ದು ಕುಕ್ಕುಟ
ನುಲಿಯ ಲೊಡನಂತೆಯ್ದೆ ಕುಯಿತಂದು
ಕುಸುಮಮಾಲೆಗಳಂ ರಚಿಸಿ ತಂ
ದೊಸೆದು ಭಕ್ತರಿಗಿತ್ತು ತಾ ನಿ
ತ್ಯಶನ ಕಾಯಕ ಲಬ್ದಿಯಲಿ ಜಂಗಮಕೆ ಮಾಡುತ್ತ
ಪಸರು ಪಸರಿಸಿ ಕೀರ್ತಿಸುತ್ತಿದೆ

೪. ಭೀಮಕವಿಯ ಬಸವ ಪುರಾಣ : ಡಾ. ವಿದ್ಯಾಶಂಕರ

ವಸುದೆಯೊಳು ಮತ್ತೊಂದು ವಾದದೊ
ಳಸಮಟರ್ಗನೆ ಕರ್ತನೆಂಬುದದಂ ಪ್ರತಿಷ್ಠಿಸಿದ

ಹೀಗೆ ಹರಿಹರನಿಗಿಂತ ಭಿನ್ನವಾಗಿ ಭೀಮಕವಿ ಬೊಮ್ಮಯ್ಯನ ಬಗ್ಗೆ ತಿಳಿಸಿಕೊಡುತ್ತಾನೆ.

ಭೀಮಕವಿಯು ಬೊಮ್ಮಯ್ಯನ ಚರಿತ್ರೆಯನ್ನು ತಿಳಿಸುವಾಗ ೩೧ ಸಂದಿಯ ಷಟ್ಪದಿಯ ಪೂರ್ವದ ಭಾಗದಲ್ಲಿ ಕೇವಲ ೩ ಸಾಲುಗಳಲ್ಲಿಯೇ ಬೊಮ್ಮಯ್ಯನ ಸಾಧನೆ ಮತ್ತು ಕಥೆಯನ್ನು ಹಿಡಿದಿಡುತ್ತಾನೆ. ಹರಿಹರನು ಹೇಳಿದ ಬೊಮ್ಮಯ್ಯನ ಕಲ್ಲು ನಂದಿಗೆ ಕಬ್ಬನ್ನು ತಿನ್ನಿಸಿದ ಪ್ರಸಂಗ ಮತ್ತು ಚೋಳದ ಮುಖಾಂತರ ಶಂಕರನನ್ನು ಮಾತನಾಡಿಸಿದ ಪ್ರಸಂಗ ಇವೆರಡನ್ನು ಭೀಮಕವಿಯು ತೇಲಿಸಿಕೊಂಡು ಹೋಗಿದ್ದಾನೆ. ಇವೆರಡು ಘಟನೆಗಳಿಗಿಂತ ಆನೆಯನ್ನು ಎದುರು ಹಾಕಿಕೊಂಡು ಅದರ ಮದವನ್ನಿಳಿಸಿದ ಪ್ರಸಂಗ ಭೀಮಕವಿಗೆ ಬಹಳ ಮಹತ್ವವೆನಿಸುತ್ತದೆ.

ಚೋಳ ದೇಶದ ಅರಸನ ಮದವೇರಿದ ಆನೆಯೊಂದು ರಾಜಬೀದಿಯಲ್ಲಿ ರೌದ್ರಾವತಾರ ತಾಳಿ ವೇಗದಿಂದ ಓಡುತ್ತಾ ಓಡುತ್ತಾ ಬರುತ್ತದೆ. ಶಿವಭಕ್ತರಿರುವ ಆ ಪ್ರದೇಶಕ್ಕೆ ಆನೆಯು ಕಾಲನ ದೂತನಂತೆ ಅಟ್ಟಿಸಿಕೊಂಡು ಕಿಟಲೆ ಕೊಡುತ್ತದೆ. ಪರಶಿವನನ್ನು ಪೂಜಿಸಲು ಬರುವ ಶಿವಭಕ್ತರಿಗೆ ಈ ಭಯಂಕರ ಆನೆಯು ಕೀಟಲೆ ಕೊಡುತ್ತಿರುವುದರಿಂದ ಶರಣ ಜನ ಕಂಗಾಲಾಗುತ್ತಾರೆ. ಶಿವನಿಗೆ ಅರ್ಪಿಸಲು ತಂದ ಹೊಚ್ಚ ಹೊಸ ಹೂವುಗಳೆಲ್ಲಾ ಚೆಲ್ಲಾಪಿಲ್ಲಿಯಾಗುತ್ತವೆ. ಪುಷ್ಪಕ್ಕೆ ರಜ ಹತ್ತದ, ಕೀಟ ತಿಂದು ಮುಕ್ಕಾಗದೆ ಇರುವೆ, ನಳನಳಿಸುತ್ತಿರುವ ಸುಂದರ ಪುಷ್ಪಗಳಿಂದ ಭಗವಂತನನ್ನು ಅರ್ಪಿಸುವ ಮನೋಭಾವದ ಶರಣ ಭಕ್ತರಿಗೆ ಆನೆಯು ಯಮಸದೃಶ್ಯವಾಗುತ್ತದೆ. ಮಾವುತನ ಕಡೆಯಿಂದ ತಪ್ಪಿಸಿಕೊಂಡು ಮದವೇರಿದ ಆನೆ ಓಡೋಡಿ ಬರುವಾಗ ಶಿವಶರಣನನ್ನು ಅಟ್ಟಿಸಿಕೊಂಡು ಎತ್ತಿ ಒಗೆಯುತ್ತದೆ. ನೋಡು ನೋಡುವುದರಲ್ಲಿಯೇ ಆ ಶರಣ ಶಿವಶಿವ ಎನ್ನುತ್ತಾ ಪ್ರಾಣಬಿಡುತ್ತಾನೆ. ಈ ಸಂಗತಿ ಶರಣರಲ್ಲಿ ಕಳವಳ ಉಂಟು ಮಾಡುತ್ತಲ್ಲದೆ ಆ ಸುದ್ಧಿ ರಾಜನ ಕಿವಿಗೂ ಮುಟ್ಟುತ್ತದೆ. ರಾಜನು ಮಾವುತನ ತಪ್ಪಿಗೆ ಪಾಶ್ಚಾತ್ತಾಪ ಪಡುತ್ತಾನಲ್ಲದೆ ಮದವೇರಿದ ಆನೆಗೆ ದಂಡಿಸುವ ಉಪಾಯವೆನೆಂದು ಚಿಂತಿಸುತ್ತಾನೆ. ಆದರೆ ಏಷ್ಟಾದರೂ ಆನೆ ಬುದ್ಧಿಯಿಲ್ಲದ ಪ್ರಾಣಿ, ಅದಕ್ಕೇರಿದ ಮದ ಅದರ ವರ್ತನೆ ಅದನ್ನು ಸರಿದಾರಿಗೆ ತರುವ ಉಪಾಯ ಇವುಗಳ ಬಗ್ಗೆ ಆಲೋಚಿಸುತ್ತಾನೆ.

ಒಂದು ದಿನ ರಾಜನು ತನ್ನ ಸಕಲ ದಂಡಿನೊಂದಿಗೆ ಬಾಹೂರ ದತ್ತ ಬೀಜಯಗೈಯುತ್ತಾನೆ. ಬಾಹೂರಿನ ಸುತ್ತಮುತ್ತ ಇರುವ ಪುಷ್ಪದ ಉದ್ಯಾನಗಳಲ್ಲಿ ಒಂದು

ಸಂಕಲೆಯು ಮದವೇರಿ ಮಾವುತನಿಂದ ತಪ್ಪಿಸಿಕೊಂಡು ಪುರದ ಉದ್ಯಾನವನ್ನು ಹಾಳು ಮಾಡುತ್ತದೆ. ಸೊಕ್ಕಿದ ಆನೆಯ ಇಭದಿಂದ ಅದರ ಮದವು ವಸರುತ್ತದೆ. ಯಾರು ಅದನ್ನು ನಿಯಂತ್ರಿಸಲು ಮುಂದಾಗುವುದಿಲ್ಲ. ಹೀಗೆ ರಭಸದಿಂದ ಓಡಿ ಬರುವ ಆನೆಯನ್ನು ನೋಡಿ ಹೆದರಿ ಶಿವಶರಣರು ದಿಕ್ಕಾಪಾಲಾಗಿ ಓಡುತ್ತಾರೆ. ಅದೇ ಮಾರ್ಗದಲ್ಲಿ ಶಿವಪೂಜೆಯನ್ನು ಮಾಡಿಕೊಂಡು ಹೊಚ್ಚ ಹೊಸ ಹೂಗಳನ್ನು ಆಯ್ದು ಬರುವ ಬಾಹೂರ ಬೊಮ್ಮಯ್ಯನು ಆನೆಯನ್ನು ನೋಡುತ್ತಾನೆ. ಅದರ ಭೀಕರತೆ, ರಭಸ, ರೌದ್ರತೆ, ಸಿಟ್ಟು, ಆವೇಶ ಇವು ಯಾರನ್ನು ಹೆದರಿಸುವುವು ಆದರೆ ಬೊಮ್ಮಯ್ಯ ತನ್ನ ವೀರಗಾಲನಿಟ್ಟು ಮನಸ್ಸಿನಲ್ಲಿ ಶಂಕರನನ್ನು ನೆನಪಿಸುತ್ತಾ ತೀಕ್ಷದೃಷ್ಟಿಯಿಂದ ಆನೆಯನ್ನು ನೋಡುತ್ತಾನೆ. ರೌದ್ರವತಾರ ತಾಳಿ ಕುಣಿಯಬೇಕಾದ ಆನೆ ಬೊಮ್ಮಯ್ಯನ ಈ ತೀಕ್ಷ್ಣ ದೃಷ್ಟಿಯಿಂದ ಸ್ತಂಬಿಭೂತವಾಗಿ ಮಣ್ಣು ಆನೆಯಂತೆ ನಿಂತು ಬಿಡುತ್ತದೆ. ಅರಸನಿಗೆ ಶಿವಶರಣರಿಗೆ ಕೂಡಿದ ಸಮಸ್ತ ಜನಕ್ಕೆ ಈ ಘಟನೆ ಆಶ್ಚರ್ಯವನ್ನುಂಟು ಮಾಡುತ್ತದೆ. ಬೊಮ್ಮಯ್ಯನ ಶಿವನಿಷ್ಠೆ ಮತ್ತು ಅವನ ಭಕ್ತಿಯ ಶಕ್ತಿ ಲೋಕದ ಜನರಿಗೆ ಮನವರಿಕೆಯಾಗುತ್ತದೆ. ಅರಸ ತನ್ನ ಅಂತಸ್ತಿನಿಂದ ಇಳಿದು ಭಕ್ತ ಬೊಮ್ಮಯ್ಯನ ಕಾಲಿಗೆರಗುತ್ತಾನೆ. ದೇವತೆಗಳು ಪುಷ್ಪವೃಷ್ಟಿ ಮಾಡುತ್ತಾರೆ. ಬೊಮ್ಮಯ್ಯ ತನ್ನ ಭಕ್ತಿಯಿಂದ ಪರಮಾತ್ಮನ ಪ್ರೀತಿಗೆ ಪಾತ್ರನಾಗುತ್ತಾನೆ.

ಭೀಮಕವಿಯು ಹರಿಹರನಲ್ಲಿಲ್ಲದ ಒಂದು ಪ್ರಸಂಗವನ್ನು ಇಲ್ಲಿ ಸೃಷ್ಟಿಸುತ್ತಾನೆ. ಚೋಳದೇಶದ ಆನೆ ಒಮ್ಮೆ ಶಿವಶರಣರಿಗೆ ಕಿಟಲೆ ಕೊಟ್ಟರೆ ಮತ್ತೊಮ್ಮೆ ಬೊಮ್ಮಯ್ಯನಿಗೆ ಎದುರಾಗಿ ಶರಣಾಗುತ್ತದೆ. ಭೀಮಕವಿಯ ಮುಖ್ಯವಾದ ಉದ್ದೇಶ ಹರಿಹರನಂತೆ ರಾಜಶಕ್ತಿಯು ಶರಣ ಶಕ್ತಿಯ ಮುಂದೆ ವಿನಿತವಾಗುತ್ತದೆ ಎಂಬುದನ್ನು ತಿಳಿಸುವುದಾಗಿದೆ. ಆದ್ದರಿಂದ ರಾಜಸತ್ತೇಯ ಸಂಕೇತವಾದ ಅರಸನ ಆನೆ ಕಾಲು ಮಡಚಿಕೊಂಡು ಸೊಂಡಿಲನ್ನು ಒಳಹಾಕಿಕೊಂಡು ಮುದುಡಿ ಕೂಡುತ್ತದೆ. ಇದರ ಸಂಕೇತವೆಂದರೆ ಜನಶಕ್ತಿ ಮತ್ತು ಅವರ ಅಂತರಂಗದಲ್ಲಿರುವ ಭಕ್ತಿ ಯಾವಕಾಲಕ್ಕೂ ಪ್ರಭುತ್ವಕ್ಕಿಂತ ದೊಡ್ಡದೆಂಬುದನ್ನು ಕವಿ ತಿಳಿಸಿಕೊಟ್ಟಿದ್ದಾನೆ.

ಹರಿಹರನ ಬೊಮ್ಮಯ್ಯನು ಶರಣ ಕುಲಜ ಪರಶಿವನ ಭಕ್ತನಾದರೆ, ಭೀಮಕವಿಯ ಬೊಮ್ಮಯ್ಯ ಪುಷ್ಪವೃಷ್ಟಿ ಮಾಡಿಕೊಂಡ ಒಬ್ಬ ಶಿವಭಕ್ತ. ಹರಿಹರನಿಗಿಂತ ಭೀಮಕವಿ ಬೊಮ್ಮಯ್ಯನ ಕುರಿತು ಮತ್ತು ಅವನ ವೃತ್ತಿ ಕುರಿತು ಹೆಚ್ಚಿಗೆ ಹೇಳಿದ್ದಾನೆ.

ಬೊಮ್ಮಯ್ಯನನ್ನು ಕುರಿತು ಈ ಇಬ್ಬರು ಕವಿಗಳು ಅವನ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಆದರೆ ನಿಜವಾದ ಬೊಮ್ಮಯ್ಯನ ವ್ಯಕ್ತಿತ್ವ ಮತ್ತು ಅವನ ಸಾಧನೆ

ತಿಳಿದುಕೊಳ್ಳಬೇಕಾದರೆ ನಾವು ಅವನ ವಚನಗಳ ಮೊರೆ ಹೋಗಬೇಕಾಗುತ್ತದೆ. ೧೨ನೇ ಶತಮಾನದ ವಚನಕಾರರಲ್ಲಿ ಬಾಹೂರ ಬೊಮ್ಮಯ್ಯನನ್ನು ಕುರಿತು ಸಮಕಾಲೀನ ವಚನಕಾರರು ಏನನ್ನು ಹೇಳುವುದಿಲ್ಲ. ಆದರೆ ಸಂಕೀರ್ಣ ವಚನ ಸಂಪುಟದಲ್ಲಿ ಡಾ. ಬಿ. ಆರ್. ಹಿರೇಮಠರವರು ಬೊಮ್ಮಯ್ಯ ಬದುಕಿದ ಕಾಲ ಕ್ರಿ.ಶ. ೧೧೬೦ ಎಂದು ಹೇಳಿದ್ದಾರೆ. ಇದೇ ಪರಿಸರದಲ್ಲಿ ಉಳಿದ ವಚನಕಾರರು ಇದ್ದಾಗಲು ಉಳಿದ ವಚನಕಾರರಲ್ಲಿ ಬೊಮ್ಮಯ್ಯನ ಪ್ರಸ್ತಾಪ ಏಕೆ ಬಂದಿಲ್ಲವೆಂದು ತಿಳಿಯದು. ಅವನ ಲಿಂಗನಿಷ್ಠೆ ಅಪಾರವಾದ ಅನುಭವ ವೀರಶೈವ ಸಿದ್ಧಾಂತದ ಪರಿಕಲ್ಪನೆ ಮುಂತಾದವುಗಳು ಬಾಹೂರ ಬೊಮ್ಮಯ್ಯನೊಬ್ಬ ಅನುಭಾವಿಯೆಂಬುದನ್ನು ಸಿದ್ಧಮಾಡಿಕೊಡುತ್ತವೆ.

ಅಧ್ಯಾಯ - ೪

ಬೊಮ್ಮಯ್ಯನ ವಚನಗಳ ವಿವೇಚನೆ

ಅಧ್ಯಾಯ - ೪

ಬೊಮ್ಮಯ್ಯನ ವಚನಗಳ ವಿವೇಚನೆ

ಬಾಹೂರ ಬೊಮ್ಮಯ್ಯನು ಹಿರಿಯ ಅನುಬಾವಿಯು ಸುಪ್ರಸಿದ್ಧ ವಚನಕಾರನು ಆಗಿದ್ದಾನೆ. ಇವನ ವಚನಗಳ ಅಂಕಿತವು 'ಬ್ರಹ್ಮೇಶ್ವರಲಿಂಗ' ಎಂದಿದೆ. ಬೊಮ್ಮಯ್ಯನ ಹೆಸರಿನಲ್ಲಿ ಸಿಕ್ಕ ೪೧ ವಚನಗಳು ಅವನ ಅನುಭಾವದ ಎತ್ತರ ಬಿತ್ತರವನ್ನು ಎತ್ತಿ ತೋರಿಸುತ್ತವೆ. ಈ ವಚನಕಾರನು ತನ್ನ ವಚನವೊಂದರಲ್ಲಿ ಅವಿರಳಜ್ಞಾನಿ ಅಜಗಣ್ಣ, ನಿಜಗುಣ ಮತ್ತು ಪ್ರಭುದೇವರನ್ನು ಸ್ತುತಿಸಿದ್ದಾನೆ. ಅಜಗಣ್ಣ ಮತ್ತು ಪ್ರಭುದೇವರು ೧೨ನೇ ಶತಮಾನದ ಶಿವಶರಣರಾದರೆ ಬೊಮ್ಮಯ್ಯನು ಹೆಸರಿಸಿದ ಈ 'ನಿಜಗುಣ' ಯಾರು ಎಂಬುದು ಸ್ಪಷ್ಟವಾಗುವುದಿಲ್ಲ.

ವಚನ ಸಾಹಿತ್ಯದಲ್ಲಿ ಬೊಮ್ಮಯ್ಯನ ವಚನಗಳಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಲೋಕಾನುಭವವನ್ನು ಮತ್ತು ಜೀವನಾನುಭವವನ್ನು ಅನುಭಾವದ ನೆಲೆಯಲ್ಲಿ ಬೊಮ್ಮಯ್ಯ ಕಟ್ಟಿಕೊಡುತ್ತಾನೆ. ಇವನ ವಚನಗಳಲ್ಲಿ ಷಟಸ್ಥಲ ಸಿದ್ಧಾಂತದ ಸುಂದರವಾದ ನಿರೂಪಣೆಯಿದೆ. ಹೇಳುವುದನ್ನು ಸ್ಪಷ್ಟವಾಗಿಯೂ ಸಹಜವಾಗಿಯೂ ಬೊಮ್ಮಯ್ಯ ಹೇಳಿಬಿಡುತ್ತಾನೆ. ಬೊಮ್ಮಯ್ಯನ ಕೆಲವು ವಚನಗಳಲ್ಲಿ ಉಪಮೆಯ, ದೃಷ್ಟಾಂತ ಮುಂತಾದ ಅಲಂಕಾರಗಳನ್ನು ನಾವು ಕಾಣಬಹುದು. ಪರಮಾತ್ಮನ ದಿವ್ಯಜ್ಞಾನ ಮತ್ತು ಅನುಸಂಧಾನಕ್ಕೆ ಭಕ್ತಿಯೆ ಮೂಲ ಜೀವಸೆಲೆಯೆಂಬುದನ್ನು ಬೊಮ್ಮಯ್ಯ ತಿಳಿಸುತ್ತಾನೆ. ಅಂತರಂಗ ಶುದ್ಧಿಯಾದ ಭಕ್ತನ ಹೃದಯದಲ್ಲಿ ಮಾತ್ರ ಭಗವಂತ ನೆಲೆಸುತ್ತಾನೆಂಬುದನ್ನು ಸ್ಪಷ್ಟವಾಗಿ ಬೊಮ್ಮಯ್ಯ ಹೇಳುತ್ತಾನೆ.

ಬೊಮ್ಮಯ್ಯನ ೪೧ ವಚನಗಳಲ್ಲಿ ಬಹಳಷ್ಟು ವಚನಗಳು ಷಟ್‌ಸ್ಥಲಕ್ಕೆ ಸಂಬಂಧಪಟ್ಟಿವೆ. ಗುರು-ಲಿಂಗ-ಜಂಗಮರ ಸೇವೆ ಮಾಡುತ್ತ ಆತ್ಮನು ಪರಮಸತ್ಯ ಶಿವನಲ್ಲಿ ಸಮಾವೇಶವಾಗುವ ಪರಿಯನ್ನು ಬೊಮ್ಮಯ್ಯ ಸೊಗಸಾಗಿ ನಿರೂಪಿಸುತ್ತಾನೆ. ಸಾಮಾನ್ಯವಾಗಿ ಕಾಯಕ ಮೂಲದಿಂದ ಬಂದ ೧೨ನೇ ಶತಮಾನದ ವಚನಕಾರರು ತಮ್ಮ ಕಾಯಕವನ್ನು ಪ್ರತಿನಿಧಿಸುವ ಒಂದಿಲ್ಲೊಂದು ಸಂಕೇತಗಳನ್ನು ತಮ್ಮ ತಮ್ಮ ವಚನಗಳಲ್ಲಿ ಬಳಸಿಕೊಂಡಿದ್ದನ್ನು ಕಾಣುತ್ತೇವೆ. ಭೀಮಕವಿಯ ಬಸವಪುರಾಣದಲ್ಲಿ ಬೊಮ್ಮಯ್ಯನು ಹೂಗಳನ್ನು ತಿರಿದು ತಂದು ಮಾಲೆ ಮಾಡಿ ಶಿವನಿಗೆ ಅರ್ಪಿಸುತ್ತಿದ್ದನೆಂದು

ಹೇಳಲಾಗಿದೆ. ಆದರೆ ಬೊಮ್ಮಯ್ಯನವಚನಗಳಲ್ಲಿ ಹೂ ಪತ್ರಿಗೆ ಸಂಬಂಧಪಟ್ಟ ಯಾವ ಸಂಗತಿಯಾಗಲಿ ಮತ್ತು ಅವನ ಕಾಯಕ ಬಗ್ಗೆ ಬೇರೆ ಯಾವ ಪ್ರಸ್ತಾಪವನ್ನು ನಾವು ವಚನಗಳಲ್ಲಿ ಕಾಣದೆಯಿರುವುದು ಒಂದು ಆಶ್ಚರ್ಯಕರ ಸಂಗತಿ. ಆದರೆ ದೊರೆತ ೪೧ ವಚನಗಳು ಬೊಮ್ಮಯ್ಯನ ಅಖಂಡ ಜ್ಞಾನವನ್ನು ಮತ್ತು ಅನುಭಾವದ ಎತ್ತರವನ್ನು ಬಿಂಬಿಸುತ್ತದೆ.

ಲೌಕಿಕದ ಸಂಗತಿಗೆ ಬೊಮ್ಮಯ್ಯನು ಹೆಚ್ಚು ಗಮನಹರಿಸುವುದಿಲ್ಲ. ಆಂತರಿಕ ವಿಕಾಸ ಮತ್ತು ಅಲೌಕಿಕ ಸಂಗತಿಗಳತ್ತ ಆತ ಹೆಚ್ಚು ಒತ್ತು ಕೊಡುತ್ತಾನೆ. ಮನಶುದ್ಧವಿಲ್ಲದಿದ್ದರೆ ನಾವು ಯಾವ ಕಾಯಕ ಮಾಡಿದರು ಅದು ವ್ಯರ್ಥವೆಂದು ಮತ್ತು ಅಂತವರಿಗೆ ಭಗವಂತನು ಒಲಿಯಲಾರನೆಂಬುದನ್ನು ಈತ ಸ್ಪಷ್ಟವಾಗಿ ತಿಳಿಸುತ್ತಾನೆ.

ಬೊಮ್ಮಯ್ಯ ತನ್ನ ವಚನದಲ್ಲಿ ಹೀಗೆ ಹೇಳಿದ್ದಾನೆ.

ಅರಿದೆ ಮರೆದನೆಂಬನ್ನಕ್ಕ ಭಕ್ತಿ ವಿಶ್ವಾಸಭಾವಿಯಲ್ಲ
ಇನ್ನರಿಯಲಿಲ್ಲ, ಮುಂದೆ ಒಂದು ಕುರುಹಿಲ್ಲ
ಎಂಬನ್ನಕ್ಕ ಪರವಸ್ತು ಭಾವಿಯಲ್ಲ
ನಾನೆಂಬನ್ನಕ್ಕ ತಾನಿದ್ದು ಮುಂದೆ ಏನೂ ಇಲ್ಲವೆಂಬುದು ನಿಜವೆ?
ತಾನೆಂಬುದನಳಿದು ಮುಂದೆ ಏನೂ ಇಲ್ಲಾಯೆಂಬುದು ನಿಜವಾಗಿ
ಅದು ನಿರ್ಭಾವವಾದುದು ಸಂಗನಬಸವಣ್ಣನ ಐಕ್ಯ
ಬ್ರಹ್ಮೇಶ್ವರಲಿಂಗದ ಕುರುಹು ನಾಮನಷ್ಟ.[೧]

ಪರಮಾತ್ಮನನ್ನು ಅರಿತೆನೋ ಮರೆತನೊ ಎಂದು ಹೇಳುವುದು ಸೂಕ್ತವಲ್ಲ. ಈ ಅರಿವು ಮರೆವು ಎಂಬುದು ವಿಶ್ವಾಸದ ಭಾವಿಯಲ್ಲಿ ಪರಮಾತ್ಮನನ್ನು ಒಂದು ವೇಳೆ ಅರಿತಿದ್ದಾದರೆ ಮರುವಿಗೆ ನೆಲೆಯಲ್ಲಿದೆ. ಅಗಮ್ಯ ಅಗೋಚರವಾದ ಆ ಪರವಸ್ತು ಭಾವಿಯಲ್ಲಿ, ಒಂದಿದ್ದು ಇನ್ನೊಂದಿಲ್ಲ ಎಂಬ ಭಾವ ಶರಣರಲ್ಲಿ ಎಂದು ಬಾರದು. **ನಾನಿದ್ದು ಅವನಿಲ್ಲ ಎಂಬುದು ನಿಜವಲ್ಲ. ನಾನು ತಾನೆಂಬ ಭಾವ ಇಲ್ಲವಾಗಿ 'ತಾನೇ ತಾನಾದ, ತಾನೇ ನಾನಾದ ನಾನು ತಾನುಗಳಲ್ಲಿ'** ಅಭೇದ ಭಾವ ಮೊಳಕೆಯೊಡೆದಾಗ ಮಾತ್ರ ಆ ಭಗವಂತನ ಅರಿವು ನಮಗೆ ಸಾಧ್ಯವಾಗುತ್ತದೆ. ಪ್ರಸ್ತುತ ವಚನದಲ್ಲಿ ಬೊಮ್ಮಯ್ಯನು ಅರಿವು ಕುರುಹುಗಳ ಬಗ್ಗೆ ಚರ್ಚಿಸುತ್ತಾನೆ. ಅರಿವು ಮುಡುವವರೆಗೆ ಕುರುಹು ಅರಿದೊಡೆ ಕುರುಹಿನ ಹಂಗೆಕೆ ಅರಿವು ಸನ್ನಿಹಿತವಾದಾಗ ಕುರುಹು ನಷ್ಟವಾಗುತ್ತದೆ. ಲಿಂಗಾಂಗ ಸಾಮರಸ್ಯದ, ವೀರಶೈವ ಸಿದ್ಧಾಂತದ ತಿರುಳನ್ನು ಬೊಮ್ಮಯ್ಯನು ಈ ವಚನದಲ್ಲಿ ತಿಳಿಸಿಕೊಡುತ್ತಾನೆ.

ಶಿವಶರಣರು ತನುಮನದಿಂದ ಪರಿಶುದ್ಧರಾವರು ಹಿಡಿದ ನೇಮವ್ರತಗಳನ್ನು

---

೧. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೦೪

ಯಾವ ಸಂದರ್ಭದಲ್ಲಿಯೂ ಬಿಡಲಾರರು. ಗಂಡನ ಮೇಲೆ ನಿಷ್ಠೆಯುಳ್ಳ ಹೆಂಡತಿಯಂತೆ ಶರಣನು ಲಿಂಗದ ಮೇಲೆ ನಿಷ್ಠೆಯನ್ನಿಡುತ್ತಾನೆ. ಆತ್ಮವಂಚನೆ, ಮೋಸ ಮಾಡುವ ಮನುಷ್ಯ ಶರಣನಾಗಲಾರ. ಶರಣ ಸತ್ಯ, ಶುದ್ಧ ಕಾಯಕ ಮಾಡುವಂತಹನು ಅಂತಹ ಮನೋಸ್ಥಿತಿಯನ್ನು ಹೊಂದಿದ ಶಿವಶರಣರು ಗುರು–ಲಿಂಗ–ಜಂಗಮರನ್ನು ಭಕ್ತಿಯಿಂದ ಸೇವಿಸುತ್ತಿದ್ದರು. ವ್ರತಭ್ರಷ್ಟನಾದವನು ಗುರು–ಲಿಂಗ–ಜಂಗಮರ ಪ್ರೀತಿಗೆ ಪಾತ್ರನಾಗಲಾರ ಮತ್ತು ವಿಶ್ವಾಸಕ್ಕೆ ಆ ವ್ಯಕ್ತಿಯು ಅಪಾತ್ರನಾಗುತ್ತಾನೆ. ಬೊಮ್ಮಯ್ಯನು ತನ್ನ ಈ ವಚನದಲ್ಲಿ

ಅಪರಾಧವ ಮಾಡಿದ ಭಟ ಅರಸಿಂಗೆ ಸಜ್ಜನನಪ್ಪನೆ?
ವ್ರತಭ್ರಷ್ಟ, ನೇಮಕ್ಕೆ ಹಾನಿಯಾದವ
ನಿತ್ಯಕೃತ್ಯವೆಂದು ಹಿಡಿದು ಬಿಟ್ಟವ
ತ್ರಿವಿಧಮಲವನೊಲ್ಲೆನೆಂದು ತೊಟ್ಟವ
ಇಂತೀ ಕಷ್ಟಗುಣದಲ್ಲಿ ನಡೆವ ದೃಷ್ಟಗಳ್ಳರ ನೋಡಾ
ಇದು ಬಾಯೊಳಗಣ ಹುಣ್ಣು ಹೇವರಿಸಿದ ಮತ್ತೆ
ಇನ್ನಾವ ಠಾವಿನಲ್ಲಿ ನುಂಗುವ?
ಈ ಹೇಹ(ಯ)ವ ಬಿಡಿಸಾ ಎನಗೆ ಸಂಗನಬಸವಣ್ಣಾ
ಬ್ರಹ್ಮೇಶ್ವರಲಿಂಗವಿಪ್ಪ ಠಾವ ತೋರಾ.[೨]

ಭಟರು ಅರಸನ ಪ್ರೀತಿಗೆ ಪಾತ್ರಾರಾಗುತ್ತಾರೆ. ಆದರೆ ಆ ಭಟರಲ್ಲಿ ನಿಷ್ಠೆ ಪ್ರಾಮಾಣಿಕತೆಯಿರಬೇಕು. ನಿಷ್ಠೆ ಪ್ರಾಮಾಣಿಕತೆಯಿಲ್ಲದ ಭಟರನ್ನು ಅರಸನು ಎಂದು ಮೆಚ್ಚಲಾರ ಹಾಗೆ ಪರಮಾತ್ಮನಲ್ಲಿ ನಿಷ್ಠೆಯನ್ನಿರಿಸಿ ವ್ರತನೇಮಗಳನ್ನು ಮಾಡುವ ಭಕ್ತನು ಪರಮಾತ್ಮನ ಪ್ರೀತಿಗೆ ಪಾತ್ರನಾಗುತ್ತಾನೆ. ಪರಮಾತ್ಮನನ್ನು ಅರಸನಿಗೆ ಭಟನನ್ನು ಭಕ್ತನಿಗೆ ಬೊಮ್ಮಯ್ಯ ಹೋಲಿಸುತ್ತಾನೆ. ವ್ರತಭ್ರಷ್ಟರು ನೇಮಕ್ಕೆ ಹಾನಿಯಾದವರು ಹಾನಿಯನ್ನುಂಟು ಮಾಡುತ್ತಾರೆ.

ಮನುಷ್ಯನಿಗೆ ಮೂರು ಮಲಗಳು ಅಂಟಿಕೊಂಡಿವೆ. ಒಂದು ಆನವಮಲ, ಇನ್ನೊಂದು ಮಾಯಾಮಲ, ಮತ್ತೊಂದು ಕಾರ್ಮಿಕಮಲ. ಈ ಮಲತ್ರಯಗಳನ್ನು ಬಿಟ್ಟು ಮನುಷ್ಯ ಭಗವಂತನತ್ತ ಮುಖಮಾಡಬೇಕು. ಆದರೆ ಆತನು ಹಾಗೆ ಮಾಡದೆ ಈ ತ್ರಿವಿಧ ಮಲಗಳನ್ನು ಬಿಟ್ಟೆನೆಂದು ಹೇಳಿ ಮತ್ತೇ ಅದೆ ಮಲಗಳಲ್ಲಿ ತಾನು ರಮಿಸುತೊಡಗಿದರೆ ಅವನಂಥ ದುಷ್ಟ ಬೇರೆಯಾರು ಇಲ್ಲ. ಇಂಥವರ ಸ್ಥಿತಿ ಹೇಗೆಂದರೆ ಬಾಯೊಳಗೆ ಹುಣ್ಣು ಹುಟ್ಟಿದಂತೆ. ಬಾಯೊಳಗೆ ಹುಣ್ಣು ಹುಟ್ಟಿದ ಬಳಿಕ ಆಹಾರವನ್ನು ಸೇವಿಸುವ ಬಗೆ ಹೇಗೆ, ಆಹಾರದೊಂದಿಗೆ ಆ ಹುಣ್ಣಿನ ರಸವು ಜಠರಕ್ಕೆ ಸೇರುವಾಗ ಹೇಸಿಕೆಯಿನಿಸುತ್ತದೆ. ಸಂಸಾರ ಅರಿತುಕೊಂಡು ಶರಣನಾಗಬಯಸುವ ವ್ಯಕ್ತಿಯು

೨. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. : ೧೦೩

ಬಾಯೊಳಗಿನ ಹುಣ್ಣಿನಂತಹ ಹೇಸಿಗೆಯನ್ನುಂಟು ಮಾಡುವ ಆನವಮಲ, ಮಾಯಾಮಲ, ಕಾರ್ಮಿಕಮಲಗಳನ್ನು ಬಿಟ್ಟು ಪರಮಾತ್ಮನನ್ನು ಹೊಂದುವ ಪ್ರಾಮಾಣಿಕ ಪ್ರಯತ್ನವು ಮಾಡಬೇಕೆಂದು ಬೊಮ್ಮಯ್ಯ ತಿಳಿಸುತ್ತಾನೆ. ಬಾಯಿಯ ಹುಣ್ಣು ಮತ್ತು ಮಲತ್ರಯಗಳು ಇವುಗಳ ಮಧ್ಯ ಹೋಲಿಕೆಯನ್ನು ಕೊಡುವುದರ ಮೂಲಕ ಮಲಗಳ ಹೇಯಸ್ಥಿತಿಯನ್ನು ಮನುಷ್ಯ ಅರಿತುಕೊಳ್ಳಬೇಕೆಂದು ಬೊಮ್ಮಯ್ಯ ತಿಳಿಸುತ್ತಾನೆ.

ಈ ಪ್ರಪಂಚದಲ್ಲಿ ಮನುಷ್ಯ ಹೇಗೆ ಬದುಕಬೇಕು ಮತ್ತು ಸಂಸಾರದೊಂದಿಗೆ ಬದುಕನ್ನು ಬೆಸೆದುಕೊಂಡು ಆನಂದ ಜೀವನವನ್ನು ಕಳೆಯಬೇಕಾದರೆ ಬೊಮ್ಮಯ್ಯ ಈ ಪ್ರಪಂಚವನ್ನು ಸಂಗನ ಬಸವಣ್ಣನ ಆಟದಂತೆ ಮಾಡಿಕೊಳ್ಳಬೇಕೆಂದು ಈ ವಚನದ ಮುಖಾಂತರ ತಿಳಿಸುತ್ತಾನೆ.

ಅಹಂಕಾರಿಗೆ ಗುರುಭಕ್ತಿಯಿಲ್ಲ
ಪರಸೇವೆಯುಳ್ಳವಂಗೆ ಲಿಂಗಪೂಜೆಯಿಲ್ಲ
ಋಣಾನುಸಂಬಂಧಿಗೆ ಮಾಟದ ಮರ್ಮವಿಲ್ಲ
ಇಂತೀ ತ್ರಿವಿಧ ಭೇದದ ಕೂಟವನರಿತು
ಸಂಗನಬಸವಣ್ಣನ ಆಟದಂತೆ
ಬ್ರಹ್ಮೇಶ್ವರಲಿಂಗದಲ್ಲಿ ಕೂಟಸ್ಥನಾಗಬೇಕು.[೩]

ಶಿವಶರಣರಲ್ಲಿ ಭಕ್ತಿಗೆ ಪ್ರಾಧ್ಯಾನ್ಯತೆಯಿದೆ. ಅಂಗದ ಮೇಲೆ ಲಿಂಗವುಳ್ಳವರಿಗೆ ಸಂಗಮನಾಥನೆಂದು ಭಾವಿಸಿ ಬಸವಣ್ಣ ಅವರಿಗೆ ಶರಣಾಗುತ್ತಾನೆ. ಬಸವಣ್ಣನ ನಡೆದ ದಾರಿಯಲ್ಲಿ ಉಳಿದೆಲ್ಲ ಶಿವಶರಣರು ಸಾಗಿಬಂದಿದ್ದಾರೆ. ಅವನಂತಹ ಮೃದು ವಿನಿತ ಭಾವವನ್ನು ಶರಣರು ತಾಳುತ್ತಾರೆ. ಬೊಮ್ಮಯ್ಯನ ಈ ವಚನದಲ್ಲಿ ಗುರುಭಕ್ತಿ ಮಾಡಬೇಕಾದವರು ವಿನೀತ ಭಾವದವರಾಗಿರಬೇಕೆನ್ನುತ್ತಾನೆ. ಅಹಂಕಾರಿಯಾದವನಿಗೆ ಗುರುಭಕ್ತಿ ಸಾಧ್ಯವಾಗದು. ತನ್ನ ಧರ್ಮ ಬಿಟ್ಟು ಅನ್ಯಧರ್ಮದಲ್ಲಿ ತನ್ನನ್ನು ತೊಡಗಿಸಿಕೊಳ್ಳುವವನಿಗೆ ಲಿಂಗ ಪೂಜೆ ಸಾಧ್ಯವಿಲ್ಲ. ತನ್ನ ಇಷ್ಟ ಲಿಂಗವನ್ನು ಅಂಗೈಯಲ್ಲಿಟ್ಟು ತಾನು ಉಪಾಸನೆ ಮಾಡಬೇಕು. ಅದನ್ನು ಬಿಟ್ಟು ಅನ್ಯದೈವಗಳಲ್ಲಿ ಮನಸ್ಸು ತಿರುಗಿಸಿದರೆ ಮತ್ತು ಪರಸೇವೆಯಲ್ಲಿ ತೊಡಗಿದರೆ ಅವನಿಗೆ ಲಿಂಗ ಪೂಜೆಯಾಗುವ ಬಗೆ ಹೇಗೆ? ಸೇವಾ ಮನೋಭಾವವುಳ್ಳ ವ್ಯಕ್ತಿ ಋಣಾನುಸಂಬಂಧವನಿಟ್ಟು ಕೆಲಸ ಮಾಡುವುದಿಲ್ಲ. ಯಾವ ಕೆಲಸವಾದರು ಮತ್ತು ಯಾರ ಕೆಲಸವಾದರು ಅದು ಪರಮಾತ್ಮನ ಸೇವೆಯೆಂದೆ ಆತಭಾವಿಸುತ್ತಾನೆ. ಹೀಗೆ ಗುರು, ಲಿಂಗ, ಜಂಗಮಕ್ಕೆ ಸೇವೆಸಲ್ಲಿಸುತ್ತ ಬದುಕನ್ನೆ ಒಂದು ಆಟವೆಂದು ಸಂಗನಬಸವನಾಡುವ ರೀತಿಯಲ್ಲಿ ನಾವು ನಮ್ಮ ಬದುಕಿನ ಆಟವನ್ನು

---

೩. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ.: ೧೦೪

ಆಡಬೇಕೆಂದು ಬೊಮ್ಮಯ್ಯನು ಹೇಳುತ್ತಾನೆ. ಗುರು–ಲಿಂಗ–ಜಂಗಮಕ್ಕೆ ಬೊಮ್ಮಯ್ಯ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಾನೆ.

ಮನುಷ್ಯನಲ್ಲಿರು ಅವಗುಣಗಳ ಬಗ್ಗೆ ಬೊಮ್ಮಯ್ಯ ತನ್ನ ಒಂದು ವಚನದಲ್ಲಿ ಬಹುಸೊಗಸಾಗಿ ವಿವರಿಸುತ್ತಾನೆ. ಅವಗುಣಗಳು ಗೀಡವನ್ನು ನಾಶಮಾಡುವ ಗೊರಲಿಯ ಹುಳಗಳಿದ್ದಂತೆ, ಕೀಟಗಳಿದ್ದಂತೆ ಎಂದು ಈ ತನ್ನ ಕೆಳಗಿನ ವಚನದ ಮುಖಾಂತರ ವಿವರಿಸುತ್ತಾನೆ.

ಆತ್ಮ ಒಂದೆಂದಲ್ಲಿ, ಇಂದ್ರಿಯಗಳು ಹಲವು ತೆರನಾದವು ನೋಡಾ
ವಾಯು ಒಂದೆಂದಡೆ, ಒಂಬತ್ತು ಸಂಧಿಸಿದವು ನೋಡಾ
ಇಂದ್ರಿಯ ಒಂದೆಂದಡೆ, ನಾಲ್ಕು ಸಂದಣಿಸಿದವು ನೋಡಾ
ಮದ ಒಂದೆಂದಡೆ, ಏಳು ಸಂಭ್ರಮಿಸುತಿವೆ ನೋಡಾ
ಕಳೆ ಒಂದೆಂದಡೆ, ಹದಿನೈದು ಹಿಂಗದಿವೆ ನೋಡಾ
ಇಂತಿ ಸ್ಥೂಲತನು ಒಂದೆಂದಡೆ, ಸೂಕ್ಷ್ಮಕಾರಣ ದ್ವಂದ್ವವಾಗಿವೆ ನೋಡಾ
ಜೀವ ಒಂದೆಂದಡೆ, ಪರಮಾತ್ಮನೆಂದು ತ್ರಿವಿಧ ಸಂಗವಾಗಿದೆ ನೋಡಾ
ಅರಿದೆನೆಂಬಲ್ಲಿ ಹಿಂದೊಂದು ಮರವೆ, ಮರೆದೆನೆಂಬಲ್ಲಿ ಮುಂದೊಂದರಿವು
ಇಂತೀ ದಂಪತಿ ಸಂಗವುಳ್ಳನಕ್ಕ, ಏನನಹುದೆಂಬೆ, ಎನನಲ್ಲಾ ಎಂಬೆ ।
ನುಡಿದಡೆ ಸಮಯಕ್ಕೆ ದೂರ, ಸುಮ್ಮನಿದ್ದಡೆ ಸ್ವಾನುಭಾವಕ್ಕೆ ದೂರ
ಆರೆಂದಡೂ ಎನಲಿ, ಆವ ಸ್ಥಲದಲ್ಲಿ ನಿಂದಡೂ ಭಕ್ತಿಸ್ಥಲವೆ
ವಸ್ತುವ ನೆಮ್ಮುವುದಕ್ಕೆ ವಿಶ್ವಾಸ
ಇದು ಸಂಗನಬಸವಣ್ಣನ ಕಟ್ಟು, ಬ್ರಹ್ಮೇಶ್ವರಲಿಂಗವ ಮುಟ್ಟುವ ಗೊತ್ತು [೪]

ಆತ್ಮ, ಜೀವ, ದೇಹ, ಒಂದಾದರು ಮನುಷ್ಯನಲ್ಲಿರುವ ಇಂದ್ರಿಯಗಳು ಹಲವು ತೆರನಾಗಿವೆ. ಇವೆಲ್ಲವುಗಳು ಕೆಟ್ಟಗುಣಗಳಿಂದ ಕೂಡಿವೆ. ಕಣ್ಣು, ಮೂಗು, ನಾಲಿಗೆ, ಕಿವಿ, ಚರ್ಮ ಈ ಪಂಚೇಂದ್ರಿಗಳು. ನಮ್ಮನ್ನು ಅವನತಿಯತ್ತ ಕೊಂಡೊಯ್ಯುತ್ತವೆ. ಯಾವ ಶರಣ ಮತ್ತು ಭಕ್ತನಾದವನು ಇಂದ್ರಿಯಗಳಿಗೆ ದಾಸನಾಗುತ್ತಾನೆ ಅವನು ನಿಜವಾದ ಭಕ್ತ–ಶರಣನಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇಂದ್ರಿಯಗಳನ್ನು ಮತ್ತು ಅರಿಷಡ್ವರ್ಗಗಳನ್ನು ನಿರ್ಗಹಿಸಿದವನೇ ನಿಜವಾದ ಭಕ್ತ,·ಶಿವಶರಣ, ಗುರು ಎಂದಿದ್ದಾನೆ.

ಶರಣ ಬದುಕಿಗೆ ಭಾವಶುದ್ಧವಾಗಿರಬೇಕು. ಶರಣನು ಯಾವ ಸ್ಥಲದಲ್ಲಿದ್ದರು ಕಳಂಕ ರಹಿತನಾಗಿ ಭಾವಶುದ್ಧದಿಂದ ಬದುಕಬೇಕು. ಭಾವಶುದ್ಧವಾದ ಶರಣನ ಸ್ಥಿತಿಯನ್ನು ಒಂದು ಮರಕ್ಕೆ ಹೋಲಿಸಿ ಬಹಳ ಸೊಗಸಾಗಿ ಬೊಮ್ಮಯ್ಯನು ನಿರೂಪಿಸುತ್ತಾನೆ.

---

೪. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೧೪

ಆವ ಸ್ಥಲ ಸಾಧಿಸಿ ಬಂದು ನಿಂದಡೂ
ಭಾವಶುದ್ಧಾತ್ಮವಾಗಿ ವೇಧಿಸುವುದೊಂದೆ ವಸ್ತು
ಅದು ಭಕ್ತಿಯ ಬೇರು, ಸದಾಶ್ರದ್ಧೆಯ ಶಾಖೆ
ವಿಶ್ವಾಸದ ಫಲ, ನಿಜತತ್ವದ ರಸ, ಸ್ವಯದ ಸಾದು
ಅದು ಸಂಗನ ಬಸಬಸವಣ್ಣನಿಂದ ಬಂದ ಬೆಳೆ
ಬ್ರಹ್ಮೇಶ್ವರಲಿಂಗದಲ್ಲಿ ಐಕ್ಯವಾಯಿತ್ತು."

ಪ್ರಸ್ತುತ ವಚನದಲ್ಲಿ ಭಕ್ತಿ ಬೇರೆ ಬೇರೆ ಆಯಾಮಗಳಲ್ಲಿ ಕಾರ್ಯ ಮಾಡಿದರು ಅದು ಮೂಲ ಪರವಸ್ತು ಪರಮಾತ್ಮನಲ್ಲಿ ಒಂದೇ ರೀತಿಯಾಗಿ ತೋರುವುದು. ಭಾವವೆಂಬ ವೃಕ್ಷಕ್ಕೆ ಭಕ್ತಿಯೆ ಬೇರು. ಶ್ರದ್ಧೆಯು ಅದರ ಶಾಖೆ, ವಿಶ್ವಾಸವು ಅದರ ಫಲ, ನಿಜತತ್ವ ಅದರ ರಸ, ಅದರ ರುಚಿಯೇ ಅದನ್ನು ಅನುಭವಿಸುವ ರೀತಿ ಹೀಗೆ ತಯಾರಾದ ಸತ್ಫಲ ಮತ್ತು ಸದ್ಭಳೆ ಪರಮಾತ್ಮನಿಗೆ ಸೇವೆಯಾದುದು. ವೀರಶೈವ ಸಿದ್ಧಾಂತದಲ್ಲಿ ಬರುವ ಷಟಸ್ಥಳಗಳನ್ನು ಬೊಮ್ಮಯ್ಯ ಈ ವಚನದ ಮೂಲಕ ಒಂದು ವೃಕ್ಷದ ರೂಪಕವನ್ನು ಕೊಡುವುದರ ಮೂಲಕ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾನೆ. 'ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ ಶರಣ, ಐಕ್ಯ' ಇವು ವೀರಶೈವರು ಅನುಸರಿಸಿಕೊಂಡು ಬಂದ ಸಾಧನೆಯ ೬ ಮೆಟ್ಟಿಲುಗಳು. ಇವುಗಳ ಮೂಲಸ್ಥಾಯಿ ಭಕ್ತಿ. ಅದೇ ಹಂತ ಹಂತವಾಗಿ ಏರುತ್ತ ಏರುತ್ತ ಐಕ್ಯಸ್ಥಲದಲ್ಲಿ ಲೀನವಾಗುತ್ತದೆ. ಒಂದು ವೃಕ್ಷದಲ್ಲಿ ಬೆಳೆದ ಹಣ್ಣಿನ ರುಚಿ ಬೇರು, ಕಾಂಡ, ಎಲೆ, ಹೂ ಮತ್ತು ಹಣ್ಣಿಗೆ ಸಂಬಂಧಪಟ್ಟಿರುತ್ತದೆ. ಎಲೆ, ಬೇರು, ಟೊಂಗೆ, ಹೂ, ಕಾಯಿಗಳಲ್ಲಿ ಒಂದೇ ರುಚಿ ಇರುತ್ತದೆ. ಅದರಂತೆ ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ ಈ ಎಲ್ಲಾ ಸ್ಥಲಗಳಲ್ಲಿ ಶರಣನ ಭಕ್ತಿಯು ಹಂತ ಹಂತವಾಗಿ ವಿಕಾಸವಾಗುತ್ತಾ ಸಾಗುತ್ತದೆ. ಜೀವಾತ್ಮ ಪರಮಾತ್ಮರ ಅನುಸಂಧಾನದ ಈ ಕ್ರಿಯೆ ಅದ್ಭುತ ಆನಂದವನ್ನುಂಟು ಮಾಡುತ್ತದೆ. ಈ ಷಟಸ್ಥಲ ಸಿದ್ಧಾಂತವನ್ನು ಒಂದು ವೃಕ್ಷದ ರೂಪಕದ ಮೂಲಕ ಬೊಮ್ಮಯ್ಯ ಸೊಗಸಾಗಿ ನಿರೂಪಿಸುತ್ತಾನೆ. ಬೊಮ್ಮಯ್ಯನ ಇಂತಹ ವಚನಗಳು ಅವನ ಅಧ್ಯಾತ್ಮದ ಎತ್ತರ ನಿಲುವನ್ನು ಸಾರುತ್ತವೆ.

ಶರಣನಾದವನು ತನ್ನಲ್ಲಿಯ ದೋಷವನ್ನು ತಾನೇ ತಿದ್ದಿಕೊಳ್ಳಬೇಕು. ತಪ್ಪಿನ ಮೂಲವನ್ನು ಅರಿತುಕೊಂಡು ಆ ತಪ್ಪಿನ ನಿವಾರಣೆಗೆ ಉಪಾಯ ಹುಡುಕಬೇಕು ಹೊರತು ಅದಕ್ಕೆ ಅನ್ಯಮಾರ್ಗವಲ್ಲ. ತನ್ನ ತಪ್ಪನ್ನು ತಿದ್ದಿಕೊಂಡು ಶರಣ ಮತ್ತೆ ಅನುಭಾವದ ಎತ್ತರಕ್ಕೆ ಏರಬಲ್ಲ. ಆದರೆ ಮೂಲಮನ ಸ್ಥಿತಿಯಲ್ಲಿಯೇ ಸದ್ಗುಣಗಳನ್ನು ಹೊಂದದೆ ಮೂರು ಮಲತ್ರಯಗಳನ್ನು ಹೊಂದಿ ಪರಮಾತ್ಮನನ್ನು ಮರೆತು ಲೌಕಿಕವನ್ನೇ ನೆಚ್ಚಿ ಬದುಕುವ ಸಾಮಾನ್ಯನಿಗೆ ಶರಣ ಸ್ಥಿತಿ ಲಭಿಸುವುದಿಲ್ಲ. ಅಂತಹವರನ್ನು ಅಂತಹ ಸ್ಥಿತಿಯನ್ನು ಕುರಿತು ಬೊಮ್ಮಯ್ಯನು ತನ್ನ ವಚನವೊಂದರಲ್ಲಿ ಈ ಪ್ರಕಾರವಾಗಿ ಹೇಳಿದ್ದಾನೆ.

೫. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೦೫

ಎಲೆಗಳೆದ ವೃಕ್ಷಕ್ಕೆ ತಳಿರ ಕೊನರಲ್ಲದೆ
ಬೇರು ಸಾರಗೆಟ್ಟು ನಷ್ಟವಾದ ತರುವಿಂಗೆ ಮತ್ತೆ ಅಂಕುರವುಂಟೆ?
ತ್ರಿವಿಧಮಲಕ್ಕೆ ದೂರಸ್ಥನಾಗಿ ಅಪೇಯವೆಂದು ಬಿಟ್ಟಲ್ಲಿ
ಮತ್ತರಿದು ಹಿಡಿದೆಹೆನೆಂದಡೆ ಪೇಯವಪ್ಪುದೆ?
ತಳನನಗೆದು ಮೇಲನರಿಯದೆ ಬೀಳಿಸಿಕೊಂಬವನಂತೆ
ತನ್ನ ಊಣೆಯವ ತಾನರಿಯದೆ
ಮೂಕೊರತಿ ಮೂಕುತಿಯ ಮಣಿಯ
ತನಗೆಂದು ವಿಚಾರಿಸುವಂತೆ
ಇಂತಿ ನಿರ್ವಾಣ ಬರುದೊರೆವೋಯಿತ್ತಲ್ಲಾ ಸಂಗನಬಸವಣ್ಣಾ
ಇವರುವನರಿಯದಂತೆ
ಬ್ರಹ್ಮೇಶ್ವರಲಿಂಗಕ್ಕೆ ಉರಿಯದೆ ಹೋದರಲ್ಲಾ.[೬]

ಎಲೆಗಳನ್ನು ಕಳಚಿಕೊಂಡ ವೃಕ್ಷಕ್ಕೆ ನೀರುನಿಸಿದರೆ ಮತ್ತೆ ಅದು ಚಿಗಿಯಬಲ್ಲದು, ಹೂ ಹಣ್ಣುಗಳನ್ನು ಕೊಡಬಲ್ಲದು. ಆದರೆ ಬೇರೆಲ್ಲ ನಷ್ಟವಾದ ಮರಕ್ಕೆ ನೀರು ಹಾಕಿದರೆ ನುಂಟು ಅದು ಚಿಗಿಯಲಾರದು ಹಾಗೂ ಹೂ, ಹಣ್ಣು ಕೊಡಲಾರದು. ಅಂತಹ ವೃಕ್ಷಕ್ಕೆ ನೀರುನಿಸಿದರು ವ್ಯರ್ಥ. ಅದರಂತೆ ಮಲತ್ರಯಗಳಿಗೆ ಒಳಗಾದವನು ಏನು ಪ್ರಯತ್ನ ಮಾಡಿದರು ಗುರು-ಲಿಂಗ-ಜಂಗಮರ ಸೇವೆ ಮಾಡಿದರು ಅದು ವ್ಯರ್ಥವಾಗುತ್ತದೆ. ತನ್ನಲ್ಲಿಯ ದೋಷವನ್ನು ಮೊದಲು ತಾನು ಕಂಡುಕೊಳ್ಳಬೇಕು. ತನ್ನ ತಪ್ಪು ಅರಿಯಲಾರದೆ ಮಾಡುವ ಅವನ ಪ್ರಯತ್ನವೆಲ್ಲವು ನಿಶ್ಫಲವಾದುದು. ಒಬ್ಬ ಮೂಕ ಹೆಣ್ಣುಮಗಳು ತನಗೆ ಮೂಕುತಿಯ ಮನಿಬೇಕೆಂದು ಇನ್ನೊಬ್ಬರಲ್ಲಿ ವಿಚಾರಿಸುವುದು ಹೇಗೆ ವ್ಯರ್ಥವೊ ಅದರಂತೆ ತನ್ನ ಗುಣ ದೋಷಗಳ ಬಗ್ಗೆ ಅರಿವಿಲ್ಲದೆ ಶಿವೊಪಾಸನೆ ಮಾಡುತ್ತೆನೆಂದು ಹೇಳುವುದು ಪರಮಾತ್ಮನನ್ನು ಸೇರುತ್ತೇನೆನ್ನುವರು ಅಷ್ಟೇ ನಿರುಪಯುಕ್ತವಾದುದು. ಇಂತಹ ಜನರಿಗೆ ನಿರ್ವಾಣ ಸ್ಥಿತಿ ಬರುವುದಾದರು ಹೇಗೆ. ಇಂಥವರು ಪರಮಾತ್ಮನನ್ನು ಕೂಡುವುದಾದರು ಹೇಗೆ ಎಂದು ಬೊಮ್ಮಯ್ಯನು ಪ್ರಸ್ತುತ ವಚನದಲ್ಲಿ ಶರಣರನ್ನು ಕುರಿತು ತಿಳಿಸಿದ್ದಾನೆ.

ಬೊಮ್ಮಯ್ಯನು ತನ್ನ ವಚನಗಳಲ್ಲಿ ಶರಣನಾದವನು ಅಚಲವಾದ ನಿಷ್ಠೆಯನ್ನು ಇಟ್ಟುಕೊಂಡಿರಬೇಕೆಂದು ಹೇಳುತ್ತಾನೆ. ಸತ್ಯ ಶುದ್ಧ ಕಾಯಕ ಮತ್ತು ನಿಷ್ಠೆ ಇವು ಶರಣರ ಪ್ರಮುಖ ಲಕ್ಷಣಗಳು. ಆದ್ದರಿಂದಲೇ ಬಸವಣ್ಣನು ನಂಬಿಕರೆದರೆ ಓ ಎನ್ನಲಾರನೆ ಶಿವನು ಎಂದು ಹೇಳಿದ್ದಾನೆ.

ಶಿವಶರಣರು ತಾವು ಆರಾಧಿಸುವ ದೇವನ ಮೇಲೆ ಅಪಾರವಾದ ಭಕ್ತಿ ಇಟ್ಟಿದ್ದರು. ಪರಮಾತ್ಮನ ಕರುಣೆಯಿದ್ದರೆ ಏನು ಬೇಕಾದರು ಸಾಧಿಸಬಹುದು. ಏನು ಬೇಕಾದರು ಘಟಿಸಬಹುದು. ಈ ಸಂಗತಿಯನ್ನು ಬೊಮ್ಮಯ್ಯ ಒಂದು ಸೊಗಸಾದ ವಚನದ ಮೂಲಕ ಹೇಳಿಕೊಡುತ್ತಾನೆ.

೬. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೦೬

ಕೊರಡು ಕೊನರ್ವೊ್ದಲ್ಲಿ, ಬರಡು ಹಯನಾದಲ್ಲಿ
ಚಿತ್ರದ ಬೊಂಬೆ ನಿಜಕರ್ತೃರೂಪಾಗಿ ಬಂದಲ್ಲಿ
ಅವು ಹಾಹೆಯ ದೃಷ್ಟವೋ, ವಿಶ್ವಾಸಿಯ ಚಿತ್ತವೋ?
ಇದು ಭಕ್ತಿಯ ಹೊಲಬಿಗೆ ಮುಖ್ಯ
ಸಂಗನಬಸವಣ್ಣನ ಸತ್ಯ, ಬ್ರಹ್ಮೇಶ್ವರ ಲಿಂಗವ ಕೂಡುವ ಕೃತ್ಯ

ಪ್ರಸ್ತುತ ವಚನವು ಬಸವಣ್ಣನವರ :

ನೀನೊಲಿದರೆ ಕೊರಡು ಕೊನರುವದಯ್ಯ
ನಿನೊಲಿದರೆ ಬರಡು ಹಯನವುದಯ್ಯ
ನಿನೊಲಿದರೆ ಸಕಲ ಪಡಿಪದಾರ್ಥಗಳು ಇದಿರಲಿಪ್ಪವಯ್ಯಾ.[೭]

ಎಂಬ ವಚನವನ್ನು ನೆನಪಿಸುತ್ತದೆ. ಕಡಿದು ತುಂಡಾಗಿ ಬಿದ್ದ ಮರವು ಇನ್ನೆನು ಚಿಗಿಯುವುದಿಲ್ಲ ಎಂದು ನಂಬಿದರು ಪರಮಾತ್ಮನ ಕರುಣೆಯಿದ್ದರೆ ಅದು ಚಿಗುರುತ್ತದೆ. ಬರಡು ದನ ಹಯನು ಕೊಡದಿದ್ದರು ಭಗವಂತನ ಅನುಗ್ರಹವಿದ್ದರೆ ಅದು ಹಾಲನ್ನು ಕೊಡಬಹುದು. ಚಿತ್ರದ ಗೊಂಬೆಯಲ್ಲಿ ಜೀವ ಇಲ್ಲದಿದ್ದರು ಶಿವನ ಕೃಪೆಯಿದ್ದರೆ ಅದರಲ್ಲಿ ಜೀವ ತುಂಬಿಕೊಳ್ಳಬಹುದು. ಹೀಗೆ ಆಗಬಾರದು, ನಡೆಯಲಾರದ ಸನ್ನಿವೇಶ ಸಂಗತಿಗಳೆಲ್ಲ ಪರಮಾತ್ಮನ ಅನುಗ್ರಹದಿಂದ ಕೈಗೂಡುತ್ತವೆ. ಇದಕ್ಕೆ ಮುಖ್ಯವಾದ ಕಾರಣವೆಂದರೆ ಶಿವಶರಣರಲ್ಲಿರುವ ಅಚಲವಾದ ನಿಷ್ಠೆ, ಭಕ್ತಿ. ಪರಮಾತ್ಮನ ಕರುಣೆಯಿದ್ದರೆ ಏನೆಲ್ಲಾ ಕೈಗೂಡುವುದು ಎಂಬುದನ್ನು ಬಸವಣ್ಣನ ಉದಾಹರಣೆಯೊಂದಿಗೆ ಬೊಮ್ಮಯ್ಯನು ವಿವರಿಸುತ್ತಾನೆ. ಕೂಡಲಸಂಗಮದೇವನ ಕರುಣೆಯಿಂದ ಪಡೆಯಲಾರದ ಪಡೆದ ಬಸವಣ್ಣನನ್ನು ಭಕ್ತಿಗೆ ಬೊಮ್ಮಯ್ಯ ಉದಾಹರಿಸುತ್ತಾನೆ. ಹೀಗೆ ಬೊಮ್ಮಯ್ಯನು ಶರಣರಲ್ಲಿ ಇರಬೇಕಾದ ಲಕ್ಷಣಗಳನ್ನು ಸಂದರ್ಭ ಸಹಿತವಾಗಿ ಸೊಗಸಾದ ಉದಾಹರಣೆ ಮೂಲಕ ರೂಪಕಗಳ ಮೂಲಕ ಕಟ್ಟಿಕೊಡುತ್ತಾನೆ. ಅವನು ತನ್ನ ವಚನಗಳಲ್ಲಿ ವೀರಶೈವ ಸಿದ್ಧಾಂತಗಳನ್ನು ತಿಳಿಸಿಕೊಡುತ್ತಾನೆ.

ಬೊಮ್ಮಯ್ಯ ಗುರು–ಲಿಂಗ–ಜಂಗಮರ ಬಗ್ಗೆ ಅಪಾರ ಭಕ್ತಿಯನ್ನು ಹೊಂದಿದ್ದಾನೆ. ವೀರಶೈವರಲ್ಲಿ ಗುರು–ಲಿಂಗ–ಜಂಗಮಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಬೊಮ್ಮಯ್ಯನು ಗುರುವಾಗಲಿ, ಲಿಂಗವಾಗಲಿ, ಜಂಗಮವಾಗಲಿ ಸತ್ಯಶುದ್ಧ ಕಾಯಕದಿಂದ ಬಾಳಬೇಕೆಂದು ಹೇಳುತ್ತಾನೆ. ಗುರುನಿಷ್ಠೆ, ಲಿಂಗನಿಷ್ಠೆ, ಜಂಗಮನಿಷ್ಠೆ ಸುಮ್ಮಸುಮ್ಮನೆ ಸಾಧಿಸುವಂತವು ಅಲ್ಲ. ಈ ತ್ರಿವಿಧಗಳಲ್ಲಿ ನಿಷ್ಠೆಯನ್ನಿಟ್ಟು ಬಾಳುವುದು ಧೀರರಿಗೆ ಮಾತ್ರ ಸಾಧ್ಯ. ಅಂತಹ ಧೀರನೆಂದರೆ ಸಂಗನಬಸವಣ್ಣನೆಂದು ಹೇಳುತ್ತಾನೆ.

---

೭. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೦೪

ಗುರು–ಲಿಂಗ–ಜಂಗಮರಲ್ಲಿ ಯಾರು ಸಂದೇಹವನ್ನು ತಾಳುತ್ತಾರೆಯೋ ಅವರಿಂದ ಏನನ್ನು ಸಾಧಿಸಲಾಗುವುದಿಲ್ಲ. ಸಂದೇಹಿಯಾದ ಶರಣನಿಗೆ ಭಗವಂತ ಒಲಿಯುವುದಾದರೂ ಹೇಗೆ ಈ ಎಲ್ಲ ಸಂಗತಿಗಳನ್ನು ಬೊಮ್ಮಯ್ಯ ಈ ಕೆಳಗಿನ ವಚನದಲ್ಲಿ ಸ್ಪಷ್ಟಪಡಿಸಿದ್ದಾನೆ.

ಗುರುನಿಷ್ಠೆ ಲಿಂಗನಿಷ್ಠೆ ಜಂಗಮನಿಷ್ಠೆ
ಈ ತ್ರಿವಿಧ ನಿಷ್ಠೆಯಲ್ಲಿ ಏಕಾಂಗಲಿಂಗನಿಷ್ಠೆ
ವೀರಧೀರಂಗಲ್ಲದಾಗದು
ಇದು ಸಂಗನಬಸವಣ್ಣನಿಂದ ಬಂದ ಸಂತತಿಗಲ್ಲದಾಗದು
ಬ್ರಹ್ಮೇಶ್ವರಲಿಂಗವನರಿವುದಕ್ಕೆ
ತ್ರಿಗುಣಸಂದೇಹಿಗಳಿಗೆ ವಸ್ತು ಸಂಧಿಸದು ನೋಡಾ.[೮]

ಶರಣರು ಗುರುವಿನಲ್ಲಿ ನಿಷ್ಠೆಯನ್ನಿಡಬೇಕು. ಲಿಂಗವನ್ನು ಪೂಜಿಸಬೇಕು. ಜಂಗಮಕ್ಕೆ ಸೇವೆಗೈಯಬೇಕು. ಗುರು–ಲಿಂಗ–ಜಂಗಮ ಈ ಮೂರರಲ್ಲಿಯೂ ಅಚಲವಾದ ನಿಷ್ಠೆಯನ್ನಿಡಬೇಕು. ಗುರು–ಲಿಂಗ–ಜಂಗಮರನ್ನು ನಂಬದ ಅಲ್ಲಿ ವಿಶ್ವಾಸದ ತಾಳದ ಸಂದೇಹಿಗಳಿಗೆ ಆ ಪರವಸ್ತು ಅಂದರೆ ಬ್ರಹ್ಮೇಶ್ವರ ಲಿಂಗವು ಸಂಧಿಸಲಾರದು. ಗುರುಸೇವೆ, ಲಿಂಗ ನಿಷ್ಠೆ, ಜಂಗಮ ದಾಸೋಹಕ್ಕೆ ತನುಮನದಿಂದ ಮತ್ತು ಏಕನಿಷ್ಠೆಯಿಂದ ತನ್ನ ಬದುಕನ್ನು ಸವೆಸಿದವನೆಂದರೆ ಅವನು ಬೇರೆ ಯಾರು ಅಲ್ಲ ಸಂಗನಬಸವಣ್ಣನೆಂದು ಬೊಮ್ಮಯ್ಯ ತಿಳಿಸುತ್ತಾನೆ.

ಬೊಮ್ಮಯ್ಯನ ಇನ್ನೊಂದು ವಚನದಲ್ಲಿ ಗುರು–ಲಿಂಗ–ಜಂಗಮವಾದರು ಕೂಡಾ ಪರಮಾತ್ಮನಲ್ಲಿ ಅಚಲವಾದ ಭಕ್ತಿಯನ್ನಿಟ್ಟು ತಮ್ಮ ತಮ್ಮ ಸ್ಥಾನಗಳ ಅಹಂಕಾರ ಮರೆತು ಭಗವಂತನ ಉಪಾಸನೆ ಮಾಡಬೇಕೆಂದು ಈ ಕೆಳಗಿನ ವಚನದಲ್ಲಿ ತಿಳಿಸುತ್ತಾನೆ.

ಗುರು ಭಕ್ತನಾದಲ್ಲಿ ಗುರುವಳಿದು ತಾನುಳಿದಡೆ ಗುರು ಭಕ್ತನಲ್ಲ
ಲಿಂಗ ಭಕ್ತನಾದಡೆ ಜಾಗ್ರಜಾಹೆಗಳಲ್ಲಿ ತನ್ನಂಗವ ಬಿಟ್ಟು
ಲಿಂಗ ಹಿಂಗೆದಲ್ಲಿಯೆ, ಆತ್ಮ ಒಡಗೂಡಿದಲ್ಲಿಯೆ ಲಿಂಗ ಭಕ್ತನಲ್ಲ
ಜಂಗಮ ಭಕ್ತನಾದಡೆ ಕಳವು ಹಾದರ ದುರ್ಗಣದಿಂದ
ಕಡಿಯಿಸಿ ಕೊಂಬಲ್ಲಿ, ಬಿಡಿಸದೆ ತಾನಡಗೆ
ಅರಿಯದಂತಿದ್ದಾಗವೆ, ಜಂಗಮ ಭಕ್ತನಲ್ಲ
ಇಂತೀ ತ್ರಿವಿಧ ಭಾವಂಗಳಲ್ಲಿ
ಘಟದ ಸಂದನಳಿದವಂಗಲ್ಲದೆ ತ್ರಿವಿಧ ಭಕ್ತಿಯಿಲ್ಲ
ಈ ಗುಣ ಸಂಗನಬಸವಣ್ಣಂಗಲ್ಲದೆ ಸಾಧ್ಯವಿಲ್ಲ
ಬ್ರಹ್ಮೇಶ್ವರಲಿಂಗವನರಿದವರಿಗೂ ಅಸಾಧ್ಯ ನೋಡಾ.[೯]

---

೮. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೧೯
೯. ಅದೇ

ಗುರುಭಕ್ತಿ ಉಂಟು, ಲಿಂಗಭಕ್ತಿ ಉಂಟು.
ಜಂಗಮಭಕ್ತಿ ಎತ್ತಲಾನೆ ಉಂಟು.
ತನ್ನನರಿದು ಇದಿರ ಕಾಬ ಜ್ಞಾನಭಕ್ತಿ
ಚೆನ್ನಬಸವಣ್ಣಂಗೆ ಸಾಧ್ಯವಾಯಿತ್ತು ನೋಡಾ.
ಅದು ಅರಿದರುವಿಂಗೆ ಮುನ್ನವೆ ಕುರುಹಿಟ್ಟ ನಿಜ.
ಆ ಗುಣ ಸಂಗನಬಸವಣ್ಣ ಬಂದ ಹಾದಿ,
ಬ್ರಹ್ಮೇಶ್ವರಲಿಂಗದಲ್ಲಿಗಾಗಿ.[೧೦]

ಗುರುವಿನಲ್ಲಿ ಅನುವನರಿತವಂಗೆ
ಮತ್ತೆ ಗುರು ನಿರೂಪವೆಂಬುದಿಲ್ಲ.
ಪ್ರಾಣವೆ ಲಿಂಗವಾದವಂಗೆ ನೆನಹಿಂಗೆ ಎಡೆದೆರಪಿಲ್ಲ.
ಸರ್ವದಯೆ ಸಂಪೂರ್ಣನಾದವಂಗೆ
ಇಕ್ಕಿಹೆ ಎರೆದಿಹನೆಂಬ ತೋಟಿಯ ತೊಡಕಿಲ್ಲ.
ಇಂತಿವನೊಳಗನರಿದು ವೇಧಿಸುವನ್ನಕ್ಕ
ಗುರುವಿನ ಆಜ್ಞೆ, ಲಿಂಗದ ಪೂಜೆ,
ಮಾಟಕೂಟದ ಬೇಟವ ಬಿಡಲಿಲ್ಲ.
ಇದು ಸಂಗನಬಸವಣ್ಣನಾಟ, ಬ್ರಹ್ಮೇಶ್ವಲಿಂಗದ ಕೂಟ.[೧೧]

ವೀರಶೈವ ಸಿದ್ಧಾಂತದಲ್ಲಿ ಗುರುವಾಗಲಿ, ಲಿಂಗವಾಗಲಿ, ಜಂಗಮವಾಗಲಿ ತಮ್ಮ ತಮ್ಮ ಅಸ್ತಿತ್ವದ ಅರಿವನ್ನು ಇಟ್ಟುಕೊಂಡು ಸಾಗಬೇಕು, ಗುರುಭಕ್ತನಾದಲ್ಲಿ ತನ್ನ ಗುರುತನವನ್ನು ಬಿಟ್ಟು ಗುರುವಿನಲ್ಲಿರುವ ಗುರುತ್ವದ ಲಕ್ಷಣಗಳನ್ನೆಲ್ಲಾ ಗಾಳಿಗೆ ತೂರಿ ನಾನೂ ಗುರು ಎಂದು ಅಹಂಕಾರದಲ್ಲಿ ನಡೆದರೆ ಅವನು ಗುರುವು ಅಲ್ಲ, ಭಕ್ತನು ಅಲ್ಲ, ಗುರುವಿದ್ದಂತವನು ತನ್ನ ಗುರುತನವನ್ನು ಅರಿತುಕೊಂಡಿರಬೇಕು. ಗುರುವುಳಿದು ತಾನಳಿದರೆ ಆ ಗುರುಭಕ್ತನಲ್ಲ ಎಂದು ಬೊಮ್ಮಯ್ಯ ಈ ವಚನದಲ್ಲಿ ಗುರು–ಲಿಂಗ–ಜಂಗಮರು ಇವರೆಲ್ಲರು ಒಂದರ್ಥದಲ್ಲಿ ಸಾಧಕರೇ ಭಕ್ತನಲ್ಲಿರಬೇಕಾದ ಸಮರ್ಪಣಾಭಾವ ಗುರುವಿಗೂ ಜಂಗಮಕ್ಕೂ ಮತ್ತು ಲಿಂಗಕ್ಕೂ ಇರಬೇಕೆಂದು ಬೊಮ್ಮಯ್ಯನು ತಿಳಿಸುತ್ತಾನೆ. ಲಿಂಗ ಭಕ್ತನಾದರೆ ಜಾಗ್ರ ಸ್ವಪ್ನಗಳಲ್ಲಿ ಕೂಡಾ ತನ್ನ ಅಂಗದ ಮೇಲಿನ ಮೋಹವನ್ನು ಬಿಟ್ಟುಬಿಡಬೇಕು. ಅಂಗ ತಾನಲ್ಲಿ ಅಂಗಕ್ಕೆ ತನ್ನ ಅಸ್ತಿತ್ವದ ಅರಿವು ಇದ್ದರೆ ಆ ಅಂಗದ ಮೇಲೆ ಲಿಂಗವಿದ್ದರೇನು? ಇಲ್ಲದಿದ್ದರೇನು? ಅದು ನಿರೂಪಯುಕ್ತ ಜಂಗಮ ಭಕ್ತನಾದರೆ ತನ್ನ ಜಂಗಮತ್ವವನ್ನು ಆತ ಅರಿತಿರಬೇಕು. ಕಳವು, ಹಾದರ, ದುರ್ಗನದಿಂದ ಜಂಗಮ ಕೂಡಿಕೊಂಡಿದ್ದರೆ ಅವನ ಜಂಗಮತ್ವಕ್ಕೆ ಏನು ಬೆಲೆಯಿದೆ. ಜಂಗಮತ್ವವು ಅತ್ಯಂತ ಪವಿತ್ರವಾದುದು. ಆದ್ದರಿಂದ ಗುರುವಾಗಲಿ, ಲಿಂಗವಾಗಲಿ, ಜಂಗಮವಾಗಲಿ ಘಟದ ಸಂದನವನಳಿಯಬೇಕು.

---

೧೦. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೧೯
೧೧. ಅದೇ

ಈ ಸಂದನವನ್ನಿಯುವ ಸಾಮರ್ಥ್ಯ ಸಂಗನ ಬಸವಣ್ಣನಂತವರಿಗೆ ಮಾತ್ರ ಸಾಧ್ಯವೆಂದು ಬೊಮ್ಮಯ್ಯ ಹೇಳುತ್ತಾನೆ.

ಬೊಮ್ಮಯ್ಯನು ಯಾವುದು ಗುರು, ಯಾವುದು ಲಿಂಗ ಎಂಬುದನ್ನು ಮತ್ತು ಗುರು, ಲಿಂಗದ ಸ್ವರೂಪವನ್ನು ಬಹಳ ಸೊಗಸಾಗಿ ಈ ವಚನದಲ್ಲಿ ತಿಳಿಸುತ್ತಾನೆ.

ಗುರು ಅಳಿದಲ್ಲಿ ಗುರುಪಟ್ಟವೆಂದು ಕಟ್ಟಿ
ಪರಮ ಗುರುವೆಂದು ಶರಣೆಂಬಲ್ಲಿ ಲಿಂಗಬಾಹ್ಯವಾಗಿ
ಅಂಗವ ಹರಿದುಹೋದಲ್ಲಿ ಮತ್ತೊಂದು ಲಿಂಗ ಉಂಟೆಂದು
ಕಟ್ಟಿಕೊಳ್ಳರೇತಕ್ಕೆ?
ಗುರು ಪೂರ್ವ, ಲಿಂಗ ಉತ್ತರವೆ?
ಗುರು ಆದಿ, ಲಿಂಗ ಅನಾದಿಯೇ ಇದು ಕಾರಣದಲ್ಲಿ
ಗುರುಭಕ್ತಿ ಅರಿದು ಬಿರಿದು, ಲಿಂಗಭಕ್ತಿ ಎತ್ತಲಾನು
ಒಬ್ಬ ಜಂಗಮಭಕ್ತಿಗೆ ಸಂಗನಬಸವಣ್ಣನಲ್ಲದಿಲ್ಲ
ಬ್ರಹ್ಮೇಶ್ವರಲಿಂಗ ಸಾಕ್ಷಿಯಾಗಿ.[೧೨]

ಗುರು ಅಳಿದ ಬಳಿದ ಗುರುಪಟ್ಟವು ನಾಶವಾಗುತ್ತದೆ. ಗುರು ಪಟ್ಟವು ನಾಶವಾದ ಬಳಿಕವು ಗುರುತ್ವವನ್ನು ಗುರುತಿಸಿಕೊಂಡು ಅಂಗದ ಮೇಲೆ ಲಿಂಗವನ್ನು ಪ್ರತಿಷ್ಠಾಪಿಸಿಕೊಳ್ಳುವ ಗುರುಗಳನ್ನು ಕುರಿತು ಬೊಮ್ಮಯ್ಯನು ತೀವ್ರವಾಗಿ ಟೀಕಿಸುತ್ತಾನೆ. 'ಅಂಗ ಹರಿದು ಹೋದ ಬಳಿಕ ಅದಕ್ಕೆ ಮತ್ತೊಂದು ಲಿಂಗವುಂಟೆ' ಎಂದು ಪ್ರಶ್ನಿಸುತ್ತಾ ಲಿಂಗಾಂಗ ಸಾಮರಸ್ಯದ ಸ್ಪಷ್ಟ ನಿಲುವನ್ನು ಸೂಚಿಸುತ್ತಾನೆ. ಅಂಗಕ್ಕೂ ಲಿಂಗಕ್ಕೂ ಅವಿನಾಭಾವ ಸಂಬಂಧವಿದೆ. ಆದ್ದರಿಂದ ಗುರು ಮತ್ತು ಗುರುತ್ವವೂ ಅದೇ ರೀತಿಯ ಸಂಬಂಧವಿದೆ. ಗುರು ಅಳಿದ ಬಳಿಕ ಆತನ ಗುರು ಪಟ್ಟವು ನಶಿಸುತ್ತದೆ. ಆದ್ದರಿಂದ ಗುರು ಪೂರ್ವ ಲಿಂಗ ಉತ್ತರವೆಂದು ಗುರು ಆದಿ, ಲಿಂಗ ಅನಾದಿಯೆಂದು ವಿವರಿಸುತ್ತಾನೆ. ಗುರು-ಲಿಂಗ-ಜಂಗಮ ಭಕ್ತಿಯನ್ನು ಸಂಗನಬಸವಣ್ಣ ಮಾಡಿದಂತೆ ಬೇರಾರು ಮಾಡಲಿಲ್ಲವೆಂದು ಹೇಳುತ್ತಾನೆ.

ಬೊಮ್ಮಯ್ಯನು ಲಿಂಗಾಂಗ ಸಾಮರಸ್ಯದ ಕುರಿತು ಸ್ಪಷ್ಟವಾದ ನಿಲುವನ್ನು ತಾಳುತ್ತಾನೆ. ಜಗತ್ತನ್ನು ನಿಯಾಮಿಸಿದ, ನಿರ್ಮಿಸಿದ ಭಗವಂತನ ಅಸ್ತಿತ್ವ ಆ ಜಗತ್ತಿನೊಳಗೆ ಹೂತಕೊಂಡಿದೆ. ಈ ಅಭೇದವನ್ನು ಶರಣನಾದವ ಅರಿತುಕೊಳ್ಳಬೇಕು ಬೊಮ್ಮಯ್ಯನ ಈ ಒಂದು ವಚನವು ಈ ಮಾತಿಗೆ ಪುಷ್ಠಿಯನ್ನಿಯುತ್ತದೆ.

---

೧೨. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೦೮

ನಿಂದ ನೆಲೆಯ ನೀರಿನಂತೆ
ಮರ ಶಿಲೆಯಲ್ಲಿ ಸಂಧಿಸಿ ನಿಂದ ಪಾವಕನಂತೆ
ಕರಂಡದಲ್ಲಿ ಬಂಧಿಸಿ ನಿಂದ ಸುವಾಸನೆಯಂತೆ
ಈ ಅಂಗದಲ್ಲಿ ನಿಂದ ನಿಜಲಿಂಗಾಂಗ ಸಂಗಸಂಬಂಧ
ಈ ಗುಣ ಸಂಗನಬಸವಣ್ಣಂಗೆ ಸಂಬಂಧವಾಯಿತ್ತು
ಬ್ರಹ್ಮೇಶ್ವರಲಿಂಗವು ಅವರಿಗೆ ಒಳಗಾದ.[೧೩]

ಬಯಲು ಬೆಳಗುಳ್ಳನ್ನಕ್ಕ
ಮುಂದೊಂದು ಕುರುಹಿನ ಕುಲ ಬಿಡದು.
ಕುರುಹುಳ್ಳನ್ನಕ್ಕ ಅರಿದೆಹೆನೆಂಬ ಭಾವ.
ಆ ಅರಿಕೆಯೆಂಬುದು ವಿಶ್ವಾಸದಿಂದಲ್ಲದೆ ಕಾಣಬಾರದು.
ಇದು ಸಂಗನಬಸವಣ್ಣ ಸಂಧಿಸಿದ ಸಂಬಂಧ.
ಬ್ರಹ್ಮೇಶ್ವರಲಿಂಗವ ವಿಶ್ವಾಸದಿಂದಲ್ಲದೆ ಸಂಬಂಧಿಸಬಾರದು.[೧೪]

ನಾವು ನಿಂತನೆಲ ನೀರಿನಲ್ಲಿಯೇ ಇದೆ. ಆದರೂ ನೀರಿನ ಪರಿಕಲ್ಪನೆ ನಮಗೆ ಬರುವುದಿಲ್ಲ. ಮರ, ಶಿಲೆಗಳಲ್ಲಿ ಪಾವಕವಿದೆ. (ಬೆಂಕಿ) ಅದರ ಅರಿವು ನಮಗಾಗುವುದಿಲ್ಲ. ಮರಕ್ಕೆ ಮರ ಘರ್ಷಣೆಯುಂಟಾದಾಗ ಕಲ್ಲು ಕಲ್ಲನ್ನು ತಾಗಿದಾಗ ಅದರೊಳಗಿರುವ ಬೆಂಕಿಯ ಸ್ವರೂಪ ಗೊತ್ತಾಗುತ್ತದೆ. ಪುಷ್ಪದಲ್ಲಿಯ ಸುವಾಸನೆ ತುಂಬಿಕೊಂಡರು ನಮ್ಮ ಕಣ್ಣಿಗೆ ಅದು ಗೋಚರಿಸುವುದಿಲ್ಲ. ಅದರಂತೆ ಸಕಲ ಚರಾಚರ ಜೀವರಾಶಿಗಳಲ್ಲಿ ಭಗವಂತ ತುಂಬಿಕೊಂಡಿದ್ದಾನೆ. ಲಿಂಗವೆಂದರೆ ಪರಮಾತ್ಮ, ಅಂಗವೆಂದರೆ ಜೀವಾತ್ಮ, ಲಿಂಗಾಂಗ ಸಾಮರಸ್ಯವೆಂದರೆ ಜೀವಾತ್ಮ ಪರಮಾತ್ಮನೊಂದಿಗೆ ಕೂಡಿಕೊಳ್ಳುವ ಸಂಧಿಕಾಲ. ಇದನ್ನೆ ಬೊಮ್ಮಯ್ಯನು ನಿಜಲಿಂಗಾಂಗ ಸಂಗ ಸಂಬಂಧ ಎಂದು ಕರೆದಿದ್ದಾನೆ. ಈ ರೀತಿಯ ತಿಳುವಳಿಕೆ ಅಥವಾ ಅರಿವು ಸಂಗನಬಸವಣ್ಣನಿಗೆ ಮಾತ್ರ ಸಾಧ್ಯವೆಂದು ಒತ್ತುಕೊಟ್ಟು ಹೇಳುತ್ತಾನೆ. ಜೀವವು ಅದೇಷ್ಟೆ ಪ್ರಯತ್ನ ಮಾಡಿದರು ಮಾಯಾಬಂದನದಿಂದ ಹೊರಬರಲು ಅದಕ್ಕೆ ಆಗುವುದೇ ಇಲ್ಲ. ಎಲ್ಲ ಬಾಗಿಲುಗಳನ್ನು ಮುಚ್ಚಿದರು ಮತ್ತೆ ಬೇರೊಂದು ಬಾಗಿಲನ್ನು ಹುಡುಕುವುದು ತಪ್ಪಿಲ್ಲ. ತತ್ವಗಳನ್ನು ಸ್ಥಲಗಳನ್ನು ಅರಿತುಕೊಂಡರು ಕೂಡಾ ಅರಿವು ಒಂದು–ಅರಿತನವು ಒಂದು ಎಂಬ ಭೇದ ಇದ್ದೆ ಇದೆ. ಅರಿವು ಮತ್ತು ಅರಿಯಿಸಿಕೊಂಬುದು ಇವೆರಡರಲ್ಲಿ ಬೇಧ ಹೊರಟು ಹೋದಾಗ ಮಾತ್ರ ಪರಮಾತ್ಮ ಸಾಧ್ಯವಾಗುತ್ತಾನೆ. ಬೊಮ್ಮಯ್ಯನು ಅರಿವುದೊಂದು ಅರುಹಿಸಿಕೊಂಬುದೊಂದು ಈ ಉಭಯವನ್ನು ಏಕೀಕರಿಸಿಕೊಂಡವನೇ ಪರಮಜ್ಞಾನಿ, ಪರಮಸುಖಿ ಎಂದು ಹೇಳುತ್ತಾನೆ. ಇಂತಹ ಸುಪತದಲ್ಲಿ ಸಾಗಿದವನು ಸಂಗನಬಸವಣ್ಣ ಮಾತ್ರ ಎಂದು ಮತ್ತೇ ಮತ್ತೇ ಅವನನ್ನು ಸ್ತುತಿಸುತ್ತಾನೆ. ಬೊಮ್ಮಯ್ಯ ಈ ಸಂಗತಿಗಳನ್ನೆಲ್ಲಾ ಪ್ರಸ್ತುತ ಈ ವಚನದಲ್ಲಿ ನಿರೂಪಿಸುತ್ತಾನೆ.

೧೩. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೧೯
೧೪. ಅದೇ

ಬಾಗಿಲವಾಡವ ಬಳಸಿ ಬಂಧದಲ್ಲಿಕ್ಕಿದಡೂ
ಮರೆಯ ಭೇದವಲ್ಲದೆ ನಿಳಯಕ್ಕೆ ಹೋಹುದು ತಪ್ಪದು
ತತ್ವಂಗಳ ವಿಚಾರಿಸಿ, ಸ್ಥಲಂಗಳ ವಿಸ್ತರಿಸಿ
ಪರಿಪೂರ್ಣ ಪೂರ್ಣಂಗಳೆಂಬಲ್ಲಿ ವಿಶ್ರಮಿಸಿ
ಅರಿವುದೊಂದು ಅರುಹಿಸಿಕೊಂಬುದೊಂದು
ಉಭಯವನೇಕೀಕರಿಸಿ ನಿಂದಾತನೆ ಪರಮಸುಖಿ
ಇದು ಸಂಗನಬಸವಣ್ಣನಿಕ್ಕಿದ ಭಿತ್ತಿ
ಬ್ರಹ್ಮೇಶ್ವರಲಿಂಗದಲ್ಲಿ ಎಯ್ದುವ ಸುಪಥದ ಪಥ.[೧೫]

ಭಕ್ತ ಹೇಗಿರಬೇಕು, ಅವನ ಗುಣ ಸ್ವಭಾವಗಳು ಮತ್ತು ಲಕ್ಷಣಗಳು ಹೇಗಿವೆ ಎಂಬುದನ್ನು ಈ ವಚನಕಾರ ತನ್ನ ವಚನದಲ್ಲಿ ತಿಳಿಸುತ್ತಾನೆ.

ಭಕ್ತಂಗೆ ತ್ರಿವಿಧಮಲ ನಾಸ್ತಿಯಾಗಿರಬೇಕು
ಮಾಹೇಶ್ವರಂಗೆ ಬಂಧ ಜಪನೇಮ ಕರ್ಮಂಗಳು ಹಿಂಗಿರಬೇಕು
ಪ್ರಸಾದಿಗೆ ಆಯತ ಸ್ವಾಯತ ಸನ್ನಿಹಿತವೆಂಬುದ
ಸಂದೇಹಕ್ಕಿಕ್ಕದೆ ಸ್ವಯಸನ್ನದ್ಧವಾಗಿರಬೇಕು
ಪ್ರಾಣಲಿಂಗಿಯಾಡಡೆ ಬಂದು ಸೋಂಕುವ ಸಗುಣ
ನಿಂದು ಸೋಂಕುವ ದುರ್ಗುಣ
ಉಭಯ ಸೋಂಕುವುದಕ್ಕೆ ಮುನ್ನವೆ
ಹಿಡಿವುದ ಹಿಡಿದು, ಬಿಡುವುದ ಬಿಟ್ಟು ಅರ್ಪಿಸಬೇಕು
ಶರಣನಾದಲ್ಲಿ ಅಗುಚೇಗೆಯೆಂಬುದನರಿಯದೆ
ಸ್ತುತಿನಿಂದ್ಯಾದಿಗಳಿಗೆ ಮೈಗೊಡದೆ
ರಾಗವಿರಾಗವೆಂಬುದಕ್ಕೆ ಮನವಿಕ್ಕದೆ
ಜಿಹ್ವೆ ಗುಹ್ಯೇಂದ್ರಿಯಕ್ಕೆ ನಿಲುಕದೆ
ಮದಗಜದಂತೆ ಇದಿರನರಿಯದಿಪ್ಪುದು
ಐಕ್ಯನಾದಲ್ಲಿ ಸುಗಂಧದ ಸುಳುಹಿನಂತೆ
ಮಳುಕಿನ ರಾಜತೆಯಂತೆ, ಶಕ್ತಿಯ ಅಪ್ಪುವಿನಂತೆ
ಅಘೋರಣಿಯಲ್ಲಿ ಆವರಿಸಿ ತಿರುಗುವ ನಿಶ್ಚಯತನದಂತೆ
ಬಿಂಬದೊಳಗಣ ತರಂಗದ ವಿಸ್ತರದಂಗದಂತೆ
ಇಂತೀ ಷಟಸ್ಥಲಕ್ಕೆ ನಿರ್ವಾಹಕವಾಗಿ
ವಿಶ್ವಾಸದಿಂದ ಸಂಗನಬಸವಣ್ಣನ ಸಾಕ್ಷಿಯಾಗಿ
ಬ್ರಹ್ಮೇಶ್ವರಲಿಂಗವನರಿದವರಿಗಲ್ಲದೆ ಸಾಧ್ಯವಿಲ್ಲ.[೧೬]

---

೧೫. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೧೨
೧೬. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೧೩

ಭಕ್ತಂಗೆ ಮಾಹೇಶ್ವರಸ್ಥಲ, ಪ್ರಸಾದಿಗೆ ಭಕ್ತಸ್ಥಲ.
ಮಾಹೇಶ್ವರಂಗೆ ಪ್ರಾಣಲಿಂಗಿಸ್ಥಲ, ಶರಣಂಗೆ ಪ್ರಸಾದಿಸ್ಥಲ.
ಪ್ರಾಣಲಿಂಗಿಗೆ ಐಕ್ಯಸ್ಥಲ, ಐಕ್ಯಂಗೆ ಭಕ್ತನ ವಿಶ್ವಾಸವನರಿತು
ಮಾಹೇಶ್ವರನ ಪ್ರಸನ್ನತೆಯ ಕಂಡು
ಪ್ರಸಾದಿಯ ಪರಿಪೂರ್ಣತ್ವವನರಿದು
ಪ್ರಾಣಲಿಂಗಿಯ ಉಭಯವ ತಿಳಿದು ನಿಂದುದ ಕಂಡು,
ಇಂತೀ ಚತುಷ್ಟಯ ಭಾವ ಏಕವಾಗಿ
ಶರಣನ ಸನ್ಮತದಲ್ಲಿ ಅಡಗಿ, ಒಡಗೂಡಿದಲ್ಲಿ
ಐಕ್ಯಂಗೆ ಬೀಜನಾಮ ನಿರ್ಲೇಪ, ಇಂತೀ ಸ್ಥಲಭಾವ.
ಪಶುವಿನ ಪಿಸಿತದ ಕ್ಷೀರವ, ಶಿಶುವಿನ ಒಲವರದಿಂದ ತೆಗೆವಂತೆ
ಆ ಕ್ಷೀರದ ಘೃತವ, ನಾನಾ ಭೇದಂಗಳಿಂದ ವಿಭೇದಿಸಿ ಕಾಬಂತೆ
ಭಕ್ತಂಗೆ ವಿಶ್ವಾಸ, ಮಾಹೇಶ್ವರಂಗೆ ಫಲ, ಪ್ರಸಾದಿಗೆ ನಿಷ್ಠೆ,
ಪ್ರಾಣಲಿಂಗಿಗೆ ಮೂರ್ತಿಧ್ಯಾನ, ಶರಣಂಗೆ ನಿಬ್ಬೆರಗು,
ಐಕ್ಯಂಗೆ ಈ ಐದು ಲೇಪವಾದ ನಿರ್ನಾಮ.
ಇಂತೀ ಷಟಸ್ಥಲವ ನೆಮ್ಮಿ ಕಾಬುದು ಒಂದೆ ವಿಶ್ವಾಸ.
ಸಂಗನಬಸವಣ್ಣಪ್ರಿಯ ಬ್ರಹ್ಮೇಶ್ವರಲಿಂಗವನು
ಅರಿದವನಿಗಲ್ಲದೆ ಸಾಧ್ಯವಿಲ್ಲ ನೋಡಾ.[೧೭]

ಈ ವಚನದಲ್ಲಿ ಭಕ್ತನಾದವನು ಬೇರೆ ಬೇರೆ ಸ್ಥಲಗಳಲ್ಲಿ ತನ್ನ ಆಚರಣೆಗಳನ್ನು ಹೇಗೆ ಮಾಡಬೇಕೆಂಬುದನ್ನು ಹೇಳಲಾಗಿದೆ. ವೀರಶೈವದಲ್ಲಿ ಬರುವ ಷಟಸ್ಥಲಗಳು, ಭಕ್ತ, ಮಾಹೇಶ್ವರ, ಪ್ರಸಾದ, ಪ್ರಾಣೇಶ, ಶರಣ ಮತ್ತು ಐಕ್ಯ ಎಂಬ ಆರು ಸ್ಥಲಗಳು ಬರುತ್ತವೆ. ಶರಣನಾದವನು ಹಂತ ಹಂತವಾಗಿ ಭಕ್ತಿಯ ಒಂದೊಂದು ಮೆಟ್ಟಿಲನ್ನು ಏರುತ್ತಾ ಪರಮಾತ್ಮನಲ್ಲಿ ಐಕ್ಯಹೊಂದುತ್ತಾನೆ. ಇವು ಭಕ್ತನ ಹಂತ ಹಂತದ ಬೆಳವಣಿಗೆ ಬೊಮ್ಮಯ್ಯ ಷಟಸ್ಥಲಗಳಲ್ಲಿ ಭಕ್ತ ಮಾಡುವ ವಿವಿಧ ಕ್ರಿಯಾಚಾರಗಳನ್ನು ಹೇಳಿದ್ದಾನೆ. ಭಕ್ತನಾದವನಿಗೆ ಮೊದಲು ಮೂರು ಮಲಗಳು ನಾಶಹೊಂದಬೇಕು. ಮನುಷ್ಯನ ಭಕ್ತಿ ಮಾರ್ಗಕ್ಕೆ ಅಡೆತಡೆಯನ್ನುಂಟು ಮಾಡುವ ಮಲಗಳೇ ತ್ರಿವಿಧ ಮಲಗಳು. ಆನವಮಲ, ಮಾಯಾಮಲ, ಕಾರ್ಮಿಕಮಲಗಳು ಭಕ್ತಿಯಲ್ಲಿ ತೊಡಗಿದ ಶರಣನ ಮನಸ್ಸನ್ನು ಸಂಚಲನಗೊಳಿಸುತ್ತವೆ. ಮಲತ್ರಯಗಳನ್ನು ಮೀರಿದರೆ ಮಾತ್ರ ಅವನ ಮನಸ್ಸು, ನಿರಾಕಾರ, ನಿರ್ಗುನ, ಪರಂಜ್ಯೋತಿಯಲ್ಲಿ ಸ್ಥಿರಗೊಳ್ಳುತ್ತದೆ. ಮಹೇಶ್ವರ ಸ್ಥಲದಲ್ಲಿಯು ಇನ್ನುಗಟ್ಟಿಕೊಂಡಿರುತ್ತದೆ. ಪರಮಾತ್ಮನನ್ನು ಕುರಿತು ಇತ ಅಂದರೆ ಮಾಹೇಶ್ವರ ಸ್ಥಲದವನು ಜಪ, ನೇಮ ಕರ್ಮಗಳನ್ನು ಮಾಡಬೇಕು. ಆದರೆ ತಾನು ಮಾಡುವ ಕರ್ಮಗಳ ಬಗ್ಗೆ

೧೭. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೧೩

ಅವನಲ್ಲಿ ಮೋಹವಿರಬಾರದು, ಕರ್ಮಗಳನ್ನು ಮಾಡಿಯೂ ಮಾಡಿದಂತಿರಬೇಕು. ಕರ್ಮದ ಹಂಗು ಹಿಂಗಿದಾಗ ಮಾಹೇಶ್ವರ ಸ್ಥಲದ ಭಕ್ತನು ಕರ್ಮಮುಕ್ತನಾಗುತ್ತಾನೆ. ಪ್ರಸಾದಿಯು ಆಯುತ, ಸ್ವಾಯತದಲ್ಲಿ ಸನ್ನದ್ಧನಾಗಿರಬೇಕು. ತಾನು ಸೇವಿಸುವ ಮತ್ತು ಭುಂಜಿಸುವ ಪಡಿಪದಾರ್ಥಗಳೆಲ್ಲವು ಶಿವನ ಪ್ರಸಾದವೆಂದು ಭಾವಿಸಬೇಕು. ಸುಖದುಃಖಗಳನ್ನು ಸಮತ್ವದಿಂದ ಕಾಣಬೇಕು. ಪ್ರಾಣಲಿಂಗಿಯಾದವ ಬಂದು ಸೋಂಕುವ ಸುಗುನ ದುರ್ಗುಣಗಳೆಲ್ಲ ತನಗೆ ಸಂಬಂಧಪಟ್ಟವು ಎಂದು ಭಾವಿಸಬಾರದು. ಸುಗುಣಕ್ಕೂ ದುರ್ಗುಣಕ್ಕೂ ಪ್ರಾಣಲಿಂಗೆ ಭಾಜನವಲ್ಲ. ಶರಣ ಸ್ಥಲದ ಶಿವಶರಣನು ಸ್ಥಿತಪ್ರಜ್ಞನಾಗಿರಬೇಕು. ಸ್ತುತಿ ನಿಂದೆಗಳಿಗೆ ಒಳಗಾಗಬಾರದು. ರಾಗ, ಮೋಹ, ಮಮಕಾರಗಳಿಂದ ದೂರವಿರಬೇಕು. ಮನುಷ್ಯನ ಸುತ್ತಮುತ್ತ ಹರಿದಾಡುವ ಇಂದ್ರಿಯಗಳನ್ನು ಭಾವಗಳನ್ನು ಸುಖಗಳನ್ನು ಮೀರಿನಿಲ್ಲಬೇಕು. ರಾಗವಿರಾಗಕ್ಕೆ ಮನಸ್ಸನ್ನು ಒಳಪಡಿಸದೆ ಮದಗಜದಂತೆ ಅವುಗಳನ್ನೆಲ್ಲಾ ತುಳಿದು ಹಾಕಬೇಕು. ಐಕ್ಯಸ್ಥಲದ ಶರಣನ ಸ್ಥಿತಿಯು ಅದ್ಭುತವಾಗಿದೆ. ಇದು ಒಂದರ್ಥದಲ್ಲಿ ಜೀವಾತ್ಮ ಪರಮಾತ್ಮರ ಅನುಸಂದಾನ ಪರಮಾತ್ಮನನ್ನು ಅರಿತು ಅನುಭವಿಸುವ ಪರಿ ಇದು. ಈ ಸ್ಥಲದ ಶರಣ ಹೇಗಿರುತ್ತಾನೆಂದರೆ ನೀರಿನಲ್ಲಿದ್ದು ನೀರಮೇಲಿನ ಗುಳ್ಳೆಯಂತೆ ತೋರುತ್ತಾನೆ. ಇದ್ದು ಇಲ್ಲದಂತಹ ಸ್ಥಿತಿ ಇದು ಬೊಮ್ಮಯ್ಯ ಈ ಸ್ಥಿತಿಯನ್ನು ಶುಕ್ತಿಯ ಅಪ್ಪುವಿನಂತೆ (ವಾಯು) ಸುಗಂಧದ ಸುಳುಹಿನಂತೆ, ಬಿಂಬದೊಳಗಿನ ತರಂಗದಂತೆ ಎಂದು ತಿಳಿಸುತ್ತಾನೆ. ಈ ಸ್ಥಿತಿಯು ಸಂಗನ ಬಸವಣ್ಣನಂಥಹವರಿಗೆ ಮಾತ್ರ ಸಾಧ್ಯವೆಂದು ಹೇಳುತ್ತಾನೆ.

ವೀರಶೈವ ಸಾಹಿತ್ಯ ಮತ್ತು ಸಿದ್ಧಾಂತದ ಬಗ್ಗೆ ಬೊಮ್ಮಯ್ಯನಿಗೆ ಸಂಪೂರ್ಣವಾದ ತಿಳುವಳಿಕೆ ಇತ್ತು. ಅವನ ಈ ವಚನದಲ್ಲಿ ಬರುವ ಷಟಸ್ಥಲಗಳ ವಿವರ ಒಂದೇ ಸಾಕು. ಅವನಲ್ಲಿರುವ ಸಮಗ್ರಜ್ಞಾನದ ಅರಿವು ನಮಗುಂಟಾಗುತ್ತದೆ. ಬೊಮ್ಮಯ್ಯನು ಸಾಮಾನ್ಯಭಕ್ತನಲ್ಲಿ ಶಿವಶರಣರ ವನಚಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಅವುಗಳಲ್ಲಿಯ ಸೈದ್ಧಾಂತಿಕ ವಿಷಯುಗಳನ್ನು ಮನದಟ್ಟು ಮಾಡಿಕೊಂಡು ತನ್ನ ವಚನಗಳಲ್ಲಿ ಅವುಗಳನ್ನು ಬಳಸಿಕೊಂಡಿದ್ದಾನೆ. ವೀರಶೈವ ಸಾಹಿತ್ಯ ಸಿದ್ಧಾಂತದ ಬಗ್ಗೆ ಬೊಮ್ಮಯ್ಯನಿಗೆ ಒಂದು ವೇಳೆ ಗೊತ್ತಿರದಿದ್ದರೆ ಷಟಸ್ಥಲವನ್ನು ವಿವರಿಸುವಂತಹ ವನಚಗಳನ್ನು ಬರೆಯುವುದು ಅವನಿಂದ ಆಗುತ್ತಿರಲಿಲ್ಲ. ಬೊಮ್ಮಯ್ಯ ಬರಿ ವಚನಗಳನ್ನು ಮಾತ್ರ ಬರೆಯಲಿಲ್ಲ. ಆ ವಚನಗಳಲ್ಲಿ ಸಾಹಿತ್ಯಿಕ ಅಂಶಗಳನ್ನು ತುಂಬುತ್ತಾನೆ. ಐಕ್ಯಸ್ಥಲದ ಶರಣ ಹೇಗಿರುತ್ತಾನೆಂಬುದಕ್ಕೆ 'ಸುಗಂಧದ ಸುಳುಹಿನಂತೆ' ಎಂಬ ಬಿಂಬದೊಳಗಣ ತರಂಗದ ವಿಸ್ತರಂಗದಂತೆ ಎಂಬ ಉಪಮೆಯನ್ನು ಕೊಡುತ್ತಾನೆ. ಷಟಸ್ಥಲವು ವೀರಶೈವರಲ್ಲಿ ಮುಕ್ತಿಯ ಸೋಪಾನದಂತಿದೆ. ಬೊಮ್ಮಯ್ಯನ ಈ ವಚನ ಷಟಸ್ಥಲ ಹೇಳುವುದರ ಜೊತೆಗೆ ಅವನು ತುಂಬಿಕೊಂಡ ವೀರಶೈವ ಸಿದ್ಧಾಂತದ ಅರಿವನ್ನು ಅನಾವರಣಗೊಳಿಸುತ್ತದೆ.

ಬೊಮ್ಮಯ್ಯ ಸಮಾಜದ ಮಧ್ಯದಲ್ಲಿದ್ದು ಜನರ ದೌರ್ಬಲ್ಯಗಳನ್ನು ಅದರ ಸಂದುಚಿತ ಭಾವಗಳನ್ನು ತಿಳಿದುಕೊಂಡವನಾಗಿದ್ದಾನೆ. ಭಕ್ತಿಯ ಹೆಸರಿನಿಂದ ಆಚರಿಸುವ ಡಂಬಾಚಾರವನ್ನು ಆತ ಟೀಕಿಸುತ್ತಾನೆ. ಭಕ್ತಿಯು ಬಲು ಕಠಿಣವಾದುದು ಅದನ್ನು ಕುರಿತು ಬಸವಣ್ಣ ಹೀಗೆ ಹೇಳುತ್ತಾನೆ. "ಭಕ್ತಿಯೆಂಬುದು ಕರಗಸದಂತೆ ಅದು ಹೋಗುತ್ತಲೂ ಕೊರೆಯುತ್ತದೆ, ಬರುತ್ತಲೂ ಕೊರೆಯುತ್ತದೆ". ಇಂತಹ ಕಠಿಣವಾದ ಭಕ್ತಿಯನ್ನು ಆಚರಿಸುವ ಭಕ್ತರನ್ನು ಗೌರವದಿಂದ ಕಾಣಬೇಕು, ಭಕ್ತನಿಗೆ ವಂದಿಸಿನಿಂದಿಸಿದರೆ ಅಂತಹವರ ವಿಶ್ವಾಸ ಜಾರುತ್ತದೆ ಎಂದು ಬೊಮ್ಮಯ್ಯನು ಹೇಳುತ್ತಾನೆ ಪ್ರಸ್ತುತ ವಚನದಲ್ಲಿ.

ಭಕ್ತಂಗೆ ವಂದಿಸಿ ನಿಂದಿಸಿದಲ್ಲಿಯೆ ವಿಶ್ವಾಸ ಜಾರಿತ್ತು
ವಿರಕ್ತಂಗೆ ಸುಗುಣ ದುರ್ಗುಣವ ಸಂಪಾದಿಸಿದಲ್ಲಿಯೆ
ವಿವೇಕ ಹೋಯಿತ್ತಯ್ಯಾ
ಕಣ್ಣಿನಲ್ಲಿ ಮುಳ್ಳುಮುರಿದಂತೆ
ಚುಚ್ಚಿತಗೆಯಬಾರದು, ವೇದನೆ ಬಿಡದು
ವರ್ತನೆಗೆ ಭಂಗ, ಸತ್ಯಕ್ಕೆ ದೂರ, ಈ ಸಮಯದ ಸಂಗ
ಎನ್ನಗುಣದ ಕಷ್ಟವನಳಿವುದಕ್ಕೆ
ಸಂಗನಬಸವಣ್ಣನಿಂದ ಬ್ರಹ್ಮೇಶ್ವರಲಿಂಗವ ನರಿದವರಿಗಲ್ಲದಾಗದು.[೧೮]

ಭಕ್ತನಿಗೆ ವಂದಿಸಿ ಆತನನ್ನು ನಿಂದಿಸಿದರೆ ಅಂತಹ ವ್ಯಕ್ತಿಗಳಲ್ಲಿ ವಿಶ್ವಾಸ ಉಳಿಯದು. ಹೀಗೆ ಹೊರಗೊಂದು ಒಳಗೊಂದು ಬಗೆಯುವ ಇಬ್ಬಗೆಯ ಕುಟಿಲರಿಗೆ ಬಂದುಗಳು, ಗೆಳೆಯರು ಯಾರು ಇರಲಾರರು. ವಿರಕ್ತನಾದವನು ಎಲ್ಲವನ್ನು ತ್ಯಜಿಸಬೇಕು, ದುರ್ಗುಣವಿರಲಿ ಸುಗುಣವಿರಲಿ ಯಾವುವು ಅವನ ಹತ್ತಿರ ಸುಳಿಯಲಾರದು. ಒಂದು ವೇಳೆ ವಿರಕ್ತನು ಈ ದುರ್ಗುಣ, ಸುಗುಣಗಳನ್ನು ಸಂಪಾದಿಸಿದರೆ ಅವನ ಸ್ಥಿತಿಯು ಅಸಹನಿಯವಾಗುತ್ತದೆ. ಬೊಮ್ಮಯ್ಯ ಒಂದು ಸೊಗಸಾದ ರೂಪಕದ ಮೂಲಕ ಇದನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಾನೆ. ವೀರಕ್ತ ದುರ್ಗುಣ, ಸುಗುಣ ಸಂಪಾದಿಸಿದ ಭಾವ ಹೊಂದಿದ್ದರೆ ಅವನ ಸ್ಥಿತಿಯು ಕಣ್ಣಿನಲ್ಲಿ ಮುಳ್ಳು ಮುರಿದಂತೆ. ಎಂತಹ ಸುಂದರವಾದ ಪ್ರತಿಮೆ. ಕಣ್ಣು ಅತ್ಯಂತ ಸೂಕ್ಷ್ಮವಾದ ದೇಹದ ಅಂಗ, ಆ ಕಣ್ಣಿನಲ್ಲಿ ಮುಳ್ಳು ಮುರಿದರೆ ಅದನ್ನು ತಗೆಯುವುದು ಹೇಗೆ. ಮೊದಲೆ ಮುಳ್ಳು ಕಣ್ಣಲ್ಲಿ ಮುರಿದಿದೆ. ಇನ್ನೂ ಅದನ್ನು ತಗೆಯಬೇಕಾದರೆ ಅದಕ್ಕೆ ಮತ್ತೊಂದು ಮುಳ್ಳಿನಿಂದ ಚುಚ್ಚಬೇಕು. ಆಗ ಉಂಟಾಗುವ ವೇದನೆ ಹೇಳತೀರದು. ಎಲ್ಲವನ್ನು ಬೇಡವೆಂದು ತ್ಯಾಗ ಮಾಡಿದ ವೀರಕ್ತ ಸುಗುಣ ದುರ್ಗುಣಗಳನ್ನು ಮತ್ತೆ ಸಂಪಾದಿಸಿಕೊಂಡರೆ ಅದು ಕಣ್ಣಲ್ಲಿ ಮುಳ್ಳು ಮುರಿದಂತೆ ಸರಿ. ಬ್ರಹ್ಮೇಶ್ವರ ಲಿಂಗವನ್ನು ಅರಿತವರು ಬದುಕುವ ರೀತಿಯನ್ನು ಅನುಭಾವದ ನೆಲೆಯನ್ನು ತಿಳಿದುಕೊಂಡವರೆಂದು ಬೊಮ್ಮಯ್ಯ ಹೇಳುತ್ತಾನೆ.

---

೧೮. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೧೮

ಬೊಮ್ಮಯ್ಯನು ತನ್ನ ಮತ್ತೊಂದು ವಚನದಲ್ಲಿ ವಿಶ್ವಾಸ, ನಿಸ್ವಾರ್ಥ, ನಿರಂಹಭಾವದಿಂದ ಪರಮಾತ್ಮನನ್ನು ಒಲಿಸಿಕೊಳ್ಳುವ ಕುರಿತು ವಿವರವಾಗಿ ಹೇಳಿದ್ದಾನೆ.

ವಿಶ್ವಾಸವಿಲ್ಲದವಂಗೆ ಭಕ್ತಸ್ಥಲವಿಲ್ಲ, ಗುರು ಭಕ್ತನಲ
ವಿಶ್ವಾಸವಿಲ್ಲದವಂಗೆ ಮಾಹೇಶ್ವರಸ್ಥಲವಿಲ್ಲ, ಲಿಂಗಭಕ್ತನಲ್ಲ
ವಿಶ್ವಾಸವಿಲ್ಲದವಂಗೆ ಪ್ರಸಾದಿಸ್ಥಲವಿಲ್ಲ, ಜಂಗಮ ಭಕ್ತನಲ್ಲ
ವಿಶ್ವಾಸವಿಲ್ಲದವಂಗೆ ಪ್ರಾಣಲಿಂಗಸ್ಥಲವಿಲ್ಲ, ಸರ್ವವ್ಯವಾದಿನಿಯಲ್ಲ
ವಿಶ್ವಾಸವಿಲ್ಲದವಂಗೆ ಶರಣಸ್ಥಲವಿಲ್ಲ, ಆರೂಢಬಾವಿಯಲ್ಲ
ವಿಶ್ವಾಸವಿಲ್ಲದವಂಗೆ ಐಕ್ಯಸ್ಥಲವಿಲ್ಲ, ಸರ್ವಲೇಪನಲ್ಲ
ಇಂತೀ ಷಟಸ್ಥಲಸಂಬಂಧ
ಗುರುವಿನಲ್ಲಿ ಶ್ರದ್ಧೆ, ಲಿಂಗದಲ್ಲಿ ಅಭಿನ್ನನಲ್ಲದೆ
ಜಂಗಮದಲ್ಲಿ ಮನೋಮೂರ್ತಿಯಾಗಿಪ್ಪುದೆ
ಸರ್ವಾಂಗಲಿಂಗಸಂಬಂಧದ ಇರವು
ಸಂಗನಬಸವಣ್ಣಪ್ರಿಯ ಬ್ರಹ್ಮೇಶ್ವರಲಿಂಗದಲ್ಲಿ.[೧೯]

ಬೊಮ್ಮಯ್ಯನು ಮಲತ್ರಯಗಳನ್ನು ನೀಗಬೇಕೆಂದು ಹೇಳುತ್ತಾನೆ. ಅವನ ಅನೇಕ ವಚನಗಳಲ್ಲಿ ಈ ಮಲತ್ರಯಗಳು ಮತ್ತೇ ಮತ್ತೇ ಕಾಣಿಸಿಕೊಳ್ಳುತ್ತವೆ. ಈ ಮಲಗಳನ್ನು ಯೋಗಮುಖಾಂತರ ನಿರ್ನಾಮ ಮಾಡುವ ಬಗೆಯನ್ನು ಕೂಡಾ ಆತ ಈ ವಚನದಲ್ಲಿ ತಿಳಿಸಿಕೊಡುತ್ತಾನೆ.

ಸಂಚಿತವನರಿವುದು ಕರ್ಮಯೋಗ
ಆಗಾಮಿಯನರಿವುದು ಆತ್ಮಯೋಗ
ಪ್ರಾರಬ್ಧವನರಿವುದು ಪರಮಯೋಗ
ಇಂತಿ ತ್ರಿವಿಧಿಯೋಗಂಗಳಲ್ಲಿ ತಿಳಿದು
ಯೋಗ ನಿಯೋಗವೆಂಬುದ ಕಂಡು
ತನ್ನಯ ಆತ್ಮನ ಸ್ಪರ್ಶಗಾಥಂಗಳ ಘಟದಲ್ಲಿ
ಸ್ವಸ್ಥಾನದಲ್ಲಿಪ್ಪುದ, ಇರದೆಂಬುದ ಲಕ್ಷಿಸಿಕೊಂಡು
ಸರ್ವವ್ಯವಧಾನಂಗಳಲ್ಲಿ ಸಾವಧಾನವನಿರುವುದು
ಪ್ರಾಣಲಿಂಗಿಯ ಕೂಟ
ಈ ಗುಣ ಸಂಗನಬಸವಣ್ಣನ ಸಂಯೋಗ
ಬ್ರಹ್ಮೇಶ್ವರಲಿಂಗದ ಕೂಟ.[೨೦]

---

೧೯. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೧೩
೨೦. ಅದೇ

ಮನುಷ್ಯ ಮಾಡುವ ಸಂಚಿತ ಕರ್ಮಗಳು, ಕರ್ಮಯೋಗ ಬಂದು ಹೋಗುವ ವರ್ತಮಾನದಲ್ಲಿ ಮಾಡುವ ಕ್ರಿಯಾಚರಣೆಗಳು ಆಗಾಮಿನರಿಯುವ ಆತ್ಮಯೋಗ. ನಾವು ಮಾಡುವುದರಿಂದ ಪಡೆಯುವ ಪಾಪಪುಣ್ಯಾದಿಗಳ ಪ್ರಾರಬ್ಧನರಿಯುವುದು ಪರಮಯೋಗ. ಹೀಗೆ ಈ ತ್ರಿವಿದ ಯೋಗಗಳನ್ನು ಅರಿತುಕೊಂಡು ಸರ್ವ ವ್ಯವಹಾರಗಳಲ್ಲಿ ಸಾವಧಾನವನ್ನಿರಿತು ಪ್ರಾಣವು ಪರಮಾತ್ಮನಲ್ಲಿ ಕೂಡವ ರೀತಿಯನ್ನು ಭಕ್ತನಾದವ ತಿಳಿದುಕೊಳ್ಳಬೇಕು. ಇದು ಶ್ರೇಷ್ಠ ಶ್ರೇಷ್ಠ ಶಿವಶರಣರಿಗೆ ಮಾತ್ರ ಸಾಧ್ಯ.

ಮನುಷ್ಯ ತನ್ನ ಮೂಲ ಗುಣಗಳನ್ನು ಹುಟ್ಟು ಸ್ವಭಾವಗಳನ್ನು ಬಿಡದೆ ಡಂಬಾಚಾರ ಮಾಡುತ್ತ ಶರಣನ ವೇಶತೊಟ್ಟು ಅಲ್ಲದ ಕಾರ್ಯಗಳನ್ನು ಮಾಡಿದರೆ ಪರಮಾತ್ಮ ಅಂತವರನ್ನು ಮೆಚ್ಚಲಾರ. ಮನುಷ್ಯನಲ್ಲಿರುವ ಮೂಲ ದುರ್ಭಾವಗಳು, ದುರ್ಗುಣಗಳು ನಾಶವಾಗಬೇಕು. ಅವುಗಳನ್ನು ವ್ಯಕ್ತಿ ತನ್ನ ಬಳಿಗೆ ಇಟ್ಟುಕೊಂಡು ತೋರಿಕೆಗೆ ಶರಣನಾದರೆ ಅಂತವರನ್ನು ಶರಣರು ಮೆಚ್ಚಲಾರರು. ಈ ಸಂಗತಿಯನ್ನು ಬೊಮ್ಮಯ್ಯನು ತನ್ನ ವಚನದಲ್ಲಿ ಸೊಗಸಾಗಿ ತಿಳಿಸಿದ್ದಾನೆ.

ಹಾಲನಟ್ಟಿ ಹಾವ ಸಲಹಿದಲ್ಲಿ
ಅದು ತನ್ನಯ ಉಚಿತಕ್ಕೆ ಹಾಳಾಹಳವ ಬಿಟ್ಟಿತ್ತೆ?
ಕುಕ್ಕುಟನ ಮಾಳಿಗೆಯಲ್ಲಿ ಕೂಡಿ, ಪ್ರತಿಗೂಡಿನಲ್ಲಿ ಕೂಡಲಿಕ್ಕೆ
ತನ್ನ ತತ್ಕಾಲಕ್ಕೆ ಕೂಗುವುದ ಬಿಟ್ಟಿತ್ತೆ?
ಇಂತೀ ವರ್ತನದಂತೆ ಭಕ್ತಿಡಾಳಕರ ದರ್ಶನ
ಚೋರಕರ, ವಾಚಾರಚನೆಗರ ಬರಿಮಾತಿನ ಪೊಸರ
ಈಶ್ವರ ಭಕ್ತರ ಪರಮೇಶ್ವರ ರೂಪು ಎನಲಾರೆ
ಮತ್ತೆ ನೀತಿಯ ವಿಶ್ವಾಸ ಬಿಡಲಾರೆ
ಈ ಭಕ್ತಿಯೆಂಬ ಪಾಶವ ಹರಿವುದಕ್ಕೆ
ನಿಹಿತವು ತೋರಯ್ಯಾ ಸಂಗನ ಬಸವಣ್ಣಾ
ಬ್ರಹ್ಮೇಶ್ವರಲಿಂಗವನರಿವುದಕ್ಕೆ ಕುರುಹ ಹೇಳಣ್ಣಾ.[೨೧]

ಹಾವು ವಿಷಹಾರಿ ಪ್ರಾಣಿ. ಅದಕ್ಕೆ ಎಷ್ಟು ಹಾಲು ಕುಡಿಸಿದರು ಅದು ಹಾಲಾಹಲವನ್ನೇ ಕೊಡುತ್ತದೆ ಹೊರತು ಅಮೃತವನ್ನು ಕೊಡಲಾರದು. ನಾವು ಹಾಲುನಿಸಿದ ಮಾತ್ರಕ್ಕೆ ಹಾವು ವಿಷ ಕಕ್ಕುವುದನ್ನು ಬೀಡುವುದಿಲ್ಲ. ವಿಷ ಬೀಡುವುದು ಅದರ ಮೂಲಗುಣ. ಅದರಂತೆ ಮನುಷ್ಯನು ದುಷ್ಟ ಗುಣಗಳನ್ನು ಒಳಗೊಂಡು ತೋರಿಕೆಗೆ ಶರಣನಾದರೆ ಅಂಥವರನ್ನು ಯಾರು ಮೆಚ್ಚುವುದಿಲ್ಲ. ಕೂಗುವುದು ಕೋಳಿಯ ಗುಣ ಅದನ್ನು ಮಾಳಿಗೆಯಲ್ಲಿ ಕೂಡಿ ಹಾಕಿದರೆ ಸುರ್ಯೋದಯವಾದ ತಕ್ಷಣ ಅದು ಕೂಗದೆ ಇದ್ದಿತೆ.

---

೨೧. ಸಂಕೀರ್ಣ ವಚನ ಸಂಪುಟ ೩ : ಡಾ. ಬಿ. ಆರ್. ಹಿರೇಮಠ : ಪು.ಸಂ. ೧೧೩

ಅದರಂತೆ ಹೀನಗುಣಗಳು ಮನುಷ್ಯನಲ್ಲಿ ತುಂಬಿಕೊಂಡಾಗ ಅವುಗಳಿಗೆ ಭಕ್ತಿಯ ಲೇಪವನ್ನು, ಸಜ್ಜನಿಕೆಯ ನಾಟಕವನ್ನು ಮಾಡಿದರೆ ಆ ಮೂಲ ಸ್ವಭಾವವು ಬದಲಾಗುವುದಿಲ್ಲ. ಬೊಮ್ಮಯ್ಯನು ಮನುಷ್ಯನ ಸಹಜ ಮೂಲ ಪ್ರವೃತ್ತಿಗಳಲ್ಲಿ ಬದಲಾವಣೆಯಾಗಬೇಕು. ಸದ್ಭಕ್ತಿ ಸದಾಚಾರ ಅವನಲ್ಲಿ ನೆಲೆಗೊಳ್ಳಬೇಕು. ಮನುಷ್ಯನ ಸಂಚಿತ, ಆಗಾಮಿ, ಪಾರಬ್ಧ ಕರ್ಮಗಳು ನಾಶವಾಗದು. ಪರಮಾತ್ಮನೊಬ್ಬನೆ ಪರಮಸತ್ಯನೆಂದು ಅವನನ್ನು ನಂಬಿ ಜೀವನ ಸಾಗಿಸಬೇಕೆಂದು ಬೊಮ್ಮಯ್ಯನು ಹೇಳುತ್ತಾನೆ. ಹೀಗೆ ಬೊಮ್ಮಯ್ಯನ ವಚನಗಳು ಅನುಭಾವದ ನೆಲೆಯಲ್ಲಿ ಮೂಡಿಬಂದಿವೆ.

ಅಧ್ಯಾಯ - ೫

ಕನ್ನಡ ಸಾಹಿತ್ಯದಲ್ಲಿ ಬಾಹೂರ ಬೊಮ್ಮಯ್ಯ

ಅಧ್ಯಾಯ - ೫

ಕನ್ನಡ ಸಾಹಿತ್ಯದಲ್ಲಿ ಬಾಹೂರ ಬೊಮ್ಮಯ್ಯ

ಕನ್ನಡ ಸಾಹಿತ್ಯದಲ್ಲಿ ೧೨ನೇ ಶತಮಾನ ಒಂದು ಅವಿಸ್ಮರಣೀಯ ಯುವಾಗಿದೆ. ಒಂದೇ ತತ್ವ ಒಂದೇ ಸಿದ್ಧಾಂತ. ಒಂದೇ ಜೀವನ ವಿಧಾನ. ಒಂದೇ ರೀತಿಯ ಚಿಂತನೆ ಮಾಡಲು ಸಾವಿರಾರು ಜನರು ಒಂದೆಡೆ ಸೇರಿದ್ದು ಇತಿಹಾಸದಲ್ಲಿ ಅಪರೂಪ. ಅಂದಿನ ಕಾಲದಲ್ಲಿ ಬಸವಣ್ಣನ ನೇತೃತ್ವದಲ್ಲಿ ಕಲ್ಯಾಣದಲ್ಲಿ ನಡೆದ ಚಟುವಟಿಕೆಗಳು ಸುತ್ತಲಿನ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರಿದವು. ಈ ಪ್ರಭಾವ ನೂರಾರು ಮೈಲುಗಳವರೆಗೆ ಹಬ್ಬಿದ್ದು ಕಂಡುಬರುತ್ತದೆ. ಇಂತಹ ಪ್ರಭಾವಕ್ಕೆ ಒಳಗಾದವರು ಬಿಲ್ಲೇಶ ಬೊಮ್ಮಯ್ಯ, ಕೊವುರ ಬೊಮ್ಮಯ್ಯ, ಬಾಲಬೊಮ್ಮಯ್ಯ, ಬಾಹೂರ ಬೊಮ್ಮಯ್ಯ ಪ್ರಮುಖರಾಗಿದ್ದಾರೆ.

ವಚನಸಾಹಿತ್ಯದಲ್ಲಿ ಲಿಂಗಾಂಗ ಸಾಮರಸ್ಯ ಭಾವದ ವಚನಗಳಿಗೆ ಕೊರತೆಯಿಲ್ಲ, ಬೊಮ್ಮಯ್ಯನ ವಚನಗಳಲ್ಲಿ ಗುರು-ಲಿಂಗ-ಜಂಗಮ ಈ ಮೂರನ್ನು ತ್ರಿವಿಧ ನಿಕ್ಷೇಪವೆಂದು ಕರೆಯುವದಲ್ಲದೆ. ಈ ಮೂರನ್ನು ಮೊದಲು ಗುರು ಅರಿತು ಶಿಷ್ಯನಿಗೆ ಅರುಹಿಸಿಕೊಡಬೇಕು. ಆಗ ಗುರು ಶಿಷ್ಯನಾಗುವ ಶಿಷ್ಯ ಗುರುವಾಗುವನು. ಹೀಗೆ 'ಗುರುಲಿಂಗ'ವಾದಂತೆ ಜಂಗಮಲಿಂಗದ ವಿವರಗಳನ್ನು ತಿಳಿಸಿದ್ದಾನೆ.

ಬೊಮ್ಮಯ್ಯನು ತನ್ನ ವಚನಗಳಲ್ಲಿ ಷಟ್ಸಲ ಸಿದ್ಧಾಂತವೇ ಲಿಂಗಾಯತ ತತ್ವಜ್ಞಾನದ ಜೀವರೂಪ. 'ಷಟಸ್ಥಳವೇ ಲಿಂಗ'ವೆಂದು ಅದರ ಮಹತ್ವವನ್ನು ಕೊಂಡಾಡಿದ್ದಾನೆ.

ಭೀಮಕವಿಯ ಬಸವಪುರಾಣ - (ಸಂಧಿ ೨೧) :

ಚಾರು ಚರಿತಂ ಮತ್ತೆಯುಂ ಬಾ
ಹೂರ ಬೊಮ್ಮಯ್ಯನೆಂಬ ಭಕ್ತನು
ದಾರ ಕೀರ್ತಿ ನಿರೂಢ ಗಾಢ ಮಹತ್ವ ತತ್ವಾರ್ಥಿ
ವೀರಶೈವಾಚಾರ ಸುವ್ರತಕಾರಿ
ಸೂರಿಜಗೋಪಕಾರಿ ವಿ
ಕಾರ ದೂರನು ಸಾರ ಭಕ್ತಿ ಶರೀರದುರಿತಾರಿ.

ಇಲಿದು ಜಂಗಮಲಿಂಗ ಗುರುಪದ
ಜಲಜ ಪರಿಚಯ ಕ್ರಿಯಾ ಸಂ
ಕಲಿತ ಭಕ್ತಿಯೊಳಲ ಸದಾಗಳು ಮಾಡಬೇಕೆಂದು
ಹಲವು ಹುದೋಟಗನರ್ಜಿಸಿ
ಬೆಳಗು ಜಾವಿನಲೆದ್ದು ಕುಕ್ಕುಟ
ನುಲಿಯ ಲೊಡನಂತೆಯ್ದೆ ಕುಯಿತಂದು

ಕುಸಮಮಾಲೆಗಳಂ ರಚಿಸಿ ತಂ
ದೊಸೆದು ಭಕ್ತರಿಗಿತ್ತು ತಾ ನಿ
ತ್ಯಶನ ಕಾಯಕ ಲಬ್ದಿಯಲಿ ಜಂಗಮಕೆ ಮಾಡುತ್ತ
ಪೆಸರು ಪಸರಿಸಿ ಕೀರ್ತಿಸುತ್ತಿದೆ
ವಸುಧೆಯೊಳು ಮತ್ತೊಂದು ವಾದದೊ
ಳಸಮಭರ್ಗನೆ ಕರ್ತನೆಂಬುದದಂ ಪ್ರತಿಷ್ಠಿಸಿದ ।

ಭೀಮಕವಿಯ ಬಸವಪುರಾಣದ ಈ ಮೇಲಿನ ಪದ್ಯಗಳಿಂದ ಬಾಹೂರ ಬೊಮ್ಮಯ್ಯನು ನಿತ್ಯವು ಎದ್ದು ಹೂಗಳನ್ನು ತಿರಿದುಕೊಂಡು ಭಕ್ತರಿಗೆ ಹೂಮಾಲೆ ಮಾಡಿಕೊಡುತ್ತಿದ್ದ. ಇದರಿಂದ ಬಾಹೂರ ಬೊಮ್ಮಯ್ಯನು ಹೂವಿನ ವೃತ್ತಿ ಮಾಡಿಕೊಂಡಿದ್ದ ಒಬ್ಬ ಶಿವಭಕ್ತನೆಂಬುದು ನಮಗೆ ಈ ಮೇಲಿನ ಪದ್ಯಗಳಿಂದ ತಿಳಿದುಬರುತ್ತದೆ.

ಹರಿಹರನ – ಬಾಹೂರ ಬೊಮ್ಮಯ್ಯನ ರಗಳೆ :

ಹರಿಹರನು ಬಾಹೂರ ಬೊಮ್ಮಯ್ಯನ ಕುರಿತು ರಗಳೆಗಳನ್ನು ನಾಲ್ಕು ಸ್ಥಲಗಳಲ್ಲಿ ಬರೆದಿದ್ದಾನೆ. ಹರಿಹರನು ಬೊಮ್ಮಯ್ಯನ ಶಿವಭಕ್ತಿ, ಲಿಂಗಪೂಜೆ, ಬೊಮ್ಮಯ್ಯನು ತೋರಿದ ಪವಾಡಗಳು ಮತ್ತು ಅವನ ಕೀರ್ತಿಯ ಕುರಿತು ಬರೆದಿದ್ದಾನೆ.

ಸಾಹಸನಿಧಿಯೆನಿಪ ವೃಷಭ
ವಾಹನ ಫಣಿರಾಜಕಂಕಣಂ ರಾಜಧರಂ
ಬಾಹೂರ ಬೊಮ್ಮತಂದೆಯ
ನಾಹಾ ಮೆರೆದಂ ಪುರಾರಿ ಹಂಪೆಯ ರಾಯಂ ।

ಶ್ರೀಮೇರುವಿಂಗೆ ದಕ್ಷಿಣದಿಶಾಭಾಗದೊಳ್
ಭೂವಿಗೆ ವಿಚಿತ್ರವೆಂದೆನಿಪುದತಿರಾಗದೊಳ್
ಹೆಸರು ಕಲ್ಯಾಣಪುರವಾ ಪುರಪ್ರಾಂತದೊಳ್

ಎಸೆವುದಂತೊಂದು ಯೋಜನದ ಪ್ರಮಾಣದೊಳ್
ಶಿವನ ತೋಳ್ತೊಡೆಯ ಪೆಸರಿಟ್ಟರಂದೊಪ್ಪದಿಂ
ಭುವನದೊಳ್ಬಾಹೊರೆನಿಪ್ಪೊಂದು ನಾಮದಿಂ ।

ಎಂದು ಹರಿಹರನು ತನ್ನ ರಗಳೆಯಲ್ಲಿ ಬೊಮ್ಮಯ್ಯನನ್ನು ಕೊಂಡಾಡಿದ್ದಾನೆ. ಬೊಮ್ಮಯ್ಯನು ಮಹೇಶ್ವರನ ನಡುವೆ ಸಾಹಸಾಭರಣವಾಗಿ ಗಂಗಾಧರನ ಗಾಂಭೀರ್ಯದಂತೆ ರಾಜಶೇಖರನ ತೇಜದಂತೆ ಕರ್ಪದಿಯ ಕೀರ್ತಿಯಂತೆ, ಕಾಮಹರನ ಕಾಯ್ಪಿನಂತೆ, ಪುರಹರನ ಪುತಾಪದಂತೆ ಕಾಲಹರನ ಲಿಲೆಯಂತೆ, ಪಂಚಮುಖನ ಪ್ರಪಂಚದಂತೆ ಬೊಮ್ಮಯ್ಯನ ಕುಳಿತ್ತಿದ್ದನೆಂದಿದ್ದಾನೆ. ಬೊಮ್ಮಯ್ಯ ಭಕ್ತರ ಭಕ್ತನಾಗಿ ಶಿವಶರಣರಿಗೆ ಶರಣಾಗಿ ಸ್ನೇಹದಿಂದದ್ದು ನಿಷ್ಠೆಯಿಂದ ಇದ್ದು ಭೂಮಿಯ ಮೇಲೆ ಪುಂಜವಾಗಿ ಹೊಳೆಯುತ್ತಿದ್ದನು. ಜಂಗಮರ ಸಂಗಸುಖಿಯಾಗಿ, ಲಿಂಗಸ್ನೇಹಿಯಾಗಿ, ಸ್ವಾತಿಕ ಭಕ್ತಿಯಿಂದ ಶಿವನನ್ನು ಸದಾ ನಾಲಿಗೆಯಿಂದ ನೆನೆಯುತ್ತಿದ್ದ ಒಬ್ಬ ಶಿವಭಕ್ತನಾಗಿದ್ದನೆಂದು ಹರಿಹರನು ಬೊಮ್ಮಯ್ಯನನ್ನು ಹೊಗಳಿದ್ದಾನೆ.

ಬಾಹೂರ ಬೊಮ್ಮಯ್ಯ ಜೈನರ ಅಣಕಕ್ಕೆ ಉತ್ತರವಾಗಿ ಜೋಳದ ರಾಶಿಯಿಂದ ಶಿವನ ಧ್ವನಿ ಪ್ರಕಟವಾಗುವಂತೆ ಮಾಡಿದ. ಪೆರ್ಮಾಡಿಯ ಆನೆಯನ್ನು ಭಂಗಿಸಿದ, ಕಲ್ಲುನಂದಿಗೆ ಕಬ್ಬು ತಿನ್ನಿಸಿದ ಒಬ್ಬ ಪರಿಶುದ್ಧ ಮನಸ್ಸಿನ ಶಿವಭಕ್ತನಾಗಿದ್ದನು.

ಬಾಹೂರ ಬೊಮ್ಮತಂದೆಯ
ನಾಹಾ ನೆರೆ ಮೆರೆದ ಶಂಭು ನಿಜಭಕ್ತಿಯನು
ತ್ಸಾಹದೊಳೆಮಗೀಗೆ ನತ
ವ್ಯೂಹ ದಯಾವಾರ್ಧಿ ಹಂಪೆಯ ವಿರೂಪಾಕ್ಷಂ

ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣ :

ಬಾಹೂರ ಬೊಮ್ಮಯ್ಯನು ಒಬ್ಬ ಅಪ್ರತಿಮ ಅಪ್ಪಟ ಶಿವಭಕ್ತನಾಗಿದ್ದು ಗುರುಲಿಂಗ ಜಂಗಮರ ಸೇವೆ ಮಾಡುತ್ತಿದ್ದ ಎಂದಿದ್ದಾನೆ.

ಉತ್ತರ ದೇಶದ ಬಸವಲಿಂಗ ವಿರಚಿತ ಭೈರವೇಶ್ವರ ಕಾವ್ಯದ ಕಥಾಸಾಗರ :

ಸೊನ್ನಲಾಪುರದಲ್ಲಿ ಬೊಮ್ಮಯ್ಯನಿಂತೆಂದು ನುಡಿದನು. ಸಿದ್ಧರಾಮಯ್ಯ ಲಕ್ಷದ ಮೇಲೆ ತೊಂಬತ್ತಾಱು ಸಾವಿರ ಗುಡಿಗಳ ಕಟ್ಟಿಸಿದರು. ನನಗೆ ಒಂದು ಲಿಂಗ ಸ್ಥಾನವ ಕಟ್ಟುವುದಕ್ಕೆ ಹಣವಿಲ್ಲವೆಂದು ಚಿಂತಿಸುತ್ತಿರಲು, ಅದನ್ನು ತಿಳಿದ ಸಿದ್ದರಾಮನು ಬೊಮ್ಮಯ್ಯನ

ಕರೆದು ತಮ್ಮ ಅಂಗಳವನಗಿಸಿ ಒಂದು ಕೊಪ್ಪರಿಗೆ ಹೊನ್ನ ತೋಱಲು ಅದಱಿಂದ ಗುಡಿಗಳ ಕಟ್ಟಿಸಿ ಲಿಂಗವ ಪೂಜಿಸಿ ಸುಖದಲ್ಲಿದ್ದನು.

ಡಾ. ಎಂ. ಎಸ್. ಸುಂಕಾಪುರ (ನೂತನ ಪುರಾತನರ ರಗಳೆಗಳು) :

ವಚನಕಾರರು ಎಂದೊಡನೆ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ ಮುಂತಾದ ದೊಡ್ಡ ವಚನಕಾರರ ನೆನಪಾಗುತ್ತದೆ. ಅವರೊಡನೆ ಮಿಕ್ಕ ವಚನಕಾರರು ಇದ್ದಾರೆ ಎನ್ನುವುದು ಸಹ ಎಷ್ಟೋ ಸಲ ಹೊಳೆಯುವುದೇ ಇಲ್ಲ. ಸಾಹಿತ್ಯದ ಸತ್ವಗಾತ್ರವನ್ನು ಅವಲಂಭಿಸಿ ನಿಲ್ಲದು. ಆದ್ದರಿಂದ ವಚನಕಾರರನ್ನು ಅವರು ಬರೆದ ವಚನ ಸಂಖ್ಯೆಯ ಮೊತ್ತವನ್ನು ನೋಡಿ ಬೆಲೆ ಕಟ್ಟುವುದಕ್ಕಿಂತಲೂ ಅವುಗಳಲ್ಲಿರುವ ಸತ್ವವನ್ನು ಗಮನಿಸಿ ತೀರ್ಮಾನಿಸುವುದೇ ಸರಿ. ಬಾಹೂರ ಬೊಮ್ಮಯ್ಯ ಸ್ವಲ್ಪೇ ವಚನಗಳನ್ನು ಬರೆದಿದ್ದರೂ ಅವನ ಬರವಣಿಗೆಯಲ್ಲಿರುವ ಸತ್ವವವನ್ನು ಪರೀಕ್ಷಿಸಿದಾಗ ಅವನು ಮಿಕ್ಕ ಹಿರಿಯ ವಚನಕಾರರಿಗೆ ಯಾವ ದೃಷ್ಟಿಯಿಂದ ನೋಡಿದರೂ ಕಡಿಮೆ ಇಲ್ಲವೆನಿಸದಿರದು.

ಡಾ. ಫ. ಗು. ಹಳಕಟ್ಟಿ (ಸಮಗ್ರ ಸಾಹಿತ್ಯ ಸಂಪುಟಗಳು) :

ಡಾ. ಫ. ಗು. ಹಳಕಟ್ಟಿಯವರು ಸಂಕೀರ್ಣ ವಚನ ಸಂಪುಟದಲ್ಲಿ ಬಾಹೂರ ಬೊಮ್ಮಯ್ಯನ ವಚನಗಳನ್ನು ಸಂಪಾದಿಸಿರುವರು.

ಭಾಷೆಯ ಬಳಕೆಯಲ್ಲಿ ಸರಳತೆ ಹಿತಮಿತಗುಣ, ಔಚಿತ್ಯ ಪ್ರಜ್ಞೆ ಇವು ಬಾಹೂರ ಬೊಮ್ಮನ ವಚನಗಳ ಮುಖ್ಯ ಲಕ್ಷಣಗಳಾಗಿವೆಯೆಂದು ಹೇಳುವರು. ಅವರು ಶಿವಶರಣರ ಚರಿತ್ರೆಯಲ್ಲಿ ಕಟ್ಟಿಕೊಟ್ಟಿರುವ ಬಾಹೂರ ಬೊಮ್ಮಯ್ಯನ ಕಥೆ ಇಂತಿದೆ.

ಬಾಹೂರ ಬೊಮ್ಮಯ್ಯನು ವಿಜಾಪುರ ಜಿಲ್ಲೆಯಲ್ಲಿರುವ ಮುದ್ದೇಬಿಹಾಳ ತಾಲೂಕಿನಲ್ಲಿಯ ಬಾಹೂರು ಎಂಬ ಗ್ರಾಮದವನು. ತೋಟ ಮಾಡುವದೇ ಇವನ ಕಾಯಕವಾಗಿತ್ತು. ಇವನು ತಾನು ಬೆಳೆಸಿದ ಹೂವುಗಳನ್ನು ಅವುಗಳಿಂದ ಮಾಡಿದ ಹಾರಗಳನ್ನೂ ಲಿಂಗಪೂಜೆಗೋಸ್ಕರ ಭಕ್ತಜನಗಳಿಗೆ ಕೊಡುವ ಕಾಯಕವನ್ನು ಮಾಡುತ್ತ ಬಂದನು. ಹೀಗೆ ಶಿವಾರ್ಪಣ ಬುದ್ಧಿಯಿಂದ ಅವನು ಕಾಯಕವನ್ನು ಮಾಡುತ್ತಲಿರುವಾಗಲೇ ಶಿವಾನುಭವಿಗಳ ಸಂಗದಿಂದ ಶಿವಾನುಭವವನ್ನು ಚೆನ್ನಾಗಿ ಪಡೆದವನಾದನು. ಅವನು ವಚನಕಾರನೂ ಇದ್ದಾನೆ. ಅವನು ತನ್ನ ವಚನಗಳಲ್ಲಿ ಷಟ್‌ಸ್ಥಲದ ಮರ್ಮಗಳನ್ನು ಬಹು ಚೆನ್ನಾಗಿ ನಿರೂಪಿಸಿದ್ದಾನೆ. ಭಕ್ತಿಯ ಪ್ರಭಾವವನ್ನು ಕುರಿತು ಅವನು ಹೇಳಿರುವದೇನೆಂದರೆ.

'ಕೊರಡು ಕೊನರಿದಲ್ಲಿ ಬರಡು ಹಯನಾದಲ್ಲಿ ಚಿತ್ರದ ಬೊಂಬೆ ನಿಜ ಕರ್ತೃ ರೂಪಾಗಿ ಬಂದಲ್ಲಿ ಆ ತ್ರಿವಿಧದ ದೃಶ್ಯವೋ, ವಿಶ್ವಾಸಿಯ ಚಿತ್ತವೋ? ಇದು ಭಕ್ತಿಯ ಹೊಲಬಿಗೆ ಮುಖ, ಸಂಗನಬಸವಣ್ಣನ ಸತ್ಯ, ಬ್ರಹ್ಮೇಶ್ವರಲಿಂಗನ ಕೂಡುವ ಕೃತ್ಯ' ಎಂದು ಹೇಳುತ್ತಾನೆ. ಮತ್ತೊಂದು ವಚನದಲ್ಲಿ ಅವನು ಪರಮಾತ್ಮನು ಶಿಲೆ, ಮರ, ಬೆಂಕಿ, ನೀರುಗಳಲ್ಲಿಯೂ ವ್ಯಾಪಿಸಿರುತ್ತಾನೆ. ಆದರೆ ನಿಜವಸ್ತುವು ಅವುಗಳಲ್ಲಿರುವದೆಂಬ ಭಾವವಿರಬೇಕು. ಅಂದರೆ ಪರಮಾತ್ಮನಲ್ಲಿರುವದು ಅವನಿಗೆ ತಿಳಿಯುತ್ತದೆಂದು ಹೇಳುತ್ತಾನೆ. ಅವನು ಈ ಬಗ್ಗೆ ಅನ್ನುವುದೇನೆಂದರೆ 'ಶಿಲೆ, ಮರ, ಮಣ್ಣು, ಬೆಂಕಿ, ನೀರು ಮಳಲುಗಳಲ್ಲಿ ಇಂದು ಸೂರ್ಯ ಇಂತೀ ಒಳಗಾದವರ ಮರೆಯಲ್ಲಿ ತಮ್ಮ ವಿಶ್ವಾಸ ಎಂತಿದ್ದಿತು ಅಂತೆ ವಸ್ತುವಿಪ್ಪುದನರಿತು ಇದು ಸಂಗನಬಸವಣ್ಣ ಸರ್ವಾಧಾರವಾಗಿ ಬಂದ ಸಂಬಂಧ ಬ್ರಹ್ಮೇಶ್ವರಲಿಂಗವು ವಿಶ್ವಾಸದಲ್ಲಿ ತಪ್ಪದಿಪ್ಪನು.

ಬಾಹೂರು ಬ್ರಹ್ಮಯ್ಯನ ಈ ವಿಚಾರಗಳು ಕೆಳಗೆ ವಿವರಿಸಿದ ಅವನ ಪವಾಡಗಳಲ್ಲಿ ಚೆನ್ನಾಗಿ ಪ್ರಕಟವಾಗುತ್ತಿವೆ.

ಒಂದು ದಿನ ಬೊಮ್ಮಯ್ಯನು ಕಲ್ಯಾಣ ಪಟ್ಟಣದಲ್ಲಿ ಜೋಳವನ್ನು ಕೊಂಡುಕೊಳ್ಳಲು ಪೇಟೆಗೆ ಹೋದಾಗ, ಅಲ್ಲಿಯ ಒಬ್ಬ ಜೈನ ವರ್ತಕನು ಜೋಳದ ಗುಂಪೆಯನ್ನು ತನ್ನ ಮುಂದಿಟ್ಟುಕೊಂಡು 'ಈ ಶಂಕರ ಗಂಡನನ್ನು ಕೊಂಡುಕೊಳ್ಳಿರಿ, ಅವನು ಮಾರಿಸಿಕೊಳ್ಳುತ್ತಾನೆ' ಎಂದು ಬೊಮ್ಮಯ್ಯನನ್ನು ಉದ್ದೇಶಿಸಿ ಮೂದಲಿಸಿ ನುಡಿದನು. ಅದಕ್ಕೆ ಬೊಮ್ಮಯ್ಯನು 'ಎಲೈ ಜೈನನೇ, ಶಿವನು ಚೈತನ್ಯರೂಪಾಗಿರುವನಲ್ಲದೆ ಮಾರಿಸಿಕೊಳಬಲ್ಲನೇ?' ಎಂದು ಎನಲು ಅದಕ್ಕೆ ಆ ಜೈನನು 'ಈ ಜೋಳದಲ್ಲಿ ಅಂಥ ಚೈತನ್ಯವು ಇದ್ದರೆ, ಅದರಲ್ಲಿ ಶಿವನನ್ನು ನುಡಿಸು' ಎಂದು ಹೇಳಿದನು. 'ಇದು ಪರಮಾತ್ಮನಲ್ಲಿ ವಿಶ್ವಾಸವಿದ್ದರೆ ಮಾತ್ರ ಸಾಧ್ಯವು. ಇದನ್ನು ನಾನು ನಿನ್ನ ನಿದರ್ಶನಕ್ಕೆ ತರುವೆನು' ಎಂದು ಆ ಬೊಮ್ಮಯ್ಯನು ಹೇಳಿ ಆ ಜೋಳದ ರಾಶಿಗೆ ಪರಮಾತ್ಮನನ್ನು ಧ್ಯಾನಿಸುತ್ತ ಪ್ರದಕ್ಷಿಣವನ್ನು ಹಾಕುತ್ತ 'ಶಂಕರಾ' ಎಂದು ಕರೆದನು. ಆಗ ಶಿವನು ಅದರಲ್ಲಿ ಗಟ್ಟಿಯಾಗಿ 'ಓ' ಎಂದೆನ್ನಲು ಅಲ್ಲಿದ್ದ ಜೈನರು ಬ್ರಹ್ಮಯ್ಯನ ಈ ಅದ್ಭುತವಾದ ಭಕ್ತಿಯನ್ನು ಕಂಡು ಅವನನ್ನು ನಮಸ್ಕರಿಸಿ ಸ್ತುತಿಸಿದರು.

ಬಸವೇಶ್ವರನ ಕಾಲದಲ್ಲಿ ಪರಮಾತ್ಮನು ಯಾರು, ಅವನ ಸ್ವರೂಪವೇನು, ಶಿವ, ವಿಷ್ಣು, ರುದ್ರರಲ್ಲಿ ನಿಜವಾದ ದೇವರಾರು, ಅವನು ಶೂನ್ಯನೋ ಹೇಗೆ, ಎಂಬ ವಿಷಯಗಳು ಶೈವ, ವೈಷ್ಣವ, ಬೌದ್ಧ, ಜೈನರಲ್ಲಿ ಬಹು ಹೆಚ್ಚಾಗಿ ಚರ್ಚೆಯಾಗುತ್ತಿದ್ದವೆಂದು ತೋರುತ್ತದೆ. ಅವರಲ್ಲಿ ಶಿವಶರಣರು ಪರಮಾತ್ಮನೊಬ್ಬನೇ ಇದ್ದಾನೆ, ಅವನು ಸರ್ವ ವ್ಯಾಪಿಯು, ಎಂದು ಪ್ರತಿಪಾದಿಸುವವರಾಗಿದ್ದರು. ಆದರೆ ಜೈನರು ಪರಮಾತ್ಮನ ಸ್ವರೂಪ

ಹಾಗಿರುವದಿಲ್ಲೆಂದು ವಾದಮಾಡುತ್ತಿದ್ದದರಿಂದ ವಿಶ್ವಾಸವಿದ್ದಿದ್ದಾದರೆ ಶಿಲೆ, ಮರ, ಮಣ್ಣು, ಬೆಂಕಿ, ನೀರು, ಮಳಲು ಇವುಗಳಲ್ಲಿಯೂ ಕೂಡ ಪರಮಾತ್ಮನನ್ನು ಕಾಣಬಹುದೆಂಬುದನ್ನು ಬಾಹೂರ ಬೊಮ್ಮಯ್ಯನು ತನ್ನ ವಚನದಲ್ಲಿ ಹೇಳಿದ್ದು ಅದನ್ನು ಅವನು ಪವಾಡದ ಮೂಲಕವೂ ಸಿದ್ಧ ಮಾಡಿ ತೋರಿಸಿದ್ದಾನೆ.

ಮತ್ತೊಂದು ದಿನ ಬೊಮ್ಮಯ್ಯನು ಕಲ್ಯಾಣದಲ್ಲಿದ್ದ ತ್ರಿಪುರಾಂತಕ ದೇವಾಲಯಕ್ಕೆ ಹೋಗುವಾಗ ಆ ಗುಡಿಯ ಕಲ್ಯಾಣದೇವಿ ಎಂಬ ನರ್ತಕಿಯು ನರ್ತನ ಮಾಡುತ್ತಿರಲು ಅಲ್ಲಿದ್ದ ಜನರು ಬೊಮ್ಮಯ್ಯನು ಬರುತ್ತಿದ್ದಾನೆ. ಅವನು ದೇವರ ದರ್ಶನ ಮಾಡಿ ಹೋಗುವವರೆಗೆ ಪಾತ್ರವನ್ನು ನಿಲ್ಲಿಸಬೇಕೆಂದು ಅವಳನ್ನು ತಡೆದರು. ಆಗ ಕೆಲವು ಪರವಾದಿಗಳು ಬೊಮ್ಮಯ್ಯ ಬಂದರೇನು, ಅವನೇನು ಕಲ್ಲನಂದಿಗೆ ಕಬ್ಬನ್ನು ಮೇಯಿಸಿರುವನೋ, ಎಂದು ಅವನ ಭಕ್ತಿಯನ್ನು ಕೀಳು ಮಾಡಿ ನುಡಿಯಲು, ಆಗ ಬೊಮ್ಮಯ್ಯನು ಭಕ್ತರ ಮಹತ್ವವನ್ನು ಇವರಿಗೆ ಮನಗಾಣಿಸಬೇಕೆಂದು ಎಣಿಸಿ, ಹಾಗೆಯೇ ಮಾಡುವೆನೆಂದು ಪೇಟೆಯಲ್ಲಿದ್ದ ಕಬ್ಬನ್ನೆಲ್ಲ ತರಿಸಿ ಗುಡಿಯ ಮುಂದೆ ಒಟ್ಟಿಸಿದನು. ಆಗ ಅವನು ಅತ್ಯಂತ ಭಕ್ತಿಭಾವದಿಂದ ಪರಮಾತ್ಮನ ಧ್ಯಾನ ಮಾಡುತ್ತ ದೇವಾಲಯದಲ್ಲಿದ್ದ ಕಲ್ಲನಂದಿಯನ್ನು ಕುರಿತು 'ಎಲೋ ವೃಷಭೇಂದ್ರನೇ, ಬಾರಯ್ಯ' ಎಂದು ಕರೆಯಲು ಆ ಶಿಲಾಮೂರ್ತಿಯು ಎದ್ದು ಅಲ್ಲಿ ಒಟ್ಟಿದ್ದ ಆ ಕಬ್ಬನ್ನೆಲ್ಲ ತಿಂದು ಬಿಟ್ಟಿತು. ಮುಂದೆ ಬೊಮ್ಮಯ್ಯನು ಈ ತ್ರಿಪುರಾಂತಕ ಕೆರೆಯುದಕವನ್ನು ಸಲಿಸುವುದು ಎಂದು ಹೇಳಲು ಅದು ಒಂದು ಉಸುರಿಗೆ ಆ ಕೆರೆಯ ನೀರನ್ನರ್ಧದಷ್ಟು ಕುಡಿದು ಬಿಟ್ಟಿತು. ಆಗ ಬೊಮ್ಮಯ್ಯನು ಇನ್ನು ಮೇಲೆ ಸಾಕೆನಲು ಆ ನಂದಿಯು ಅಲ್ಲಿಂದ ರಂಗಮಂಟಪಕ್ಕೆ ಬಂದು ತನ್ನ ಕುರುಹಾಗಲೆಂದು ಲಿಂಗಕ್ಕೆ ಅಡ್ಡವಾಗಿ ತನ್ನ ಮೊದಲಿನ ಸ್ಥಳದಲ್ಲಿಯೇ ಕುಳಿತು ಬಿಟ್ಟಿತು. ಹೀಗೆ ಲಿಂಗಭಕ್ತಿಯ ಮಹಿಮೆಯನ್ನು ಬೊಮ್ಮಯ್ಯನು ಜನರ ಗೋಚರಕ್ಕೆ ತಂದುಕೊಟ್ಟನು.

ಬೊಮ್ಮಯ್ಯನು ತನ್ನ ಗ್ರಾಮವಾದ ಬಾಹೂರಲ್ಲಿರುತ್ತಿರಲು ಅಲ್ಲಿ ಒಂದು ದಿನ ರಾಜನಾದ ಪೆರ್ಮಾಡಿರಾಯನ ದಂಡು ಬೀಡುಬಿಟ್ಟಿತ್ತು. ಆಗ ರಾಜನ ಆನೆಯು ಸಂಕೋಲೆಯನ್ನು ಹರಿದುಕೊಂಡು ಓಡುತ್ತ ಬೊಮ್ಮಯ್ಯನಿದಿರಿಗೆ ಬಂದು ಅವನನ್ನು ಹಿಡಿಯಬೇಕೆಂದು ಸೊಂಡಿಲವನ್ನು ನೆಗಹಲು 'ಹೊ ನಿಲ್ಲೆಂದು' ಬೊಮ್ಮಯ್ಯನು ಗರ್ಜಿಸಲು ಅದಕ್ಕೆ ಮುಂದೆ ಹೆಜ್ಜೆ ಇಡಲು ಆಗಲಿಲ್ಲ. ಆಗ ಅದು ಸ್ತಂಭಾಯಮಾನವಾಗಿ ನಿಂತಿತು. ಆಗ ರಾಜನು ಅಲ್ಲಿಗೆ ಬಂದು ಬೊಮ್ಮಯ್ಯನಿಗೆ ಇದು ನಿನ್ನ ಕೇವಲ ಮಾಂತ್ರಿಕ ಶಕ್ತಿಯು, ಸಿದ್ಧಾಟಿಕೆಯು ಎಂದು ಕುಪಿತನಾಗಿ ನುಡಿಯಲು ಅದಕ್ಕೆ ಅವನು 'ಮರುಳೇ ಶರಣರ ಲಿಂಗಸಾಮರ್ಥ್ಯಕ್ಕೆ ಅವುದು ಸರಿಯು?' ಎಂದು ನುಡಿದು ಆ ಆನೆಯನ್ನೆತ್ತಿ ಹಿಂದಕ್ಕೆ ನೂಕಲು ಅದು ಕೆಳಕ್ಕೆ ಬಿದ್ದು ಸತ್ತಿತು. ಪೆರ್ಮಾಡಿರಾಯನು ಬೊಮ್ಮಯ್ಯನಲ್ಲಿದ್ದ

ಆ ಶಕ್ತಿಯನ್ನು ನೋಡಿ, 'ಎಲೋ ದೇವಾ ನಾನು ನಿಜವನ್ನರಿಯದ ಮೂರ್ಖನು, ಭಕ್ತಿಯನ್ನರಿಯದವನು. ನನ್ನನ್ನು ಕ್ಷಮಿಸು, ಮತ್ತು ಆನೆಯನ್ನು ಬದುಕಿಸು' ಎಂದು ಅವನಿಗೆ ಶರಣು ಹೋಗಲು, ಬೊಮ್ಮಯ್ಯನು ಆನೆಗೆ ಪ್ರಾಣವನ್ನಿತ್ತನು. ಈ ಪ್ರಕಾರ ಪರಮಾತ್ಮನಲ್ಲಿಯ ಭಕ್ತರ ಸಹಜ ಭಕ್ತಿಯು ಸಿದ್ದರು ಮತ್ತು ಮಾಂತ್ರಿಕರು ಮಾಡುವ ಸಿದ್ಧಿಗಿಂತಲೂ ಮಿಗಿಲಾದದ್ದೆಂಬುದನ್ನು ಅವನು ಅರಸನಿಗೆ ಸಿದ್ಧ ಮಾಡಿ ತೋರಿಸಿ ಕೊಟ್ಟನು. ಬಾಹೂರ ಬೊಮ್ಮಯ್ಯನ ಹೆಸರು ಗಣಸಹಸ್ರದಲ್ಲಿ ಬಂದಿರುತ್ತದೆ. ಅವನೊಬ್ಬ ವಚನಕಾರನು ಇದ್ದು ಅವನ ವಚನಗಳ ಮುದ್ರಿಕೆಯು 'ಬ್ರಹ್ಮೇಶ್ವರಾ' ಎಂದಿರುತ್ತದೆ.

ಈ ಪ್ರಕಾರ ಬೊಮ್ಮಯ್ಯನು ತನ್ನ ತೋಟಿಗನ ಕಾಯಕದಿಂದ ಶರಣರ ಸೇವೆಯನ್ನು ಮಾಡುತ್ತ ಶಿವಾನುಭವಿಯಾಗಿ ಪುರಾತನ ಶಿವಶರಣರಲ್ಲಿ ಉಚ್ಚಸ್ಥಾನವನ್ನು ಹೊಂದಿದ್ದಾನೆ.

ಅಧ್ಯಾಯ - ೬

ಸಮಾರೋಪ

ಅಧ್ಯಾಯ – ೬

ಸಮಾರೋಪ

ಬಾಹೂರ ಬೊಮ್ಮಯ್ಯ ೧೨ನೇ ಶತಮಾನದಲ್ಲಿ ಬಾಳಿ ಬದುಕಿದ ನಿಷ್ಠಾವಂತ ಶಿವಶರಣ. ಅವನ ಅಸಾಧಾರಣ ಬದುಕನ್ನು ಕಂಡು ಹರಿಹರ, ಭೀಮಕವಿ ಇವರಿಬ್ಬರು ತಮ್ಮ ಕಾವ್ಯಗಳಲ್ಲಿ ಅವನೊಬ್ಬ ಸತ್ಯ, ನಿಷ್ಠೆಯ ಶರಣನೆಂದು ಬಣ್ಣಿಸಿದ್ದಾರೆ. ಬೊಮ್ಮಯ್ಯನಲ್ಲಿ ಭಕ್ತಿಯಷ್ಟೇ ತೀವ್ರವಾದುದು. ಪ್ರಜಾಸತ್ತೇಯ ಪ್ರೇಮ ಪ್ರಭುತ್ವದ ಸಂಕೇತವಾದ ಪೆರ್ಮಾಡಿಯ ಆನೆಯ ಮದವನ್ನು ಪ್ರಜಾಸಂಕೇತವಾದ ಬೊಮ್ಮಯ್ಯನು ಇಳಿಸುತ್ತಾನೆ. ೧೨ನೇ ಶತಮಾನದಲ್ಲಿ ಬಸವಾದಿ ಶರಣರು, ಬಿಜ್ಜಳನ ವಿರುದ್ಧ ಮಾಡಿದ ಕ್ರಾಂತಿಯ ಮುಂದುವರಿಕೆಯಾಗಿ 'ಬಾಹೂರ ಬೊಮ್ಮಯ್ಯ' ನಮಗೆ ಕಾಣುತ್ತಾನೆ. ಅವನಲ್ಲಿ ಶ್ರೀಮತ್ ಗಾಂಭಿರ್ಯವಿರುವಂತೆ ಶರಣ ನಿಷ್ಠೆ ವೀರಶೈವ ಸಿದ್ಧಾಂತದ ಪರಿಕಲ್ಪನೆ ಇವೆಲ್ಲ ಮುಪ್ಪರಿಗೊಂಡಿವೆ. ಆದ್ದರಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬೊಮ್ಮಯ್ಯನಿಗೆ ವಿಶಿಷ್ಟವಾದ ಸ್ಥಾನವಿದೆ.

ನಮಗೆ ದೊರೆತ ಬೊಮ್ಮಯ್ಯನ ೪೧ ವಚನಗಳು ಅವನೊಬ್ಬ ಶ್ರೇಷ್ಠ ಶಿವಶರಣನೆಂಬುದನ್ನು ತೋರಿಸಿಕೊಡುತ್ತದೆ. ಅವನ ವಚನಗಳಲ್ಲಿ ಉಪಮೆ, ರೂಪಕ, ದೃಷ್ಟಾಂತಗಳು ತುಂಬಿಕೊಂಡಿವೆ. ಜನಸಾಮಾನ್ಯರ ಮಧ್ಯದಲ್ಲಿ ಈ ವಚನಕಾರ ಬದುಕಿರುವುದರಿಂದ ಅವನ ವಚನಗಳಲ್ಲಿ ದೇಶಿಯ ನುಡಿಗಟ್ಟುಗಳು ಜನಸಾಮಾನ್ಯರು ಬಳಸುವ ಪದ ಬಳಕೆಗಳು ಹೇರಳವಾಗಿ ದೊರೆಯುತ್ತವೆ. ಷಟಸ್ಥಲವನ್ನು ಕುರಿತು ಹೇಳುವಾಗ ಬೊಮ್ಮಯ್ಯನ ವೀರಶೈವ ಜ್ಞಾನ ನಮಗೆ ಅರಿವಾಗುತ್ತದೆ. ಶರಣರ ನಿಲುವನ್ನು, ಗುರು–ಲಿಂಗ–ಜಂಗಮರ ಪರಿಕಲ್ಪನೆಯನ್ನು ಇವನ ವಚನಗಳು ಸೊಗಸಾಗಿ ಮಾಡಿಕೊಡುತ್ತವೆ. ಅಧ್ಯಾತ್ಮದ ಆಳ, ಎತ್ತರ, ಬಿತ್ತರಗಳು ಇವನ ವಚನಗಲ್ಲಿ ಹೇರಳವಾಗಿ ಸಿಗುತ್ತವೆ. ಒಟ್ಟಿನಲ್ಲಿ 'ಬಾಹೂರ ಬೊಮ್ಮಯ್ಯ'ನು ಒಬ್ಬ ಹೋರಾಟಗಾರ, ಪ್ರಜಾಸತ್ಯೆಯ ಪ್ರತಿಷ್ಠಾಪಕ, ನಿಷ್ಠಾವಂತ ಶಿವಶರಣ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಬೊಮ್ಮಯ್ಯನ ವಚನಗಳ ಸಾಂಸ್ಕೃತಿಕ ಅಧ್ಯಯನ ಮಾಡಿ ಆ ವಚನಗಳ ಆಶಯದೊಂದಿಗೆ ಬೊಮ್ಮಯ್ಯನನ್ನು ಮತ್ತೊಮ್ಮೆ ಕಟ್ಟಿಕೊಡುವ ಅವಕಾಶ ಈ ದಿಶೆಯಲ್ಲಿ ಅಧ್ಯಯನ ಕೈಕೊಂಡವರಿಗೆ ಖಂಡಿತವಾಗಿಯೂ ಇದೆ.

ವಾಙ್ಮಯ ಸೂಚಿ

ವಾಙ್ಮಯ ಸೂಚಿ

೧) ಹರಿಹರನ ರಗಳೆಗಳು

೨) ಭೀಮಕವಿ ಬಸವ ಪುರಾಣ

೩) ಭೈರವೇಶ್ವರ ಕಥಾಮನಿ ಸೂತ್ರ ರತ್ನಾಕರ

೪) ಸಂಕೀರ್ಣ ವಚನ ಸಂಪುಟ ೩

೫) ಲಿಂಗಾಯತ ಮಾಲಗಾರರು

೬) ಡಾ. ಫ. ಗು. ಹಳಕಟ್ಟಿಯವರ ಸಮಗ್ರ ಸಾಹಿತ್ಯ ಸಂಪುಟಗಳು

೭) ಕಣಜ (ಅಂತರ್ಜಾಲ) ಕರ್ನಾಟಕ ಸರಕಾರ

೮) ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣ

೯) ಡಾ. ಎಂ. ಎಸ್. ಸುಂಕಾಪುರ (ನೂತನ ಪುರಾತನರ ರಗಳೆಗಳು)